to take up Demand Nos. 11,25 and 61. I request the Hon, Member to conclude their speeches on these Demands by 5'0 clock so that concerned Ministers can reply to-day itself.

SRI A. LAKSHMISAGAR.--These are Demands of nearly Rs. 25 crores. Many hon. Members would like to speak on Housing. ......

SRI D. DEVARAJ URS.--Sir, in this connection I would like to say one point. Yesterday the Business Advisory Committee has decided that all the Demands will have to be concluded by 31st of this Month. So, kindly bear this point. Don't blame me afterwards. As per the decision of the Business Advisory Committee we cannot extend the period.

Budget Estimates for 1979-80

Demands for Grants

(*Demand Nos : 29* (*Debate Continued*)

ಶ್ರೀ ಅಣ್ಣಾರಾವ್ ಭೀಮರಾವ್ ಪಾಟೀಲ್ (ಆಳಂದ ಕ್ಷೇತ್ರ).—ಸನ್ ಮಾನ್ಯ ಅಧ್ಯಕ್ಷರೆ ಹೌಸಿಂಗ್ ಬಗ್ಗೆ ಬಡ್ಜೆಟ್‌ನಲ್ಲಿ ಏನು ಕೇಳಿದ್ದಾರೆ ಇದು ಬಹಳ ಕಡಿಮೆ ಇದೆ ಎಂದು ನನಗನಿಸುತ್ತದೆ. ಇನ್ನೂ ಸಾಕಷ್ಟು ಕೇಳಬೇಕಾಗಿತ್ತು. ಹೌಸಿಂಗ್ ಪ್ರಾಬ್ಲಮ್ ಏನು ಇರುತ್ತದೆ ಇದು ದೊಡ್ಡ ಪ್ರಾಬ್ಲಮ್ ಎಂದು ಎಷ್ಟೋ ಜನ ಮಾನ್ಯ ಸದಸ್ಯರು ತಿಳಿಸಿರುತ್ತಾರೆ. ಅದರಂತೆ ನನದೂ ಕೂಡ ಇದರ ಬಗ್ಗೆ ಆಪಾದನೆ ಇರುತ್ತದೆ. ಪ್ರತಿಯೊಬ್ಬ 'ಮಾನವನಿಗೂ ಎಷ್ಟು ಅವಶ್ಯಕತೆ ಇದೆ ಎನ್ನುವುದು ಬಹುಶಃ' ಮಾನ್ಯ ಸಚಿವರು ಚೆನ್ನಾಗಿ ತಿಳಿದುಕೊಂಡಿರುತ್ತಾರೆಂದು ತಿಳಿದಿರುತ್ತೇನೆ. ಆದರೂ ಕೂಡ ಅವರು ಏತಕ್ಕೆ ಇಷ್ಟೊಂದು ಕಡಿಮೆ ಹಣವನ್ನು ಕೇಳಿದ್ದಾರೋ ನನಗೆ ಗೊತ್ತಾಗುತ್ತಿಲ್ಲ. ಸ್ವಾಮಿ ನೆನ್ನೆ ದಿವಸ ಬೆಂಗಳೂರಿನಲ್ಲಿ ಹೌಸಿಂಗ್ ಪ್ರಾಬ್ಲಮ್ ಎಷ್ಟರಮಟ್ಟಿಗೆ ಇರುತ್ತದೆ ಎನ್ನುವುದರ ಬಗ್ಗೆ ಬೆಂಗಳೂರಿನ ಸದಸ್ಯರು ಹೇಳಿರುತ್ತಾರೆ, ಅದೇ ರೀತಿಯಲ್ಲಿ ಮಲೆನಾಡು ಭಾಗದಲ್ಲಿ ಯಾವ ರೀತಿ ಮನೆಗಳು ಇರುತ್ತವೆ ಎನ್ನುವುದರ ಬಗ್ಗೆಯೂ ಹೇಳಿರುತ್ತಾರೆ. ಈಗ ನಾನು ಹೇಳತಕ್ಕಂಥಾದ್ದು ಮಾನ್ಯ ಸಚಿವರು ಅರ್ಥಮಾಡಿಕೊಳ್ಳಬೇಕು. ನಮ್ಮ ಕಡೆ ವಿಪರೀತವಾಗಿ ಬಿಸಲು ಇರತಕ್ಕಂಥ ಪ್ರದೇಶವಾಗಿರುತ್ತದೆ. ಇಲ್ಲಿಯೂ ಕೂಡ ಹೌಸಿಂಗ್ ಪ್ರಾಬ್ಲಮ್ಸ್ ಇರುತ್ತದೆ. ಕರ್ನಾಟಕ ರಾಜ್ಯದ ಎಲ್ಲ ಭಾಗಗಳಲ್ಲಿಯೂ ಕೂಡ ಮನೆಗಳ ಅವಶ್ಯಕತೆ ಇರುತ್ತದೆಂದು ಮಾನ್ಯ ಸಚಿವರು ಹೋದಸಲ ಬಡ್ಜೆಟ್ ಅದಿವೇಶನದಲ್ಲಿ ಹೇಳಿದ್ದರು. ಆ ವರ್ಷ ನಮ್ಮ ಕಡೆ ಮಾನ್ಯ ಸಚಿವರು ಪ್ರವಾಸ ಬರಲೇ ಇಲ್ಲ. ಗಿಡಮರಗಳು, ನೆರಳಿನ ಪೊದರುಗಳಿಂದ ತುಂಬಿರತಕ್ಕಂಥ ಬೆಂಗಳೂರಿನಲ್ಲಿ ಜನರು ಬದುಕಬಹುದು, ಆದರೆ ವಿಪರೀತವಾಗಿ ಟೆಂಪರೇಚರ್ ಇರತಕ್ಕಂಥ ನಮ್ಮ ಭಾಗದಲ್ಲಿ ಎಷ್ಟೋ ಜನರು ಮನೆಗಳಿಲ್ಲದೆ ಬಹಳ ಕಷ್ಟವನ್ನು ಪಡುತ್ತಿರುತ್ತಾರೆ. ಮಾನ್ಯ ಅಧ್ಯಕ್ಷರೆ ತಾವು ಹೌಸಿಂಗ್ ಚೇರ್‌ಮನ್‌ರಿದ್ದಾಗ ತಮಗೆ ತಿಳಿಸಿದ್ದೆವು. ತಾವೂ ಕೂಡ ಪ್ರಾಮಿಸ್ ಮಾಡಿದ್ದಿರಿ. ಆ ಭಾಗಕ್ಕೆ ಇಲ್ಲಿಯವರೆಗೂ ಏನೇನು ಅನುಕೂಲಗಳನ್ನು ಮಾಡಿಕೊಟ್ಟಿಲ್ಲ. ಸ್ವಾತಂತ್ರ ಬಂದು ೩೨ ವರ್ಷಗಳಾದರೂ ಆ ಭಾಗದ ಜನರ ಬಗ್ಗೆ ಸರ್ಕಾರದವರು ಏನೇನು ಯೋಚನೆ ಮಾಡುತ್ತಿಲ್ಲವೆಂದು ನನಗನಿಸುತ್ತದೆ. ನಾನು ಕೇಳುತ್ತೇನೆ ಇನ್ನು ಸ್ವಲ್ಪ ದಿವಸದಲ್ಲಿಯೇ ಮಳೆಗಾಲ ಪ್ರಾರಂಭವಾಗುವುದಿರುತ್ತದೆ. ಅಷ್ಟರೊಳಗೆ ಮಾನ್ಯ ಸಚಿವರು ನಮ್ಮ ಭಾಗದಲ್ಲಿ ಅಂದರೆ ಅದರಲ್ಲೂ ನನ್ನ ಕ್ಷೇತ್ರವಾದ ಆಳಂದದ ಕಡೆ ಪ್ರವಾಸವನ್ನು ಕೈಗೊಂಡು ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವಿಪರೀತ ಬಿಸಲಿನ ತಾಪವಿರುವುದರಿಂದ ಅಲ್ಲಿಗೆ ಹಾಕತಕ್ಕಂಥ ಅಧಿಕಾರಿಗಳು ಯಾರೂ ಬರುವುದಿಲ್ಲ.

ಇನ್ನು ಗುಲ್ಬರ್ಗಾ ಜಿಲ್ಲೆಯಲ್ಲಿ ಆಳಂದ ಒಂದು ದೊಡ್ಡ ಟೌನ್ ಇದೆ. ಅದು ಬಹಳ ದೊಡ್ಡದಿರುತ್ತದೆ. ಅಲ್ಲಿ ಒಂದು ಮುನಿಸಿಪಾಲಿಟಿಯು ಇದೆ. ಅಲ್ಲಿ ೨೫ ಸಾವಿರ ಜನಸಂಖ್ಯೆ ಇದೆ ಊರಲ್ಲಿ ಮನೆಗಳನ್ನು ಕಟ್ಟತಕ್ಕಂಥ ಕಾರ್ಯವನ್ನು ಕೈಗೊಳ್ಳಬೇಕೆಂದು ಮಾನ್ಯ ಸಚಿವರನ್ನು ಕಳಕಳಿಯಿಂದ ಕೇಳಿಕೊಳ್ಳು

ತ್ತೇನೆ. ಇಲ್ಲಿ ಹರಿಜನ ಗಿರಿಜನ ೪೮ ತಾಂಡಾಗಳಿವೆ. ಈ ಜನರಿಗೆ ಮನೆಗಳಿಲ್ಲದೆ ವಿಪರೀತವಾಗಿ ತೊಂದರೆಯನ್ನು ಪಡುತ್ತಿದ್ದಾರೆ. ಈ ಜನರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಹೌಸಿಂಗ್ ಪ್ರೋಗ್ರಾಮ್ ಗೆತೆದುಕೊಳ್ಳಬೇಕೆಂದು ಹೇಳುತ್ತೇನೆ.

೧೦–೧೫ ಕಿಲೋಮೀಟರ್ ಬಿಟ್ಟು ಮಹಾರಾಷ್ಟ್ರದ ಬಾರ್ಡರ್ ಏನಿದೆ ಅಲ್ಲಿ ಅಲ್ಲಿನ ಸರ್ಕಾರದವರು ಬಡವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ, ಹಣಕಾಸಿನ ಸಹಾಯ ಕೊಟ್ಟು ಜೋಪಡಿಗಳನ್ನೂ ಸಹ ಅವರು ಕಟ್ಟಿಸಿಕೊಟ್ಟಿದ್ದಾರೆ. ಆದರೆ ನಮ್ಮಲ್ಲಿ ಆ ರೀತಿಯ ಸಹಾಯ ಸಿಗುತ್ತಿಲ್ಲ. ನಮ್ಮಲ್ಲಿ ಸಾಕಷ್ಟು ಅರಣ್ಯ ಇದೆ. ಆದ್ದರಿಂದ ತಕ್ಷಣ ಈ ಬಗ್ಗೆ ಸರ್ಕಾರ ಗಮನ ಹರಿಸಿ ನಮ್ಮ ಭಾಗದ ಜನರಿಗೆ ಅಂದರೆ ಲಂಬಾಣಿ ಜನ ಏನಿದ್ದಾರ, ಹರಿಜನ ಗಿರಿಜನರು ಏನಿದ್ದಾರೆ ಹಾಗೂ ವೀಕರ್ ಸೆಕ್ಷನ್ ಜನ ಏನಿದ್ದಾರೆ ಇವರಿಗೆ ತಕ್ಷಣ ಕೊನೆಯ ಪಕ್ಷದ ಗುಡಿಸಲುಗಳನ್ನು ಹಾಕತಕ್ಕಂತಹ ಯೋಜನೆಯನ್ನು ನಮ್ಮ ಸರ್ಕಾರ ಹಾಕಿಕೊಳ್ಳಬೇಕು. ನಿಮ್ಮ ನಮ್ಮ ಅವಧಿ ಏನು ೫ ವರ್ಷ ಇದೆ, ಆ ೫ ವರ್ಷ ಅವಧಿ ಮುಗಿಯುವುದರೊಳಗಾಗಿ ಮಾಡುತ್ತೀರಾ ? ಅಥವಾ ಅವಧಿ ಮುಗಿದ ನಂತರ ಮಾಡುತ್ತೀರೋ ಎಂಬುದನ್ನು ಕ್ಲಿಯರ್ ಕಟ್ಟಾಗಿ ಹೇಳಬೇಕೆಂದು ಮಾನ್ಯ ಸಚಿವರಲ್ಲಿ ಘಂಟಾಘೋಷವಾಗಿ ಕೇಳುತ್ತೇನೆ. ಹಳ್ಳಿಗಳಲ್ಲಿ ಮನೆಗಳ ಸಮಸ್ಯೆ ಬಹಳ ಇದೆ. ಒಂದು ಊರು ನಿರ್ಮಾಣ ಮಾಡಬೇಕಾದರೆ ಅಲ್ಲಿ ಅವರಿಗೆ ನಿವೇಶನವನ್ನು ಒದಗಿಸಿ ಕೊಟ್ಟಿಲ್ಲ. ಎಲ್ಲದಕ್ಕೂ ಹಣ ಇಲ್ಲದಿದ್ದರೆ ಹಿಂದೆ ಮಹಾರಾಜರ ನಿಜಾಮರ ಕಾಲದಲ್ಲಿ ಧರ್ಮಾರ್ಥ ಕಾಮನ್ ಹಾಲ್‌ನ್ನು ಕಟ್ಟಿಸಿಕೊಡುತ್ತಿದ್ದರು. ಅದರಲ್ಲಿ ಹೆಣ್ಣುಮಗಳು ಸ್ನಾನವನ್ನು ಮಾಡಿ ಬಟ್ಟೆ ಹಾಕಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಜೊತೆಗೆ ರಾತ್ರಿ ಸಮಯದಲ್ಲಿ ಮಲಗುವುದಕ್ಕೂ ಅನುಕೂಲವಾಗುತ್ತದೆ. ಮತ್ತೆ ಮಧ್ಯಾಹ್ನದ ಸಮಯದ ಬಿಸಿಲಿನಲ್ಲಿ ಆ ಹಾಲಿನಲ್ಲಿ ಇರುವುದಕ್ಕೂ ಸಹಾಯವಾಗುತ್ತದೆ. ಮತ್ತೆ ಆ ಏರಿಯಾದಲ್ಲಿರುವವರಿಗೆ ಕಾಮನ್ ಬಾತ್‌ರೂಮುಗಳನ್ನು ಕಟ್ಟಿಸಿ ಕೊಡಬೇಕು. ಪಕ್ಷಿಗಳು ಕೂಡ ತಮ್ಮ ಗೂಡಿನಲ್ಲಿ ಮಲಗಿಕೊಳ್ಳುತ್ತವೆ. ಆದರೆ ಸ್ವಾತಂತ್ರ್ಯ ಬಂದು ೩೨ ವರ್ಷಗಳಾಗಿದ್ದರೂ ಮನುಷ್ಯನಿಗೆ ಇರುವುದಕ್ಕೆ ಮನೆ ಇಲ್ಲ, ಗುಡಿಸಲು ಇಲ್ಲ ಎಂದರೆ ಇದು ಬಹಳ ನಾಚಿಕೆಗೇಡಿನ ಪ್ರಸಂಗ ಎಂಬುದಾಗಿ ಹೇಳಬೇಕಾಗುತ್ತದೆ. ಇದಕ್ಕಾಗಿ ಕಾಮನ್ ಹಾಲ್‌ನ್ನು ನಮ್ಮ ಭಾಗದ ಪ್ರತಿಯೊಂದು ಹಳ್ಳಿಯಲ್ಲೂ ಕಟ್ಟಿಸಿದರೆ ಈ ಮನೆಯ ಸಮಸ್ಯೆ ಬಗೆಹರಿಯುತ್ತದೆ. ನಮ್ಮ ಆಳಂದ ತಾಲ್ಲೂಕಿನಲ್ಲಿ ಬಸ್‌ಸ್ಟ್ಯಾಂಡ್‌ನಲ್ಲೇ ರಾತ್ರಿ ಸಮಯದಲ್ಲಿ ಮಲಗಿಕೊಳ್ಳುತ್ತಾರೆ. ಆ ರೀತಿ ಮಲಗಿಕೊಂಡಿದ್ದವರ ಮೇಲೆ ಶ್ರೀಮಾನ್ ಗುಂಡೂರಾವ್‌ರವರ ಬಸ್ಸು ಹರಿದು ನಾಲ್ಕೈದು ಜನ ಸತ್ತರು. ನಮ್ಮ ಭಾಗದಲ್ಲಿ ಮನೆಯ ಸಮಸ್ಯೆ ಬಹಳ ಇದೆ. ಬಹಳ ಟೆಂಪರೇಚರ್ ಇದೆ. ಇದರ ಬಗ್ಗೆ ಅಧಿಕಾರಿಗಳಾಗಲೀ, ಸಂಬಂಧಪಟ್ಟ ಮಂತ್ರಿಗಳಾಗಲಿ ಇದರ ಕಡೆಗೆ ಗಮನಕೊಟ್ಟಿಲ್ಲ. ನನ್ನನ್ನಾದರೂ ಅಧಿಕಾರಿಗಳು ಬಂದು ಭೇಟಿಯಾಗಿಲ್ಲ. ಇದಕ್ಕಾಗಿ ಮಾನ್ಯ ಸಚಿವರನ್ನು ಅತ್ತಕಡೆ ಬಂದು ಸಂಚಾರ ಮಾಡಿ ಇರತಕ್ಕಂತಹ ಸಮಸ್ಯೆಗಳನ್ನು ನಿವಾರಣೆ ಮಾಡಿ ಎಂಬುದಾಗಿ ಕೇಳಿಕೊಂಡೆ ಆದರೆ ಇದುವರೆಗೂ ಅವರು ಆ ಕಡೆಗೆ ಬರಲೇ ಇಲ್ಲ. ಈ ಮನೆಯ ಸಮಸ್ಯೆಯ ಬಗ್ಗೆ ನಾನು ಕಳೆದ ಅಧಿವೇಶನದಲ್ಲೂ ಕೇಳಿದೆ. ಮಾಡುತ್ತೇನೆಂದು ಆಶ್ವಾಸನೆ ಕೊಟ್ಟರು, ಆ ಆಶ್ವಾಸನೆಯನ್ನು ಪೂರೈಸಿ ಕೊಡುವಂತಹ ಅಧಿಕಾರಿಗಳಾಗಲೀ ಅಲ್ಲಿಗೆ ಬಂದಿಲ್ಲ. ಶಾಸಕನಾದ ನನಗೂ ಭೇಟಿಯಾಗಿಲ್ಲ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂಬುದು ಇದುವರೆಗೂ ತಿಳಿಸಿಲ್ಲ. ಮತ್ತೆ ನಮ್ಮ ಆಳಂದ ತಾಲ್ಲೂಕಿನಲ್ಲಿ ವೀವರ್‍ಸ್ ಜನಸಂಖ್ಯೆ ಬಹಳ ಸಂಖ್ಯೆಯಲ್ಲಿದೆ. ಗುಲ್ಬರ್ಗ ವಿಭಾಗದಲ್ಲಿ ಸಾಕಷ್ಟು ಕೈಗಾರಿಕೆಗಳು ಮುಂದೆ ಬರುತ್ತವೆ. ಅಲ್ಲಿ ಮನೆಗಳನ್ನು ಕಟ್ಟಿಸಿಕೊಡಬೇಕು. ಹಳೇ ಮೈಸೂರು ವಿಭಾಗದಲ್ಲಿ ಅದು ಮಾಡಿದ್ದೇವೆ, ಇದು ಮಾಡಿದ್ದೇವೆ, ಎಂಬುದಾಗಿ ವರದಿಯಲ್ಲಿ ಕೊಟ್ಟಿದ್ದೀರಿ. ನಮ್ಮ ಆಳಂದ್ ಹಾಗೂ ಗುಲ್ಬರ್ಗ ಜಿಲ್ಲೆಯಲ್ಲಿ ಈ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ನಮ್ಮಲ್ಲಿ ವಿಪರೀತ ಸೆಕೆ. ಆದ್ದರಿಂದ ಜರೂರು ಮನೆಗಳನ್ನು ಕಟ್ಟಿಸಿಕೊಡಬೇಕು.

ನಂತರ ಆಸ್ಪತ್ರೆ ವಿಚಾರದಲ್ಲಿ ಹೇಳುವುದಾದರೆ, ಒಂದೊಂದು ರೂಮಿನಲ್ಲಿ ಸಾಕಷ್ಟು ಜನರು ಇರುವುದರಿಂದ ಟಿ.ಬಿ. ರೋಗ ಬರುತ್ತದೆ. ಅವರು ವಿಶಾಲವಾದ ವಾತಾವರಣದಲ್ಲಿ ಬೆಳೆಯತಕ್ಕಂತ ವಾತಾವರಣವನ್ನು ನಿರ್ಮಾಣ ಮಾಡಬೇಕು. ಆಲಂದ್‌ನಲ್ಲಿ ಕೆಲವು ಮೊಹಲ್ಲಾಗಳಿವೆ. ಅಲ್ಲಿ ಕುರಿಗಳನ್ನೂ ಅಲ್ಲೇ ಕಟ್ಟುತ್ತಾರೆ. ದನಗಳನ್ನೂ ಅಲ್ಲೇ ಕಟ್ಟುತ್ತಾರೆ, ರಾತ್ರಿ ಸಮಯದಲ್ಲಿ ಅಲ್ಲೇ ಮಲಗಿಕೊಳ್ಳುತ್ತಾರೆ. ಅಲ್ಲಿ ಯಾವುದೇ ಚರಂಡಿ ವ್ಯವಸ್ಥೆ ಇಲ್ಲ. ಮಾನವನಾಗಿ ಅಲ್ಲಿ ಇರುವುದಕ್ಕೆ ಬದಲಾಗಿ ಜೈಲಿನಲ್ಲೇ ಇದ್ದರೆ ಬಹಳ ಒಳ್ಳೆಯದು. ಏಕೆಂದರೆ ಜೈಲಿನಲ್ಲಿ ಎಲ್ಲಾ ಸೌಲಭ್ಯಗಳೂ ದೊರೆಯುತ್ತವೆ. ಮಾನ್ಯ ಸಚಿವರು ಒಳ್ಳೆಯ ನೀತಿ ಸಜ್ಜನರು ಅವರ ಕಾರ್ಯದಲ್ಲೂ ಕೂಡ ಅಷ್ಟೇ ಸಜ್ಜನರಾಗಿರ

ಬಹುದು ಎಂಬುದಾಗಿ ನಾನು ತಿಳಿದುಕೊಂಡಿದ್ದೆ. ಆದರೆ ಹೈದರಾಬಾದ್ ಕರ್ನಾಟಕದಲ್ಲಿ ಯಾವುದೇ ಕಾರ್ಯಕ್ರಮಗಳನ್ನು ಇದುವರೆಗೂ ತೆಗೆದುಕೊಳ್ಳದೇ ಇರುವುದರಿಂದ ಅವರನ್ನು ನಾವು ತಿಳಿದುಕೊಂಡಿದ್ದು ತಪ್ಪು ಎಂಬುದಾಗಿ ಇವತ್ತು ನನಗನ್ನಿಸುತ್ತಿದೆ ಅಲ್ಲಿನ ಜನರ ಕಷ್ಟ ನಷ್ಟಗಳೇನು ಎನ್ನತಕ್ಕಂತಹದ್ದನ್ನು ತಿಳಿದುಕೊಳ್ಳಲು ಮಾನ್ಯ ಮಂತ್ರಿಯವರು ಇದುವರೆಗೂ ಪ್ರಯತ್ನ ಮಾಡಲಿಲ್ಲ. ನಮ್ಮ ಕಡೆಗೆ ಬಂದಿಲ್ಲ. ೨೦ನೇ ಶತಮಾನದಲ್ಲಿ ಪ್ರಜಾಪ್ರಭುತ್ವವನ್ನು ನಿರ್ಮಾಣ ಮಾಡತಕ್ಕಂತಹ ಸಂದರ್ಭದಲ್ಲಿ ಇಂತಹ ಸಮಸ್ಯೆಗಳನ್ನು ಬಗೆಹರಿಸಲು ಮಂತ್ರಿಗಳೂ ಆ ಕಡೆ ಬಂದಿಲ್ಲ. ಅಧಿಕಾರಿಗಳೂ ಬಂದು ನೋಡಿಲ್ಲ. ಇದನ್ನು ಅತ್ಯಂತ ದುಃಖದಿಂದ ಹೇಳಬೇಕಾಗುತ್ತದೆ. ಅಲ್ಲಿರತಕ್ಕಂತಹ ಜನಸಂಖ್ಯೆ ಏನು. ಯಾವ ರೀತಿ ಅವರು ಬೆಳೆಯಬೇಕು, ಅವರ ಬಗ್ಗೆ ಯೋಚನೆ ಮಾಡದಿದ್ದರೆ, ಶಾಸಕರಾಗಿ ನಾವು ಇಲ್ಲಿ ಏಕೆ ಬರಬೇಕು. ನೀವು ಮಂತ್ರಿಗಳಾಗಿ ಏಕೆ ಇಲ್ಲಿರಬೇಕು ಎಂಬುದಾಗಿ ಕೇಳುತ್ತಿದ್ದೇನೆ. ಬೆಂಗಳೂರು ಸುತ್ತಮುತ್ತಲೂ ಮನೆಗಳನ್ನು ಕಟ್ಟಿಸಿಕೊಡಿ. ನಾನು ಬೇಡ ಎಂಬುದಾಗಿ ಹೇಳುವುದಿಲ್ಲ, ಹಣಕಾಸು ಎಲ್ಲರಿಗೂ ಸೇರಿದ್ದು, ಎಲ್ಲರಿಗೂ ಸರಿಸಮಾನವಾಗಿ ಹಂಚಬೇಕು. ಇದರ ಬಗ್ಗೆ ವಿಚಾರಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳುತ್ತಿದ್ದೇನೆ. ಮನೆಯ ಸಮಸ್ಯೆ ಬಹಳಷ್ಟು ಇದೆ. ಕೂಡಲೇ ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಸೂಕ್ತ ಸಾಲದ ವ್ಯವಸ್ಥೆಯನ್ನು ಮಾಡಿ, ಇಲ್ಲದಿದ್ದರೆ ಬ್ಯಾಂಕಿನವರಿಗೆ ಸರ್ಕಾರ ಷೂರಿಟಿ ಕೊಟ್ಟು ಮನೆಗಳನ್ನು ಕಟ್ಟಿಸಿಕೊಡತಕ್ಕಂತಹ ವ್ಯವಸ್ಥೆಯನ್ನು ತಕ್ಷಣ ಮಾಡಬೇಕು. ಇದರ ಬಗ್ಗೆ ನಮ್ಮ ಭಾಗಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಮ್ಮ ಗುಲ್ಬರ್ಗಾ ಏರಿಯಾದಲ್ಲಿ ಕೈಗಾರಿಕೆಗಳು ಬರುತ್ತಿರುವುದರಿಂದ ಮನೆಗಳು ಸಿಕ್ಕುವುದು ಬಹಳ ಕಷ್ಟವಾಗಿದೆ. ಕೆಲವು ಹಳ್ಳಿಗಳಲ್ಲಿ ಮನೆ ನಿವೇಶನವನ್ನೇ ಇದುವರೆಗೂ ಕೊಟ್ಟಿಲ್ಲ.

ಮತ್ತೆ ಹಳ್ಳಿಗಳಲ್ಲಿ ಕೆಲಸ ಮಾಡತಕ್ಕಂತಹ ಉಪಾಧ್ಯಾಯರು ಹಾಗೂ ಸರ್ಕಾರಿ ನೌಕರರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು. ಹಳ್ಳಿಯಲ್ಲಿರುವ ಉಪಾಧ್ಯಾಯರು ಶಾಲೆಗೆ ಹೋಗುತ್ತಿಲ್ಲ. ಕಾರಣ ಅವರಿಗೆ ಅಲ್ಲಿ ಮನೆ ಇಲ್ಲ. ಈ ರೀತಿಯಾಗಿ ವಾರಕ್ಕೆ ೪-೫ ದಿವಸ ಶಾಲೆಗೆ ಹೋಗುವುದಿಲ್ಲ ಬಹುಶಃ ಅವರು ತಿಂಗಳಲ್ಲಿ ಸಂಬಳ ತೆಗೆದುಕೊಳ್ಳುವ ಮೊದಲ ವಾರದಲ್ಲಿ ಬರುತ್ತಾರೆ ಉಳಿದಂತೆ ಬರುವುದೇ ಇಲ್ಲ. ನನ್ನ ತಾಲ್ಲೂಕಿನ ಒಂದು ಊರಿನಲ್ಲಿರುವ ಒಬ್ಬ ಉಪಾಧ್ಯಾಯರನ್ನು ಕೇಳಿದಾಗ ಅವರು ಇದೇ ಮಾತನ್ನು ಹೇಳಿದರು, ನಮಗೆ ಇರುವುದಕ್ಕೆ ಮನೆ ಇಲ್ಲ, ನಾವು ಎಲ್ಲಿರಬೇಕು ? ಎಂಬುದಾಗಿ ನನ್ನನ್ನೇ ಕೇಳಿದರು. ಅವರಿಗೆ ಮುಖ್ಯವಾಗಿ ಮನೆಗಳನ್ನು ಕಟ್ಟಿಸಿಕೊಡಬೇಕು. ಅವರಿಗೆ ಮುಫತ್ತಾಗಿ ಮನೆಯನ್ನು ಕೊಡುತ್ತಿಲ್ಲ. ಅವರಿಂದ ಅವರ ಸಂಬಳದಲ್ಲಿ ೧೦ ಪರ್ಸೆಂಟ್‌ನ್ನು ತೆಗೆದುಕೊಳ್ಳುತ್ತೀರಿ. ಈ ರೀತಿ ಅವರಿಗೆ ಮನೆಗಳನ್ನು ಒದಗಿಸಿಕೊಟ್ಟರೆ ನಾವು ಏನು ಈ ವಿದ್ಯಾ ಕ್ಷೇತ್ರದಲ್ಲಿ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ ಅದು ಸಫಲವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನಾನು ತಮಿಳುನಾಡಿನಲ್ಲಿ ನೋಡಿದ್ದೇನೆ. ಆಂಧ್ರ ಪ್ರದೇಶದಲ್ಲೂ ನೋಡಿದ್ದೇನೆ. ಅಲ್ಲಿ ಅವರಿಗೆ ಒಳ್ಳೆಯ ಗುಡಿಸಲುಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಮನೆಯ ಸಮಸ್ಯೆಯನ್ನು ಅತ್ಯಂತ ಜರೂರಾಗಿ ಬಗೆಹರಿಸಿದ್ದಾರೆ. ನಾನು ಅಮೇರಿಕಾದಲ್ಲೂ ಕೂಡ ನೋಡಿದ್ದೇನೆ. ಅಲ್ಲಿ ವುಡನ್ ಸೆಟರ್ಸ್‌ನ್ನು ಉಪಯೋಗ ಮಾಡಿಕೊಂಡು ಒಳ್ಳೆಯ ಮನೆಯನ್ನು ಕಟ್ಟಿಸಿಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ನಮ್ಮಲ್ಲೂ ಕೂಡ ಜನರಿಗೆ ಇರತಕ್ಕಂತಹ ಮನೆಯ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕೆಂದು ಹೇಳುತ್ತಿದ್ದೇನೆ.

೨-೦೦ ಪಿ.ಎಂ.

ಅಮೇರಿಕಾ ದೇಶದಲ್ಲಿರುವ ಹಾಗೆ ಇಲ್ಲಿ ಮಾನ್ಯ ಸಚಿವರು ಮಾಡುವುದಕ್ಕಾಗುವುದಿಲ್ಲ ; ಹಾಗೆ ಮಾಡದೇ ಹೋದರೂ ಕೂಡ ಅವರಿಗೆ ಒಂದು ಶೆಲ್ಟರ್ ಸಾಮಾನ್ಯ ರೀತಿಯಲ್ಲಿರುವ ಹಾಗೆ ಮಾಡುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ನಮ್ಮ ಭಾಗ ಹಿಂದುಳಿದ ಭಾಗ, ಇಲ್ಲಿ ಬಹಳಷ್ಟು ಜನರು ವೀಕರ್ ಸೆಕ್ಷನ್ ಇದ್ದಾರೆ ; ಗುಲ್ಬರ್ಗಾ, ಬಳ್ಳಾರಿ, ರಾಯಚೂರು ಮತ್ತು ಬೀದರ್ ಈ ಭಾಗಗಳಲ್ಲಿ ಇರುವ ಜನರಿಗೆ ಸಾಮಾನ್ಯವಾದ ರೀತಿಯಲ್ಲಾದರೂ ಕೂಡ ಒಂದು ಶೆಲ್ಟರ್ ಹಾಕಿಕೊಡಬೇಕು ಎಂದು ಹೇಳುತ್ತೇನೆ. ಅಲ್ಲದೆ ತಮಗೆ ಹೇಳಬೇಕಾದರೆ ನಮ್ಮ ಭಾಗದಿಂದ ಬಸ್ಸಿನಲ್ಲಿ ಚಳ್ಳಕೆರೆತನಕ ಬರುವವರೆಗೂ ಕೂಡ ಆ ಬಸ್ಸಿನ ಭಾಗಿಲುಗಳೆಲ್ಲಾ ಬಹಳ ಶೆಖೆಯಿಂದ ಕೂಡಿತ್ತು ಯಾವ ಭಾಗವೂ ತಣ್ಣಗಿರಲಿಲ್ಲಾ. ಅಂದರೆ ನಮ್ಮ ಈ ಭಾಗಗಳಲ್ಲೆಲ್ಲಾ ಅಷ್ಟು ಮಟ್ಟಿಗೆ ಶೆಖೆ ಇರುವುದರಿಂದ, ಶೆಖೆ ಅಷ್ಟು ವಿಪರೀತವಾಗಿದ್ದುದರಿಂದ ಬಸ್ಸಿನಲ್ಲಿ ಕೂತುಕೊಂಡರೂ ಕೂಡ ಬಹಳ ಶೆಖೆ ಇರುತ್ತಿತ್ತು. ಈ ಕಾರಣದಿಂದ ನೀವು

ಆ ಜನರನ್ನು ಒಬ್ಬ ಮಾನವರಂತೆ ಟ್ರೀಟ್ ಮಾಡಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ನಾವು ಶಾಸಕರದವರು ಅಲ್ಲಿನ ಜನಗಳಿಗೆ ಉತ್ತರ ಕೊಡಬೇಕಾಗಿರುವುದರಿಂದ ಮಾನ್ಯ ಮಂತ್ರಿಗಳು ಒಂದು ಸಾರಿ ನಮ್ಮ ಅಳಂದಕ್ಕೆ ಬಂದು ಅವರ ಕಷ್ಟಸುಖಗಳನ್ನು ಕೇಳಬೇಕು ಎಂದು ಹೇಳುತ್ತೇನೆ. ಹಾಗೆ ತಾವು ಬರುವಾಗ ತಮ್ಮ ಅಧಿಕಾರಿಗಳನ್ನೂ ಕೂಡ ಕರೆದುಕೊಂಡು ಬಂದು ಪರೀಕ್ಷಿಸಿ ಅಲ್ಲಿ ಯಾರಿಗೆ ಮನೆ ಇಲ್ಲ ಅಂಥಾವರಿಗೆ ಮನೆಗಳನ್ನು ಒದಗಿಸುವ ಹಾಗೆ ಏರ್ಪಾಡು ಮಾಡಿಕೊಡಬೇಕು ಎಂದು ಕೇಳುತ್ತೇನೆ. ಈ ಬಗ್ಗೆ ಹೋದಸಲವೂ ಸಹ ಹೇಳಿದ್ದರೂ ಕೂಡ ತಾವು ಗಮನ ಕೊಡಲಿಲ್ಲಾ. ಈವಾಗ ನಾನು ತಮ್ಮನ್ನು ಕೈಜೋಡಿಸಿ ಕೇಳಿಕೊಳ್ಳುತ್ತೇನೆ ನೀವು ನಮ್ಮ ಭಾಗದ ಕಡೆ ಅಲಕ್ಷ್ಯ ಮಾಡದೇ ಒಂದು ಸಾರಿ ಬಂದು ನಮ್ಮ ಭಾಗದ ಜನರ ಕಷ್ಟ ಸುಖಗಳನ್ನು ಕೇಳಬೇಕು. ಇಲ್ಲದೇ ಹೋದರೆ ನಾವು ಶಾಸಕರಾದವರು ಅಲ್ಲಿನ ಜನತೆಯ ಪ್ರತಿನಿಧಿ,ಗಳಾಗಿ ಬಂದಿರುವುದರಿಂದ ಮುಂದೆ ಈ ಬಗ್ಗೆ ಚಳುವಳಿಯನ್ನೋ ಅಥವಾ ಇನ್ನೇನಾದರೂ ಕೂಡ ಮಾಡಬೇಕಾಗುತ್ತದೆ. ನನಗೆ ಹೆಚ್ಚು ಮಾತನಾಡಲು ಸಾಕಷ್ಟು ಟೈಂ ಇಲ್ಲದೇ ಇರುವುದರಿಂದ ಮಾನ್ಯ ಮಂತ್ರಿಗಳು ನಾನು ಮೊದಲು ಹೇಳಿದುದನ್ನು ಗಮನದಲ್ಲಿಟ್ಟುಕೊಂಡು ತಾವು ಈ ಭಾಗದಲ್ಲಿರುವ ಜನಗಳಿಗೆ ಸಾಕಷ್ಟು ಅನುಕೂಲಗಳನ್ನು ಒದಗಿಸಿಕೊಡಬೇಕು ಎಂದು ಹೇಳುತ್ತೇನೆ. ಈ ಮೊದಲು ತಾವು ಚಳಿಗಾಲದ ಭಾಗದವರಿಂದ ಬಂದಂಥಾವರ ಭಾಷಣವನ್ನು ಕೇಳಿದಿರಿ, ಈಗ ಶೆಖೆಯ ಭಾಗದವರಿಂದ ಬಂದಂಥಾವರಿಂದಲೂ ಕೂಡ ಭಾಷಣವನ್ನು ಕೇಳಿದಿರಿ. ಈ ಬಗ್ಗೆ ನಾನು ಹೇಳುವುದು ಏನೆಂದರೆ ಈ ಶೆಖೆಯ ಭಾಗದವರಿಂದಾ ಬಂದಂಥಾ ಭಾಗದವರಿಗೆ ಮೊದಲು ಪಿಫರೆನ್ಸ್ ಕೊಡಬೇಕೆಂದು ಕೇಳಿಕೊಂಡು ಮತ್ತು ತಾವು ಒಂದು ಸಾರಿ ನಮ್ಮ ಭಾಗಕ್ಕೆ ಬಂದು ಆ ಜನಗಳ ಕಷ್ಟಸುಖಗಳನ್ನು ಕೇಳಿಕೊಂಡು ಮತ್ತು ಕಣ್ಣಾರೆ ನೋಡಿಕೊಂಡು ಅವರಿಗೆ ಏನು ಅನುಕೂಲತೆಗಳನ್ನು ಒದಗಿಸಿಕೊಡಬೇಕು ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ಏರ್ಪಾಡು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI M. H. BEKKINALKAR (Sindgi) —Sir, while supporting the demands made by the Ministry I would like to place before the House the following suggestions.

We cannot deny the fact that this is one of the most important essentials of a humanbeing, the house. I am really very sorry that this department is given only Rs. 24½ crores. As has been stated by many hon.ble members housing problem in the State is a great problem. Inspite of the fact that the Government has made good progress, this problem has remained as still a bigger problem and it has to be solved as early as possible. At the outsit I want to give an important suggestion. The Hon'ble Minister for Housing shall have to request the Hon'ble Minister for Revenue who is granting the sites to consider one aspect. He is granting sites in many villages far away from the village proper, where thre is no facility for water, electricity and other facilities. Sites are given on barren lands. There are instances where Janata houses are constructed far away from the villages nobody resides and in due course the houses have fallen. What is the use of making investments on such houses. When we do not have money to do good things, why should we spend on such houses. We invest money on the construction of houses which are not used by the public and go without being cared. I have seen the authorities namely the B.D.Os who are entrusted with the wok for distribution of sites. With great respect to the persons concerned I must say that they have not worked upto the mark. They are

distributing sites either in burial grounds or near nalas, where construction cannot take place and where there are no foundations. How does the Government give the assistance of Rs. 2000 as help for the construction of these houses when there is no durability of foundation ? So, I would like to suggest to Sri Prabhakar to take sufficient care to instruct the B.D.Os to give proper sites in each village. Otherwise the housing problem cannot be solved. It has come to my notice that in my own constituency many houses have collapsed because of no foundations. They are granting sites in burial grounds and in outskirts of villages. Therefore, I suggest that all these ministries must be put together and try to solve the problem while giving sites and constructing houses.

The people are given to understand that the Government is giving houses. So far as I know this scheme is that Government is only advancing money of Rs. 2,000 to help those who are constructing house. It must be abundantly clear because many friends and even myself were under the impression that the Government is constructing houses for the poor. That is not the case. The Government is giving Rs. 2000 for a person who is constructing. That should be made clear to all the officers and public and other leaders so that the work of construction of houses may go on smooth lines. What I have done is in my own constituency I have asked the members to dig deep foundations so that money can be given. There houses have come up to the mark. Where care is not taken about foundations, such houses have collapsed. I request the Hon'ble Minister to instruct the officers and also see for himself whether sites are proper, whether sites have necessary facilities. Otherwise construction of houses has no meaning.

Secondly we have been seeing that there is no order of priority for construction of these houses. I request the Hon'ble Minister to have the list. Recently he had come to my constituency and personally seen how humanbeings are living. There is no water. The person has to enter by actually lying down. There are no windows or doors. With some difficulty he entered those huts I would like the Minister to note these things and to have a priority as to which are the villages that are backward and which are the places that require to be taken up on a priority basis so that the purpose may be served.

The third suggestion that I would like to give is, we have been seeing in the villages persons who already possess sites are given sites again ; persons who own houses again being allotted houses. I request the Minister to see that such mistakes are not repeated by the officers. If in a family there are five members and the house

stands in the name of one person, the other four persons claiming for sites as well as houses. If this is the why in which we tackle the problem, then we are creating more problems than solving them. Under these circumstances I want the B.D.O., the chairman of the Village Panchayat and the M.L.A. of the constituency to be consulted at the time of giving sites and houses so that there may not be such a mistake of giving sites or houses to persons who already possess one.

Many poor people and poor boys would be going without bath for weeks together. I would like to suggest to the Hon'ble Minister to see that public baths are provided for the convenience of the poor people. I need not mention the circumstances under which a poor man lives. Culture, education and good surroundings are required to improve the living conditions of poor people. Sites measuring 20' x 30' that are being allotted are insufficient. Even a small house requires one or two small rooms and some open space to have his cattle. They will not be hygienic also as the open space will not be sufficient for his cattle. I request the Hon'ble Minister to see that bigger sites are given to siteless people.

Sir, in my constituency the Village Accountants, i.e., Grama-sevaks are perhaps under the impression that these sites are to be given only to the siteless, i.e.. only the harijans. We have been seeing that at the cost of Government new harijan carees are coming up. According to me, it is a very bad sign. I want that these sites hould be allotted to diffirent community people along with the harijans so that we can establish a casteless society. At the time of allotting sites, due care should be taken by the officers to distribute sites to defferent community people-one harijan, on muslim, one brahmin and so on-so that there may be homogeneity and all persons belonging to different caste may try to live as one family.

With these few words, I thank the Chair.

ಶ್ರೀ ಕಾಪು ಸಂಜೀವಶೆಟ್ಟಿ (ಕುಂದಾಪುರ್).—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ವಸತಿ ನಗರಾಭಿವೃದ್ಧಿ ಮಂತ್ರಿಗಳು ಈ ಸದನದ ಮುಂದೆ ತಮ್ಮ ಇಲಾಖೆಯ ಸುಮಾರು ೨೪ ಕೋಟಿ ರೂಪಾಯಿಗಳ ಬೇಡಿಕೆಯನ್ನು ಇಟ್ಟಿದ್ದಾರೆ. ನಾನು ಗ್ರಾಮಾಂತರ ಪ್ರದೇಶದಿಂದ ಬಂದವನಾದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿರುವ ವಸತಿ ಗೃಹಗಳ ಬಗ್ಗೆ ಶೋಚನೀಯ ಸ್ಥಿತಿ ಇರುವುದರಿಂದ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನಮಗೆಲ್ಲರಿಗೂ ಗೊತ್ತಿರುವ ಹಾಗೆ ೧೯೭೭–೭೮ನೇ ಅವಧಿಯಲ್ಲಿ ರಾಜ್ಯ ಸರ್ಕಾರದವರು ಮನೆಯ ನಿವೇಶನಗಳನ್ನು ಹಂಚುವ ಕಾರ್ಯಕ್ರಮವನ್ನು ಇಟ್ಟುಕೊಂಡು ಅದನ್ನು ಕಾರ್ಯಗತ ಮಾಡುತ್ತಿದ್ದಾರೆ. ಅದರ ಬಗ್ಗೆ ಅವರ ವರದಿಯಲ್ಲಿಯೂ ಹೇಳಿದ್ದಾರೆ. ಅದರಲ್ಲಿ ಹೇಳಿರುವಂತೆ ರಾಜ್ಯದಲ್ಲಿ ಸುಮಾರು ೮ ಲಕ್ಷಕ್ಕೂ ಮಿಕ್ಕಿದ ಸೈಟುಗಳನ್ನು ಜನರಿಗೆ ಕೊಟ್ಟಿದ್ದಾರೆ, ಹಿಂದುಳಿದ ಹಾಗೂ ಹರಿಜನ ಗಿರಿಜನರಿಗೆ ಸುಮಾರು ೩ ಲಕ್ಷಕ್ಕೂ ಮಿಕ್ಕಿದ ಸೈಟುಗಳನ್ನು ಕೊಟ್ಟ

ದ್ದಾರೆ. ನಾವು ಪ್ರತಿ ಪಕ್ಷದವರಾದರೂ ಇದು ಒಂದು ಉತ್ತಮ ಯೋಜನೆಯಾದ್ದರಿಂದ ಟೀಕೆಗೋಸ್ಕರ ನೋಡದೆ ಸ್ವಾಗತಿಸಬೇಕಾಗಿದೆ. ಗ್ರಾಮಾಂತರ ಪ್ರದೇಶದಲ್ಲಿರುವ ಬಡ ಜನರಿಗೆ ವಸತಿ ಯೋಜನೆ ಬಹಳ ಪ್ರಾಮುಖ್ಯವಾದುದು. ಮನುಷ್ಯನಾದವನಿಗೆ ಅನ್ನ, ಹೊದಿಯಲಿಕ್ಕೆ ಉಡುಪು ಬೇಕೋ ಅದೇ ರೀತಿಯಲ್ಲಿ ಬಡವರಿಗೆ ವಾಸ ಮಾಡುವುದಕ್ಕೆ ವಸತಿ ಯೋಜನೆಯೂ ಅತಿ ಮುಖ್ಯವಾಗಿದೆ. ಇದರಲ್ಲಿ ಮುಖ್ಯವಾಗಿ, ಈ ಯೋಜನೆಯನ್ನು ಜಾರಿಗೆ ತರುವಾಗ ಕೆಲವು ಲೋಪದೋಷಗಳಾಗಿವೆ ಎನ್ನುವುದನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮನೆ ನಿವೇಶನಗಳನ್ನು ಹಂಚುವಾಗ ಹೆಚ್ಚಿನ ಕಡೆಯಲ್ಲಿ ಜನರಿಗೆ ನಿವೇಶನ ದೊರಕದೆ, ಬರೀ ಲೆಕ್ಕಪತ್ರದಲ್ಲಿ ಮಾತ್ರ ನಿವೇಶನ ಉಂಟು ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ಸರ್ಕಾರದವರು ಕೊಟ್ಟಿರುವ ೮ ಲಕ್ಷ ಸೈಟುಗಳನ್ನು ಎಲ್ಲರಿಗೂ ಸರಿಯಾಗಿ ಸೈಟು ಸಿಕ್ಕಿದೆ ಎಂದು ಹೇಳಿದರೆ ನಾನು ನಂಬುವುದಿಲ್ಲ. ಸರ್ಕಾರೀ ಸೈಟುಗಳನ್ನು ತಮ್ಮ ರೆಕಾರ್ಡಿನಲ್ಲಿ ಕೊಟ್ಟಿರಬಹುದು. ಎಷ್ಟೋ ಕಡೆಗಳಲ್ಲಿ ಸೈಟು ಸಿಕ್ಕ ಜನರು ತಮ್ಮ ಸೈಟು ಎಲ್ಲಿದೆ ಎನ್ನುವುದೇ ಗೊತ್ತಿಲ್ಲ. ಆದರೆ ಅಧಿಕಾರಿಗಳು ಇದರ ಬಗ್ಗೆ ರಿಪೋರ್ಟ್ ಮಾತ್ರ ಕೊಟ್ಟಿದ್ದಾರೆ. ಆದ್ದರಿಂದ ಇಂಥ ಸೈಟುಗಳು ಸರಿಯಾದ ರೀತಿಯಲ್ಲಿ ಎಲ್ಲರಿಗೂ ದೊರಕುವಂತೆ ಸರ್ಕಾರದವರು ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಮುಖ್ಯವಾಗಿ ಮೂರು ಗೃಹ ನಿರ್ಮಾಣ ಯೋಜನೆಗಳು ಇವೆ. ಪ್ರಥಮವಾಗಿ ಜನತಾ ವಸತಿ ಯೋಜನೆ, ಇದು ಪ್ರಾಮುಖ್ಯವಾದುದು. ಏಕೆಂದರೆ, ಸರ್ಕಾರದವರು ಜನತಾ ವಸತಿಯ ಕಾಲೋನಿಗಳನ್ನೇ ಮಾಡಿಕೊಂಡು ಮನೆಗಳನ್ನು ಬಡವರಿಗೆ ಕಟ್ಟಿಕೊಟ್ಟಿದ್ದಾರೆ ನಮ್ಮ ಭಾಗದಲ್ಲಿ ಗುಡ್ಡಗಾಡುಗಳು ಇರುವುದರಿಂದ ಜನಗಳು ಒಂದೇಕಡೆ ವಾಸ ಮಾಡುವುದಿಲ್ಲ. ಬೇರೆ ಬೇರೆ ಕಡೆಗಳಲ್ಲಿ ಕೃಷಿಕಾರ್ಮಿಕರು ಇರುವುದರಿಂದ, ಇಂಥವರಿಗೆ ಕಾಲೋನಿಯನ್ನು ಮಾಡಿ ಒಂದು ಕಡೆ ವಾಸ ಮಾಡುವಂತೆ ಮಾಡಿದರೆ, ಇವರು ಬೇರೆ ಬೇರೆ ಕಡೆಗಳಲ್ಲಿ ಕೆಲಸಕ್ಕೆ ಹೋಗುವುದು ತೊಂದರೆಯಾಗುತ್ತದೆ ಕೆಲಸ ಇರುವ ಕಾಲದಲ್ಲಿ ಇವರು ಮಕ್ಕಳನ್ನು ಮನೆಗಳಲ್ಲಿ ಬಿಟ್ಟು ೩-೪ ಮೈಲಿಗಳ ದೂರ ಹೋಗಬೇಕಾಗುತ್ತದೆ. ನಮ್ಮ ಮಾನ್ಯ ಮಂತ್ರಿಗಳೂ ಸಹ ನಮ್ಮ ಭಾಗದಿಂದ ಬಂದವರಾದ್ದರಿಂದ ಅವರಿಗೆ ಈ ವಿಷಯ ಎಲ್ಲಾ ಗೊತ್ತಿದೆ. ಅವರು ಮನೆಗಳನ್ನು ಬಡವರಿಗೋಸ್ಕರ ಕಟ್ಟಿಸುವಾಗ ಒಂದೇ ಕಡೆ ಕಟ್ಟದೆ ಬೇರೆ ಬೇರೆ ಕಡೆಗಳಲ್ಲಿ ಮನೆಗಳನ್ನು ಕಟ್ಟಿಸಿದರೆ ಅವರಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ.

ಸರ್ಕಾರದವರು ಬಡವರಿಗೆ ಮನೆಯ ನಿವೇಶನವನ್ನು ಕೊಟ್ಟ ಸಮಯದಲ್ಲಿ ಇವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಎರಡೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದರಲ್ಲಿ ಒಂದು ಸಾವಿರ ರೂಪಾಯಿಗಳ ಸಬ್ಸಿಡಿ ಎಂತಲೂ, ಒಂದು ಸಾವಿರ ರೂಪಾಯಿಗಳ ಸಾಲ ಎಂದರೂ ಮತ್ತೆ ೫೦೦ ರೂಪಾಯಿಗಳು ಯಾರು ಮನೆ ಕಟ್ಟಿಕೊಳ್ಳುತ್ತಾರೋ ಅವರು ಕೊಡಬೇಕು ಎಂದು ಮಾಡಿದ್ದಾರೆ ಈ ಮನೆಗಳನು ಕಟ್ಟುವ ಕೆಲಸವನ್ನು ಮೊದಲು ಅಧಿಕಾರಿಗಳು ಕಂಟ್ರಾಕ್ಟರುಗಳ ಮೂಲಕ ಮಾಡಿಸುತ್ತಿದ್ದರು. ನಮ್ಮ ಜಿಲ್ಲೆಯಲ್ಲಿ ಉಳಿದ ಜಿಲ್ಲೆಗಳಿಗಿಂತ ಒಳ್ಳೆಯ ಕೆಲಸವನ್ನು ಇವರು ಮಾಡಿದ್ದಾರೆ. ಇದು ಹೋಗಿ, ಜನಗಳೇ ಸ್ವಂತವಾಗಿ ಮನೆಗಳನ್ನು ಕಟ್ಟಿಕೊಳ್ಳಬೇಕು ಎಂದು ಮಾಡಿದರು. ಮನೆಗೆ ಬೇಕಾದ ಮರ, ಹೆಂಚು ಇವುಗಳನ್ನು ಸರ್ಕಾರದ ಡಿಪೋಗಳಿಂದಲೇ ಕೊಡಿಸುವುದು ಒಳ್ಳೆಯದು ಎಂದು ಮಾಡಿದರು, ಇದು ಸ್ವಲ್ಪ ಮಟ್ಟಿಗೆ ಒಳ್ಳೆಯದು ಎಂದು ನಮಗನ್ನಿಸುತ್ತದೆ. ಮಾನ್ಯ ಮಂತ್ರಿಗಳು ಇದರ ಕಡೆಗೆ ಇನ್ನೂ ಸ್ವಲ್ಪ ಗಮನಕೊಟ್ಟು ಬಿ ಡಿ ಒ ಮುಂತಾದ ಅಧಿಕಾರಿಗಳಿಗೆ ಒಳ್ಳೆಯ ರೀತಿಯಿಂದ ಕೆಲಸ ಮಾಡುವಂತೆ ತಿಳಿಸಬೇಕು. ಸೈಟುಗಳ ಸೆಲೆಕ್ಷನ್ ಮಾಡುವಾಗ, ಆಯಾ ಕ್ಷೇತ್ರದ ಶಾಸಕರನ್ನು, ತಾಲ್ಲೂಕು ಬೋರ್ಡುಗಳ ಅಧ್ಯಕ್ಷರನ್ನು, ಸದಸ್ಯರನ್ನು, ಹಾಗೂ ಪಂಚಾಯಿತಿ ಅಧ್ಯಕ್ಷರನ್ನು ಸೇರಿಸಿಕೊಂಡು ಕೆಲಸ ಮಾಡಿದರೆ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಇನ್ನು ಭೂಸುಧಾರಣಾ ಶಾಸನದ ಮೇರೆಗೆ ಪ್ರತಿ ಕೃಷಿ ಕಾರ್ಮಿಕರಿಗೂ ೫ ಸೆಂಟ್ಸ್ ಭೂಮಿ ಸಿಗುವ ಅವಕಾಶ ಉಂಟು. ಇಂತಹವರಿಗೂ ಮನೆ ಕಟ್ಟಿಸಿಕೊಳ್ಳಲು ಎರಡೂವರೆ ಸಾವಿರ ರೂ.ಗಳ ವ್ಯವಸ್ಥೆ ಮಾಡಬೇಕೆಂದು ನಾವು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಂಡಿದ್ದೇವೆ. ಅದನ್ನು ಆಲೋಚನೆ ಮಾಡುವುದಾಗಿ ಹೇಳಿದ್ದರು. ಈ ಬಗ್ಗೆ ಸರ್ಕಾರದ ನಿಲುವು ಏನೆಂಬುದನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕು. ಅದೇ ರೀತಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮೀನುಗಾರರಿಗೂ ೫ ಸೆಂಟ್ಸ್ ಜಾಗ ಕೊಡಲು ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಅಲ್ಲಿ ಜನರ ಒತ್ತಡ ಜಾಸ್ತಿ ಇರುವ ಕಾರಣ

ಎಲ್ಲರಿಗೂ ಸೈಟ್ಸ್ ಕೊಡಲು ಸಾಧ್ಯವಾಗುವುದಿಲ್ಲ. ಅಲ್ಲಿ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರದವರು ಹಣವನ್ನು ಇಟ್ಟಿದ್ದರೂ ಸಹ ಅಲ್ಲಿ ಜಾಗ ಸಿಗುವುದಿಲ್ಲ. ಆದಕಾರಣ ಕೃಷಿ ಕಾರ್ಮಿಕರಿಗೆ ಕೊಡುವಂತೆ ಮೀನುಗಾರರಿಗೂ ೫ ಸೆಂಟ್ಸ್ ಜಾಗ ಕೊಡುವುದು ಒಳ್ಳೆಯದು. ಇವರು ಯಾವಾಗಲೂ ಇದೇ ಕೆಲಸ ಮಾಡುವುದಿಲ್ಲ, ಬೇಸಾಯದ ಕೆಲಸಕ್ಕೂ ಹೋಗುತ್ತಾರೆ. ಆದಕಾರಣ ಇವರೂ ಸಹ ಈ ಕಾನೂನಿನ ವ್ಯಾಪ್ತಿಯಲ್ಲಿ ಬರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಆದಕಾರಣ ಇವರಿಗೂ ೫ ಸೆಂಟ್ಸ್ ಜಾಗ ಕೊಡಲು ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಎಕ್ಸಪೆರಿಮೆಂಟಲ್ ಲೋ ಕಾಸ್ಟ್ ಹೌಸಿಂಗ್ ಸ್ಕೀಮಿನ ಪ್ರಯೋಜನ ಹರಿಜನ ಮತ್ತು ಗಿರಿಜನರಿಗೆ ಮಾತ್ರ, ಬೇರೆಯವರಿಗೆ ಇದರ ಪ್ರಯೋಜನವಿಲ್ಲವೆಂದು ಹೇಳುತ್ತಾರೆ, ಇದು ನಿಜವೇ ಎಂಬುದನ್ನು ಹೇಳಬೇಕು. ಇಲ್ಲಿ ಇಟ್ಟುಕೊಂಡಿದ್ದ ಗುರಿ ೩೫೯೩೫ ಆದರೆ ಕಟ್ಟಿರತಕ್ಕಂಥ ಮನೆಗಳು ಕೇವಲ ೧೮೩೬೮ ಮಾತ್ರ. ಅಂದರೆ ಅರ್ಧದಷ್ಟು ಮಾತ್ರ ಗುರಿ ಸಾಧಿಸಲಾಗಿದೆ. ಸ್ವಂತ ಸೈಟ್ ಇರುವವರಿಗೆ ಈ ಯೋಜನೆಯ ಕೆಳಗೆ ೧೨೫೦ ರೂ.ಗಳನ್ನು ಕೊಟ್ಟರೆ ಅವರು ಮನೆಗಳನ್ನು ಕಟ್ಟಿಸಿಕೊಳ್ಳುತ್ತಾರೆ ಇದಕ್ಕೆ ನಮ್ಮ ಕಡೆ ಜಾಸ್ತಿ ಗಿರಾಕಿಗಳು ಉಂಟು. ಆದಕಾರಣ ಮಾನ್ಯ ಮಂತ್ರಿಗಳು ಇದರ ಕಡೆಗೆ ಗಮನ ನೀಡಬೇಕೆಂದು ಹೇಳುತ್ತೇನೆ.

ಇನ್ನು ನಿರ್ಗತಿಕರಿಗೆ ಮನೆ ಕಟ್ಟಿಸಿಕೊಳ್ಳಲು ೨೫೦ ರೂ.ಗಳನ್ನು ಕೊಡಲಾಗುತ್ತದೆಂದು ಹೇಳಿದ್ದೀರಿ. ಇದರ ಒಂದು ಪ್ರಯೋಜನ ಬಯಲು ಸೀಮೆಯಲ್ಲಿರುವವರಿಗೆ ಸಿಗಬಹುದು; ಆದರೆ ನಮ್ಮ ಕಡೆ ೧೫೦ ಇಂಚು ಮಳೆಯಾಗುವುದರಿಂದ ಅಲ್ಲಿ ಇಷ್ಟು ಅಲ್ಪ ಮೊತ್ತದಲ್ಲಿ ಗುಡಿಸಲು ಅಥವಾ ಮನೆ ಕಟ್ಟಿಕೊಂಡರೆ ಅದು ಉಳಿಯುವುದಿಲ್ಲ ಈ ಮಾತನ್ನು ಮಾನ್ಯ ರಾಮಯ್ಯನವರು ಸಹ ಹೇಳಿದ್ದಾರೆ. ಈಗ ಕಟ್ಟಡದ ಸಾಮಾನುಗಳ ಬೆಲೆ ಹೆಚ್ಚಾಗಿರುವಾಗ ಈ ೨೫೦ ರೂ.ಗಳಲ್ಲಿ ಎಂತಹ ಮನೆ ಕಟ್ಟಬಹುದೆಂದು ತಾವೇ ಯೋಚನೆ ಮಾಡಬಹುದು, ಮುಖ್ಯವಾಗಿ ನಮ್ಮ ಜಿಲ್ಲೆಯಲ್ಲಿ ಈ ಯೋಜನೆಯ ಕೆಳಗೆ ಮನೆ ಕಟ್ಟಿಸಲು ಹೆಚ್ಚಿನ ಪ್ರಾಶಸ್ತ್ಯ ಕೊಡದೆ ಲೋ-ಕಾಸ್ಟ್ ಹೌಸಿಂಗ್ ಸ್ಕೀಮಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ನಮ್ಮ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚಿನ ಹಣವನ್ನು ಕೊಟ್ಟರೆ ಅಲ್ಲಿನ ಬಡವರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ ಅಲ್ಲಿ ನಿವೇಶನ ಇಲ್ಲದವರು ಬಹಳ ಮಂದಿ ಇದ್ದಾರೆ, ಆದಕಾರಣ ಹೆಚ್ಚಿನ ಹಣವನ್ನು ಒದಗಿಸುವುದರ ಮೂಲಕ ಎಲ್ಲರಿಗೂ ನಿವೇಶನ ಸಿಗುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳಿ ನನ್ನ ಎರಡುಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ.ಬಿ. ಶಂಕರರಾವ್ (ಹಿರೇಕೆರೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹನಿರ್ಮಾಣ ಖಾತೆಯ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಈ ಮನೆಗಳನ್ನು ಕಟ್ಟಿಸುವ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಸಾಮಾನ್ಯವಾಗಿ ಆಯಾ ಇಲಾಖೆಗಳ ಬೇಡಿಕೆಗಳನ್ನು ಮಂಡಿಸುವಾಗ ಆಯಾ ಇಲಾಖೆಗಳಿಗೆ ಸಂಬಂಧಪಟ್ಟಂತೆ ಆಗಿರತಕ್ಕಂಥ ಕೆಲಸ ಕಾರ್ಯಗಳ ಬಗ್ಗೆ ವಿವರಗಳನ್ನು ಒಳಗೊಂಡಂಥ ವರದಿಯನ್ನು ನಮಗೆಲ್ಲಾ ಒದಗಿಸುತ್ತಾರೆ. ಅದರಂತೆ ಈ ಇಲಾಖೆಯ ವರದಿಯೂ ಬಂದಿದೆ. ಇದರಲ್ಲಿ ವಾಸ್ತವಿಕವಾದಂಥ ಚಿತ್ರವನ್ನು ಕೊಟ್ಟಿಲ್ಲವೆಂದು ನನಗನ್ನಿಸುತ್ತದೆ. ಉದಾಹರಣೆಗೆ ಇಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡಿನ ಬಗ್ಗೆ ಹೇಳಿದೆ. ಈ ಬೋರ್ಡಿನ ಮೂಲಕ ಎಷ್ಟು ಮನೆಗಳನ್ನು ಕಟ್ಟಿಸಲಾಗಿದೆ, ಎಷ್ಟು ಹಣ ಖರ್ಚಾಗಿದೆ ಎಂಬ ಬಗ್ಗೆ ಹೆಚ್ಚಿನ ವಿವರಗಳನ್ನು ಕೊಟ್ಟಿಲ್ಲ. ಇಲ್ಲಿ ಜನತಾ ಮನೆಗಳ ಬಗ್ಗೆ, ಗುಡಿಸಲುಗಳ ನಿರ್ಮಾಣದ ಬಗ್ಗೆ ಮತ್ತು ಹುಡ್ಕೋ ಸ್ಕೀಮಿನ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ, ಮತ್ತು ಸರ್ಕಾರ ಏನು ಹಣವನ್ನು ನಿಗದಿ ಮಾಡಿತ್ತೋ ಅದರಲ್ಲಿ ಅರ್ಧ ಭಾಗದಷ್ಟು ಹಣವನ್ನು ಮಾತ್ರ ಉಪಯೋಗಿಸಲಾಗಿದೆ. ಪೂರ್ತಿ ಹಣ ಖರ್ಚು ಮಾಡದಿರುವುದಕ್ಕೆ ಕಾರಣವೇನೆಂಬುದನ್ನು ನಾವು ಇಲ್ಲಿ ನೋಡಬೇಕಾಗಿದೆ. ಇದು ಮಾರ್ಚ್ ತಿಂಗಳ ಕೊನೆಯಲ್ಲಿ ತಯಾರು ಮಾಡಿದ ವರದಿಯಲ್ಲ, ವರ್ಷದ ಮಧ್ಯದಲ್ಲಿ ತಯಾರು ಮಾಡಿದ ವರದಿ ಎಂದು ನನಗನ್ನಿಸುತ್ತದೆ. ಏಕೆಂದರೆ, ನನ್ನ ಅನುಭವದಲ್ಲಿ ಪ್ರತಿ ತಾಲ್ಲೂಕಿನಲ್ಲಿಯೂ ಜನತಾ ಮನೆಗಳನ್ನು ಕಟ್ಟುವ ಕಾರ್ಯ ನಡೆದಿದೆ. ಆದಕಾರಣ ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳು ಸರಿಯೋ ಅಥವಾ ಅಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು, ಇನ್ನೊಂದು ಮುಖ್ಯವಾದ ವಿಷಯವೆಂದರೆ, ನಾವು ಈ ಬೇಡಿಕೆಗೆ ಒಪ್ಪಿಗೆ ಕೊಟ್ಟಕೂಡಲೇ ಅಲ್ಲಿ ಕೆಲಸ ಕಾರ್ಯಗಳು ನಡೆಯು

ವುದಿಲ್ಲ. ಅಲ್ಲಿ ಕೆಲಸ ಪ್ರಾರಂಭವಾಗುವುದು ಡಿಸೆಂಬರ್ ತಿಂಗಳ ನಂತರವೇ ಎಂಬ ಮಾತನ್ನು ನಾನು ವಿಷಾದದಿಂದ ಹೇಳಬೇಕಾಗಿದೆ. ಇದು ಮಾನ್ಯ ಮಂತ್ರಿಗಳ ತಪ್ಪು ಎಂದು ನಾನು ಹೇಳುವುದಿಲ್ಲ. ನಾವು ಇಲ್ಲಿ ಒಪ್ಪಿಗೆ ಕೊಟ್ಟಮೇಲೆ, ಈ ಬಗ್ಗೆ ಸರ್ಕಾರದಿಂದ ಜಿಲ್ಲಾಧಿಕಾರಿಯವರಿಗೆ ಕಮ್ಯುನಿಕೇಷನ್ ಹೋದ ತಕ್ಷಣವೇ ಅವರು ಕಾರ್ಯಕ್ರಮ ಹಾಕಿಕೊಳ್ಳಬೇಕು. ಆದರೆ ಡಿಸೆಂಬರ್ ತಿಂಗಳವರೆಗೂ ಕೆಲಸ ಪ್ರಾರಂಭವಾಗದೆ, ಇದಕ್ಕೆ ಮೀಸಲಿಟ್ಟ ಹಣವೆಲ್ಲಾ ಖರ್ಚಾಗದೆ ಉಳಿದು ಹೋಗುತ್ತದೆ. ಮತ್ತು ಕೆಲಸವೂ ಸಹ ಸಮರ್ಪಕವಾದ ರೀತಿಯಲ್ಲಿ ಆಗುವುದಿಲ್ಲ. ಆಶ್ರಯವಿಲ್ಲದವರಿಗೆ ಮನೆ ಕಟ್ಟಿಸಿಕೊಡುವ ವಿಚಾರದಲ್ಲಿ ಆತುರವಾಗಿ ಕೆಲಸ ಮಾಡಬೇಕೆಂಬ ಭಾವನೆಯನ್ನು ಅಧಿಕಾರಿಗಳು ಇಟ್ಟುಕೊಂಡಿಲ್ಲವೆಂದು ನನಗನ್ನಿಸುತ್ತದೆ. ಸರ್ಕಾರದಿಂದ ಕಮ್ಯುನಿಕೇಷನ್ ಹೋದ ಒಂದು ತಿಂಗಳೊಳಗಾಗಿ ಕೆಲಸ ಸಮಂಜಸವಾಗಿ ನಡೆಯುವಂತಾಗಲು ಎಲ್ಲ ಕಡೆಗಳಿಗೂ ಜಿಲ್ಲಾಧಿಕಾರಿಯವರು ಹಣ ಒದಗಿಸಬೇಕು ಮತ್ತು ಕೆಲಸ ಪೂರ್ತಿಯಾಗುವವರೆಗೆ ಅದರ ಮೇಲ್ವಿಚಾರಣೆ ಮಾಡಬೇಕೆಂದು ತಾವು ಅಧಿಕಾರಿಗಳಿಗೆ ತಿಳಿಸಬೇಕು. ಬಡಜನರು ಊಟ, ಬಟ್ಟೆ ಮತ್ತು ವಸತಿ ಇಷ್ಟು ಮಾತ್ರ ಕೇಳುತ್ತಾರೆ. ಇವು ಅಗತ್ಯವಾಗಿ ಎಲ್ಲರಿಗೂ ಬೇಕು. ಆದರೆ ಈ ಮನೆ ಕಟ್ಟಿಸುವ ಕೆಲಸ ತೃಪ್ತಿಕರವಾಗಿ ನಡೆದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಹತ್ತು ಕೋಟಿ ರೂ.ಗಳಲ್ಲಿ ೪ ಕೋಟಿ ೬೦ ಲಕ್ಷ ರಿಲೀಜ್ ಮಾಡಿದ್ದಾರೆ. ಉಳಿದ ನಾಲ್ಕು ಕೋಟಿ ಚಿಲ್ಲರೆ ಬಿಡುಗಡೆ ಮಾಡಿಲ್ಲ. ಇದರ ಅರ್ಥವಾದರೂ ಏನು? ಹುಡ್ಕೋ ಸ್ಕೀಮಿನಲ್ಲಿ ರಿಲೀಜ್ ಮಾಡಿದ ಹಣ ಎರಡೂವರೆ ಕೋಟಿ ರೂ.ಗಳು. ಅದೇ ರೀತಿ ಹೌಸಿಂಗ್ ಬೋರ್ಡಿನವರು ೫ ಕೋಟಿ ರೂ.ಗಳ ಪೈಕಿ ೯೫ ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇದರಲ್ಲಿಯೂ ಸಹ ೫೫ ಲಕ್ಷ ರೂ.ಗಳು ಮಾತ್ರ ಖರ್ಚಾಗಿದೆ ಎಂದು ಹೇಳುತ್ತಾರೆ. ಒಟ್ಟಿನಲ್ಲಿ ಎಲ್ಲ ಕಡೆಯೂ ಅಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡಿದ್ದಾರೆಂದು ನನಗನ್ನಿಸುತ್ತದೆ. ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳನ್ನು ನಾವು ಮಾತ್ರ ನೋಡುವುದಿಲ್ಲ, ಜನರೂ ಸಹ ನೋಡುತ್ತಾರೆ. ಆಗ ಸರ್ಕಾರದಲ್ಲಿ ಕೆಲಸ ಸರಿಯಾಗಿ ನಡೆಯುತ್ತಿಲ್ಲ, ಅಲ್ಲಿ ಏನೋ ನಡೆಯುತ್ತಿದೆ ಎಂಬ ಭಾವನೆ ಅವರಲ್ಲಿ ಮೂಡುತ್ತದೆ. ಆದಕಾರಣ ಇದರ ಬಗ್ಗೆ ಮಾನ್ಯ ಮಂತ್ರಿಗಳು ಎಚ್ಚರಿಕೆ ವಹಿಸಬೇಕೆಂದು ಹೇಳುತ್ತೇನೆ.

ಇನ್ನು ಜನತಾ ಮನೆಗಳನ್ನು ಕಟ್ಟಿಸುವ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ ಈ ಯೋಜನೆಯ ಕೆಳಗೆ ಮನೆ ಕಟ್ಟಿಸುವವರು ಸ್ಥಳೀಯವಾಗಿ ಸಿಗತಕ್ಕಂಥ ಕಟ್ಟಿಗೆ, ಇಟ್ಟಿಗೆ, ಕಲ್ಲು ಮುಂತಾದ ಪದಾರ್ಥಗಳನ್ನು ಉಪಯೋಗಿಸಿ ಕಟ್ಟಡ ಕಟ್ಟಲು ಅವಕಾಶ ಕಲ್ಪಿಸಿಕೊಡಬೇಕು. ಆದರೆ ಜಿಲ್ಲಾಧಿಕಾರಿಯವರು ೬೦–೧೦೦ ಮೈಲುಗಳ ದೂರದಲ್ಲಿರುವ ಇಂತಹ ಡಿಪೋನಲ್ಲಿಯೇ ಕಟ್ಟಿಗೆ ತರಬೇಕೆಂದು ಹೇಳುತ್ತಾರೆ, ಇದರಿಂದ ಕೆಲಸ ಜಾಗ್ರತೆಯಾಗುವುದಿಲ್ಲ ಮತ್ತು ಜನರಿಗೂ ತೊಂದರೆಯಾಗುತ್ತದೆ. ಆದಕಾರಣ ಈ ಬಗ್ಗೆ ಅಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಲೋ ಇನ್‌ಕಮ್ ಗ್ರೂಪಿನ ಯೋಜನೆಯಲ್ಲಿ ಒಂದು ಮನೆ ಕಟ್ಟುವುದಕ್ಕೆ ಸರ್ಕಾರದವರು ೨,೫೦೦ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದರಲ್ಲಿ ೧,೦೦೦ ರೂಪಾಯಿಗಳನ್ನು ಸಬ್ಸಿಡಿ ಎಂತಲೂ, ೧,೦೦೦ ರೂಪಾಯಿಗಳ ಬಡ್ಡಿ ರಹಿತ ಸಾಲವನ್ನು, ಮಿಕ್ಕ ೫೦೦ ರೂಪಾಯಿಗಳನ್ನು ಮನೆಗಳನ್ನು ಕಟ್ಟಿಕೊಳ್ಳತಕ್ಕವರು ಹಣದ ರೂಪವಾಗಿಯಾದರೂ ಅಥವಾ ತಾವೇ ಸ್ವಂತ ಕೆಲಸ ಮಾಡಿ ಕೂಲಿ ರೂಪದಲ್ಲಿ ಕೊಡಬೇಕೆಂದು ಯೋಜನೆಯನ್ನು ಸರ್ಕಾರದವರು ಹಾಕಿಕೊಂಡಿದ್ದಾರೆ.

೨.೩೦ ಪಿ.ಎಂ.

ಇನ್ನು ಬಡವರು ಗುಡಿಸಲುಗಳನ್ನು ಹಾಕಿಕೊಳ್ಳುವುದಕ್ಕೆ ೫೦೦ ರೂಪಾಯಿಯನ್ನು ಕೊಡತಕ್ಕ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಯಾವಾಗಲೂ ಹೊಟ್ಟೆಬಟ್ಟೆಗಾಗಿ ದುಡಿಯುವುದಕ್ಕೆ ತಮ್ಮ ಸಮಯವನ್ನು ಉಪಯೋಗಿಸತಕ್ಕ ತೀರಾ ಕಡು ಬಡವರಿಗೆ ಈ ಗುಡಿಸಲುಗಳ ಯೋಜನೆಯನ್ನು ಸಾಕಷ್ಟು ಪ್ರಚಾರ ಮಾಡಬೇಕು. ಇದನ್ನು ಜನಪ್ರಿಯ ಮಾಡಬೇಕು. ಬೀದಿಗಳಲ್ಲಿ ತಿರುಗತಕ್ಕ ಜನಗಳಿಗೆ ಇದರಿಂದ ಒಂದು ಆಶ್ರಯ ಸಿಕ್ಕಿದಂತಾಗುತ್ತದೆ.

ಇನ್ನು ಸೈಟುಗಳನ್ನು ವಿಂಗಡಿಸಲು ಜಮೀನು ಅಕ್ವೈರು ಮಾಡಿಕೊಳ್ಳತಕ್ಕ ವಿಚಾರದಲ್ಲಿ ಒಂದೆರಡು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಈಗ ಸರ್ಕಾರದವರು ಜನತಾ ಮನೆಗಳಿಗೆ ನಿವೇಶನಗಳಿಗಾಗಿ ಜಮೀನನ್ನು ಅಕ್ವೈರ್ ಮಾಡುತ್ತಾರೆ. ನಿವೇಶನಗಳಿಗೆ ಬೇಕಾದ ಜಮೀನನ್ನು ಹುಡುಕುವ ಕಾಲದಲ್ಲಿ ಏನು ನಡೆಯುತ್ತದೆಂದರೆ ಯಾರು ತಮಗೆ ಆಗುವುದಿಲ್ಲ, ಯಾವ ಜಮೀನು ನಿವೇಶನ ವಿಂಗಡಿಸುವುದಕ್ಕೆ

ಯೋಗ್ಯವಾಗಿರುವುದಿಲ್ಲ ಅಂಥ ಜಮೀನನ್ನು ಅಕ್ವೈರ್ ಮಾಡಿಕೊಳ್ಳುತ್ತಾರೆ. ಕೆಲವು ಸಂದರ್ಭಗಳಲ್ಲಿ ಸ್ಮಶಾಣಗಳ ಹತ್ತಿರ, ಕೆರೆಯ ಅಂಗಳಗಳಲ್ಲಿ ಹಳ್ಳಕೊಳ್ಳಗಳಲ್ಲಿ, ಗೋಮಾಳಗಳನ್ನು ಸೈಟುಗಳಾಗಿ ವಿಂಗಡಿಸಲು ಜಮೀನನ್ನು ಅಕ್ವೈರ್ ಮಾಡಿಕೊಳ್ಳುತ್ತಾರೆ. ಇವುಗಳನ್ನು ಅಕ್ವೈರ್ ಮಾಡಿಕೊಳುವಾಗ ನಿಧಾನವಾಗುತ್ತದೆ. ಇದರಿಂದಾಗಿ ಮನೆ ನಿವೇಶನ ಇಲ್ಲದವರಿಗೆ ನಿವೇಶನವೂ ಸಿಗುವುದಿಲ್ಲ ಅವರಿಗೆ ಮನೆಗಳೂ ಸಿಕ್ಕುವುದಿಲ್ಲ. ಈ ಯೋಜನೆ ಕಾರ್ಯಗತವಾಗುವುದಕ್ಕೆ ನಿಧಾನವಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಬಿ.ಡಿ.ಓ. ಗಳಿಗೆ ಸರ್ಕಾರದವರು ಸ್ಟ್ರಿಕ್ಟ್ ಆಗಿ ಹೇಳಬೇಕು ರೂಲ್ಸ್ ಪ್ರಕಾರ ಯಾವ ಜಮೀನಿನಲ್ಲಿ ಸಂಲಭವಾಗಿ ಕಡಿಮೆ ಸಮಯದಲ್ಲಿ ನಿವೇಶನಗಳಿಗೆ ಜಮೀನನ್ನು ಅಕ್ವೈರ್ ಮಾಡುವುದಕ್ಕೆ ಸಾಧವಿದೆಯೋ ಅಂಥ ಜಮೀನುಗಳನ್ನು ಮಾತ್ರ ಅಕ್ವೈರ್ ಮಾಡಲು ಕೈಹಾಕಬೇಕು. ಉಳಿದ ಕಡೆ ಹೋಗಬಾರದು. ಎಂದು ಅಧಿಕಾರಿಗಳಿಗೆ ಆದೇಶಗಳನ್ನು ಕೊಡಬೇಕು. ನಮ್ಮ ದೇಶದಲ್ಲಿ ಈ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಬಡವರಿಗೆ ಮನೆ ಕಟ್ಟುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದು ಸ್ತುತ್ಯಾರ್ಹವಾದ ಕಾರ್ಯಕ್ರಮ. ನಾನು ಕಳೆದ ೨೫ ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿದ್ದೇನೆ. ನಾನು ಈ ಸದನಕ್ಕೆ ೫ನೇ ಸಲ ಆರಿಸಿ ಬಂದಿದ್ದೇನೆ. ನಾನು ಸಮಾಜವಾದದ ಬಗ್ಗೆ ನಂಬಿಕೆಯುಳ್ಳವನಾಗಿದ್ದೇನೆ. ಏತಕ್ಕೆಂದರೆ ಈಗ ಸಮಾಜವಾದದ ತತ್ವದ ಪ್ರಕಾರ ಬಡಜನರಿಗೆ ಸ ಲಭ್ಯ ಸಿಕ್ಕುತ್ತಿದೆ. ಆದರೆ ಈ ಬಡಜನರಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ಕೆಲಸ ನಿವೇಶನ ಕೊಡತಕ್ಕ ಕೆಲಸ ಸಿಸ್ಟಮ್ಯಾಟಿಕ್ ಆಗಿ ನಡೆದಿಲ್ಲ. ಆದರೆ ಏನೋ ಸ್ವಲ್ಪ ಕೆಲಸ ನಡೆಯುತ್ತಿದೆಯೆಂದು ನನಗೆ ಸಮಾಧಾನ ನಾನು ಮಾನ್ಯ ಮಂತ್ರಿಗಳಿಗೆ ಕೇಳುತ್ತೇನೆ ಈ ಮನೆ ಕಟ್ಟುವ ಕಾರ್ಯ ಏನಿದೆ ಇದನ್ನು ಮಾನ್ಯ ಮಂತ್ರಿಗಳು ಖುದ್ದಾಗಿ ಸ್ಥಳಕ್ಕೆ ಬೇಟಿ ಕೊಟ್ಟು ನೋಡಿಕೊಂಡು ಬರಬೇಕು, ಈ ಮನೆಗಳನ್ನು ಕಟ್ಟುವ ಕಾರ್ಯಕ್ರಮ ಸರಿಯಾಗಿ ನಡೆಯುತ್ತದೆಯೋ ಹೇಗೆ ಎಂಬುದನ್ನು ಮಾನ್ಯಮಂತ್ರಿಗಳು ಖುದ್ದಾಗಿ ಪರಿಶೀಲಿಸಬೇಕು, ಇಲಾಖೆಯವರೇನೋ ಮನೆ ಕಟ್ಟುವುದಕ್ಕೆ ಹಣವನ್ನು ಕೊಡುತ್ತಾರೆ ಅದು ಸರಿಯಾಗಿ ಸದುಪಯೋಗವಾಗುತ್ತಿದೆಯೋ ಇಲ್ಲವೇ ಅದನ್ನು ನೋಡಬೇಕು. ಮತ್ತು ಈ ಗೃಹನಿರ್ಮಾಣ ಯೋಜನೆಗೆ ಸಂಬಂಧಪಟ್ಟ ಹಾಗೆ ಕೆಲವು ಕಟ್ಟಡಗಳ ಕೆಲಸ ನಮ್ಮ ರಾಜ್ಯದಲ್ಲಿ ಅನೇಕ ಕಡೆ ನಡೆಯುತ್ತಿದೆ, ನಾನು ಅದನ್ನು ನೋಡಿಕೊಂಡು ಬಂದಿದ್ದೇನೆ. ಕರ್ನಾಟಕ ಗೃಹನಿರ್ಮಾಣ ಮಂಡಲಿಯವರು ಸುಮಾರು ೨೦ ವರ್ಷಗಳ ಹಿಂದೆ ನಾನು ಅಸೆಂಬ್ಲಿಗೆ ಬಂದಾಗ ಕೆಲವು ಕೆಲಸ ಪ್ರಾರಂಭ ಮಾಡಿದ್ದಾರೆ. ಇಲ್ಲಿಯುವರೆಗೆ ಅವರು ಸುಮಾರು ೪೯,೦೦೦ ಮನೆಗಳನ್ನು ಕಟ್ಟಿದ್ದಾರೆ. ಅದಕ್ಕೆ ೫೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಶಾಸನಬದ್ಧವಾದ ಒಂದು ಗೃಹನಿರ್ಮಾಣ ಮಂಡಲಿ ಇದ್ದರೂ ಕೂಡ ಅದಕ್ಕೆ ಸಾಕಷ್ಟು ಹಣ ಇಲ್ಲ. ಮತ್ತು ಅದಕ್ಕೆ ಇರತಕ್ಕ ಅಧಿಕಾರವೂ ಕಡಿಮೆ. ಸರ್ಕಾರವನ್ನು ಕೇಳಿ ಅದು ಹಣ ಪಡೆಯಬೇಕು ಈಗ ಸುಮಾರು ೨½ ವರ್ಷದಿಂದ ಗೃಹನಿರ್ಮಾಣ ಮಂಡಲಿಯವರು ಯಾವ ಹೊಸ ಕಾರ್ಯವನ್ನೂ ತೆಗೆದುಕೊಳ್ಳಬಾರದೆಂದು ಸರ್ಕಾರದವರು ಆಜ್ಞೆಯನ್ನು ಹೊರಡಿಸಿದ್ದಾರೆ, ಯೋಜನೆಗಳ ಮುಖಾಂತರ ಬರತಕ್ಕ ಹಣದಲ್ಲಿ ಈಗಾಗಲೇ ಮೂರು ನಾಲ್ಕು ವರ್ಷಗಳಿಂದ ಕಟ್ಟಿಸುವುದಕ್ಕೆ ಪ್ರಾರಂಭಿಸಿದಂತಹ ಮನೆಗಳನ್ನು ಪೂರ್ತಿ ಮಾಡುವುದಕ್ಕೆ ಆಗಿಲ್ಲ. ಇತರೇ ಕೆಲಸಗಳಿಗೆ ಹಣ ಸಿಕ್ಕುವುದಿಲ್ಲ. ಇದು ವರ್ಷ ವರ್ಷ ನಿಧಾನವಾಗುವುದರಿಂದ ಕಟ್ಟಡದ ಬೆಲೆ ಜಾಸ್ತಿಯಾಗುತ್ತದೆ. ಯಾಕೆಂದರೆ ಸಿಮೆಂಟ್ ಬೆಲೆ ಜಾಸ್ತಿಯಾಗುತ್ತದೆ ಕಟ್ಟಡ ಕಟ್ಟುವ ಸಾಮಾನುಗಳ ಬೆಲೆ ಜಾಸ್ತಿ ಆಗುತ್ತದೆ. ಆದ್ದರಿಂದ ಕಟ್ಟಡಗಳ ಕಾಸ್ಟ್ ಹೆಚ್ಚಾಗುತ್ತದೆ, ಇದರಿಂದಾಗಿ ಅವುಗಳನ್ನು ಪೂರೈಸುವುದಕ್ಕಾಗುವುದಿಲ್ಲ. ಇನ್ನು ಹುಡ್ಕೋ ಯೋಜನೆಯಿಂದ ಬರತಕ್ಕಂತಹ ಹಣದಿಂದ ಮನೆಯನ್ನು ಕಟ್ಟಿದರೂ ಸಹ ಹಿಂದೆ ಕಟ್ಟಿ ಅರ್ಧಂಬರ್ಧ ಆಗಿರತಕ್ಕ ಕಟ್ಟಡಗಳನ್ನು ಪೂರ್ತಿ ಮಾಡುವುದಕ್ಕೆ ನಿಧಾನವಾಗುತ್ತದೆ. ಯೋಜನೆ ಮುಖಾಂತರ ಕಟ್ಟತಕ್ಕಂತಹ ಮನೆಗಳಿಗೆ ೩½ಕೋಟಿ ರೂಪಾಯಿ ಬೇಕಾಗುತ್ತದೆ ಆದ್ದರಿಂದ ವರ್ಷ ವರ್ಷ ಸರ್ಕಾರದವರು ಕೊಡತಕ್ಕ ಹಣ ಸ್ಪಿಲ್ ಓವರ್ ವರ್ಕ್‌ಗೇ ಸಾಕಾಗುವುದಿಲ್ಲ. ಈ ಯೋಜನೆಗೆ ಕೇಂದ್ರ ಸರ್ಕಾರದವರು ಹಣ ಕೊಡುತ್ತಾರೆ, ಅದರ ಜೊತೆಗೆ ರಾಜ್ಯ ಸರ್ಕಾರದವರೂ ಕೊಡುತ್ತಾರೆ. ಆದರೂ ಈ ಯೋಜನೆಯನ್ನು ಪೂರ್ತಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಗೃಹನಿರ್ಮಾಣ ಮಂಡಲಿಗೆ ಸಾಲಾ ತೆಗೆದುಕೊಳ್ಳಲು ರೂಲ್ಸ್‌ಗಳನ್ನು ಬದಲಾಯಿಸಬೇಕು. ಈ ಗೃಹನಿರ್ಮಾಣ ಮಂಡಲಿಗೆ ಈ ವರ್ಷ ಪ್ಲಾನ್ ಮತ್ತು ನಾನ್ ಪ್ಲಾನ್ ಮುಖಾಂತರ ೨,೫೫,೦೦,೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ ಆದರೆ ಈ ಹಳೇ ಕೆಲಸಕ್ಕೆ ಎಂದರೆ ೩ ವರ್ಷ ೬ ವರ್ಷಗಳಿಂದ ಕೆಲಸಗಳನ್ನು ಮುಂದುವರಿಸಿಕೊಂಡು ಬಂದಿರತಕ್ಕ ಕೆಲಸಕ್ಕೆ ಸುಮಾರು ೬ ಕೋಟಿ ರೂಪಾಯಿಗಳು ಬೇಕಾಗು

ತ್ತದೆ. ಹೀಗಾದರೆ ಈ ಮನೆಗಳ ಕೆಲಸ ಮುಗಿಯುವುದು ಯಾವಾಗ? ಹೊಸ ಮನೆಗಳನ್ನು ಕಟ್ಟುವುದು ಯಾವಾಗ? ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ಈ ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಸಾಲವನ್ನು ಪಡೆಯುವುದಕ್ಕೆ ಸರ್ಕಾರದವರು ಗ್ಯಾರಂಟಿ ಕೊಡಬೇಕು. ಸರ್ಕಾರದವರು ೬ ತಿಂಗಳುಗಳಿಗೆ ಮಾತ್ರ ಗ್ಯಾರಂಟಿ ಕೊಡುತ್ತಾರೆ. ಇಂಥ ಸಂದರ್ಭದಲ್ಲಿ ಯಾರು ಮನೆಗಳನ್ನು ಕಟ್ಟುವುದಕ್ಕೆ ಮುಂದೆ ಬರುತ್ತಾರೋ ಇಂತಿಷ್ಟು ಹಣವನ್ನು ಹೌಸಿಂಗ್ ಬೋರ್ಡ್‌ನಲ್ಲಿ ಡಿಪಾಸಿಟ್ ಇಡಬೇಕೆಂದು ಇದೆ. ಆದ್ದರಿಂದ ಅಂಥಹವರ ಮೇಲೆ ೧ ಪರ್‌ಸೆಂಟ್ ಬಡ್ಡಿ ಹೆಚ್ಚಾಗುತ್ತದೆ. ಸರ್ಕಾರದವರು ಗ್ಯಾರಂಟಿ ಕೊಡುವಾಗ ಸ್ವಲ್ಪ ಹೆಚ್ಚು ಕಾಲಾವಧಿಯವರೆಗೆ ಗ್ಯಾರಂಟಿ ಕೊಡಬೇಕು. ಹೌಸಿಂಗ್ ಬೋರ್ಡಿನಲ್ಲಿ ಕೆಲವು ಮನೆಗಳನ್ನು ಅಸಮರ್ಪಕವಾಗಿ ಮಾಡಿದ್ದಾರೆ. ಮಿಸ್‌ಮೇನೇಜ್‌ಮೆಂಟ್ ಆಗಿದೆ. ಇದನ್ನು ಹಲವಾರು ಜನರು ಹೇಳುತ್ತಿದ್ದಾರೆ. ಮೊದಲು ಮನೆಗಳನ್ನು ಕಟ್ಟಲು ಡಿಪಾಸಿಟ್‌ಗಳನ್ನು ಇಟ್ಟು ಮುಂದೆ ಬಂದವರಿಗೆ ೮,೦೦೦ ರೂಪಾಯಿ ಬೆಲೆ ಬಾಳುವ ಮನೆಗಳನ್ನು ೧೪,೦೦೦ ರೂಪಾಯಿಗಳೆಂದು, ೧೩,೦೦೦ ಬೆಲೆ ಬಾಳತಕ್ಕ ಮನೆಗಳನ್ನು ೨೬,೦೦೦ ರೂಪಾಯಿಗಳೆಂದೂ, ೨೬,೦೦೦ ಬೆಲೆ ಬಾಳತಕ್ಕ ಮನೆಗಳನ್ನು ೫೨,೦೦೦–೯೦,೦೦೦ ರೂಪಾಯಿಗಳೆಂದೂ ಮಾಡಿದ್ದಾರೆ. ಹೀಗಾದರೆ ಮನೆಗಳನ್ನು ಕಟ್ಟಿಸಿಕೊಳ್ಳುವುದಕ್ಕೆ ಮುಂದೆ ಬಂದವರ ಗತಿ ಏನು. ಇದರಿಂದಾಗಿ ಎಷ್ಟೋ ಕಡೆ ಹೌಸಿಂಗ್ ಬೋರ್ಡಿನವರು ಕಟ್ಟಿರತಕ್ಕ ಮನೆಗಳು ಯಾರಿಗೂ ಅಲಾಟ್ ಆಗಿಲ್ಲ. ಈ ರೀತಿ ಆದರೆ ಹೌಸಿಂಗ್ ಬೋರ್ಡಿಗೆ ಬರತಕ್ಕ ಆದಾಯ ಕಡಿಮೆಯಾಗುತ್ತದೆ. ಲೋನ್ ಇನ್‌ಸ್ಟಾಲ್‌ಮೆಂಟ್‌ಗಳು ಸರಿಯಾಗಿ ಬರುವುದಿಲ್ಲ, ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಹೌಸಿಂಗ್ ಬೋರ್ಡನ್ನು ಒಂದು ಸ್ವಾಯತ್ತ ಮಂಡಳಿ ಎಂದು ಮಾಡಿ ಅದಕ್ಕೆ ಸ್ವಾತಂತ್ರ್ಯ ಕೊಟ್ಟು ಅದಕ್ಕೆ ಕೆಲವು ಅಧಿಕಾರವನ್ನು ಕೊಡಬೇಕು. ಕರ್ನಾಟಕ ಹೌಸಿಂಗ್ ಬೋರ್ಡ್ ರಚನೆಯಾಗಿ ೨೩ ವರ್ಷ ಆಯಿತು. ಆದರೂ ಸಹ ಅಲ್ಲಿ ಇನ್ನೂ ನೌಕರರ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಫೈನಲ್ ಆಗಿಲ್ಲ. ಆದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಗಮನವನ್ನು ಹರಿಸಬೇಕು ಸಾಕಷ್ಟು ಚುರುಕಾಗಿ ಕೆಲಸ ಮಾಡತಕ್ಕ ಸಿಬ್ಬಂಧಿವರ್ಗದವರನ್ನು ಅಲ್ಲಿ ನೇಮಕ ಮಾಡಬೇಕು; ಗೃಹನಿರ್ಮಾಣ ಮಂಡಲಿಗೆ ಸರ್ಕಾರದವರು ಹೆಚ್ಚಿಗೆ ಕಾಲ ಗ್ಯಾರಂಟಿ ನಿಂತರೆ ಅವರಿಗೆ ಹಣ ಸಿಕ್ಕುತ್ತದೆ, ತಮಿಳುನಾಡಿನಲ್ಲಿ ೫೬ ಕೋಟಿ ರೂಪಾಯಿಗಳನ್ನು ಹುಡ್ಕೋ ಸ್ಕೀಮಿಗೆ ಸಂಬಂಧಪಟ್ಟಹಾಗೆ ಸಾಲದ ಸೌಲಭ್ಯವನ್ನು ಪಡೆದಿದ್ದಾರೆ. ನಮ್ಮ ಕರ್ನಾಟಕ ಗೃಹನಿರ್ಮಾಣ ಸಂಸ್ಥೆಯವರು ೧೬ ಕೋಟಿ ರೂಪಾಯಿಗಳನ್ನು ಪಡೆದಿದ್ದಾರೆ. ಇದಕ್ಕೆ ಕಾರಣ ಏನು ಎಂಬುದನ್ನು ಕಂಡುಹಿಡಿಯಬೇಕು. ಹಾಗೂ ತಕ್ಕ ಪರಿಹಾರವನ್ನು ಒದಗಿಸಬೇಕು. ಗೃಹ ನಿರ್ಮಾಣ ಮಂಡಳಿಯ ಕೆಲಸ ಸ್ಥಗಿತವಾಗುವುದಕ್ಕೆ ಹಣದ ಸೌಲಭ್ಯ ಸಾಕಷ್ಟು ಇಲ್ಲದಿರುವುದೇ ಕಾರಣ. ಸರ್ಕಾರದವರು ಅದಕ್ಕೆ ಸಾಲವನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಿಲ್ಲ. ಅದಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಗ್ಯಾರಂಟಿಯನ್ನು ಕೊಟ್ಟು ಸಾಲ ಕೊಡಿಸುವುದಕ್ಕೆ ಪ್ರಯತ್ನ ಮಾಡದರೆ ಗೃಹ ನಿರ್ಮಾಣ ಮಂಡಲಿಯ ಕೆಲಸ ತ್ವರಿತವಾಗಿ ಆಗುತ್ತದೆ, ಈ ಗೃಹ ನಿರ್ಮಾಣ ಮಂಡಲಿಯವರು ಕೆಲವು ಮನೆಗಳನ್ನು ಲಾಲ್‌ಬಾಗ್, ಸಿದ್ದಾಪುರ ಜಯನಗರ ಇಂತಹ ಕಡೆಗಳಲ್ಲಿ ಮನೆಗಳನ್ನು ಕಟ್ಟಿಸಿದರೇ ಅವುಗಳನ್ನು ಸರ್ಕಾರದವರೇ ತೆಗೆದುಕೊಳ್ಳುತ್ತಾರೆಂದು ಕೇಳಿದ್ದೇನೆ. ಅವುಗಳನ್ನು ಸರ್ಕಾರದವರು ಏಕೆ ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ. ಆ ಮನೆಗಳು ಸರ್ಕಾರಿ ನೌಕರರಿಗೆ ಬೇಕು ಎಂದರೆ ಈಗ ಸರ್ಕಾರಿ ನೌಕರರಿಗೆ ರೆಂಟ್ ಕಂಟ್ರೋಲ್‌ನಲ್ಲಿ ಸುಲಭ ಬಾಡಿಗೆಗೆ ಮನೆಗಳು ಸಿಕ್ಕುತ್ತವೆ ಮತ್ತುಅವರು ಸ್ವಂತವಾಗಿ ಮನೆಗಳನ್ನು ಕಟ್ಟಿಸುವುದಕ್ಕೆ ಸರ್ಕಾರದವರು ಸಾಲವನ್ನು ಕೊಡುತ್ತಾರೆ. ಹೌಸಿಂಗ್ ಬೋರ್ಡ್‌ನವರು ಸಾಲ ಕೊಡುತ್ತಾರೆ. ಹೀಗಿರುವಾಗ ಹೌಸಿಂಗ್ ಮನೆಗಳನ್ನು ಕಟ್ಟಿಸಿರುವ ಮನೆಗಳನ್ನು ಸಾರ್ವಜನಿಕರಿಗೆ ಕೊಡಬೇಕು; ಅವುಗಳನ್ನು ಸರ್ಕಾರದವರು ಉಪಯೋಗಿಸುವುದು ಸರಿಯಲ್ಲ. ಒಟ್ಟಿನಲ್ಲಿ ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುವುದೇನೆಂದರೆ ಸಮಾಜವಾದದ ತತ್ವದ ಪ್ರಕಾರ ಬಡಜನಗಳಿಗೆ ಮನೆಗಳನ್ನು ಕೊಡುವ ಒಂದು ಕಾರ್ಯಕ್ರಮ ನಡೆದುಕೊಂಡು ಬರಲೇಬೇಕು,

ತಾವು ಉತ್ಸಾಹದಿಂದ ಕೆಲಸ ಮಾಡುತ್ತೀರಿ, ಬಹಳ ಸಂತೋಷ, ತಮಗೆ ಇದರ ಬಗ್ಗೆ ಆಸಕ್ತಿ ಇದೆ; ನನಗೆ ೨೫ ವರ್ಷಗಳಿಂದ ಈ ವಿಚಾರ ಗೊತ್ತಿದೆ ತಮ್ಮಲ್ಲಿರತಕ್ಕಂಥ ಉತ್ಸಾಹದಜೊತೆಗೆ ಇನ್ನಷ್ಟು ಅನುಭವ ಸೇರಿದರೆ ಕರ್ನಾಟಕ ರಾಜ್ಯಕ್ಕೆ ಅನುಕೂಲವಾಗುತ್ತದೆ. ಅದನ್ನು ತಾವು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕರ್ನಾಟಕ ಗೃಹನಿರ್ಮಾಣ ಮಂಡಲಿ ವಿಚಾರದಲ್ಲಿ ಆಸಕ್ತಿ ವಹಿಸಿ ಇರತಕ್ಕ ತೊಂದರೆಗಳನ್ನು ನಿವಾರಣೆ ಮಾಡುವುದರಲ್ಲಾಗಲೀ, ೭ ಕೋಟಿ ರೂಪಾಯಿ

ಗಳನ್ನು ಒದಗಿಸುವುದರಲ್ಲಾಗಲೀ, ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ವಿಚಾರದಲ್ಲಾಗಲೀ–ಸಿಬ್ಬಂದಿ ವಿಚಾರದಲ್ಲಾಗಲೀ ಎಲ್ಲಾ ವಿಚಾರಗಳಲ್ಲೂ ಛೇರ್ಮನ್‌ರವರನ್ನು ಕರೆಸಿಕೊಂಡು ಅವರಗಿರತಕ್ಕ ಕಷ್ಟವನ್ನು ತಿಳಿದು ಅವುಗಳನ್ನು ಪರಿಹರಿಸಲಿಕ್ಕೆ ಪ್ರಯತ್ನ ಮಾಡಿದರೆ ಮಂಡಲಿ ಮಾಡಿದ್ದಕ್ಕೆ ಸಾರ್ಥಕವಾಗುತ್ತದೆ. ಕಟ್ಟಡಗಳನ್ನು ಇಟ್ಟುಕೊಂಡು ಬೋರ್ಡ್ ಕೆಲಸ ಸ್ಥಗಿತವಾಗಿದೆಯೆಂದರೆ ಅದು ನ್ಯಾಷನಲ್ ವೇಸ್ಟ್, ಆದುದರಿಂದ ಗೃಹ ನಿರ್ಮಾಣ ಮಂಡಲಿಯ ಛೇರ್ಮನ್ ರವರನ್ನು ಕರೆಸಿ ಮಾತನಾಡಿ ಅವರಿಗಿರತಕ್ಕ ತೊಂದರೆಗಳನ್ನು ಸರಿಪಡಿಸಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಗೃಹ ನಿರ್ಮಾಣ ಮಂಡಲಿಗೆ ಒದಗಿಸಿರತಕ್ಕ ಹಣ ಸಾಕಷ್ಟು ಆಗಿದೆ ಎಂದು ನಾನು ಭಾವಿಸಿಕೊಂಡಿಲ್ಲ, ಬೇರೆ ಕೆಲಸಗಳಿಗೆ ಹಣವನ್ನು ಕಡಿಮೆ ಮಾಡಿ, ವಾಸದ ಮನೆಗಳಿಗಾಗಿ ಹೆಚ್ಚು ಹಣವನ್ನು ಖರ್ಚು ಮಾಡಬೇಕು. ನೀರಾವರಿ ಮತ್ತಿತರ ಮುಖ್ಯವಾದ ಕೆಲಸಗಳನ್ನು ಬಿಟ್ಟು ಉಳಿದ ಕೆಲಸ ಕಾರ್ಯಗಳಿಗೆ ಹಣವನ್ನು ಕಡಿಮೆ ಮಾಡಿ ಆದ್ಯತೆಯ ಮೇಲೆ ವಾಸದ ಮನೆಗಳನ್ನು ಕಟ್ಟಿ ಪೂರೈಸುವುದಾದರೆ ಅದಕ್ಕಿಂತ ಹೆಚ್ಚಿನದೇನೂ ಇಲ್ಲ. ಇಲ್ಲದೇ ಹೋದರೆ ಇನ್ನು ೧೦ ವರ್ಷಗಳಾದರೂ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಿಲ್ಲ; ಈ ಸಮಸ್ಯೆಯಲ್ಲಿ ಒಂದು ಅಂಶವನ್ನೂ ಬಿಡಿಸಲಿಕ್ಕೆ ಸಮರ್ಥವಾಗುವುದಿಲ್ಲ ಆದ್ದರಿಂದ ಇದನ್ನು ತಾವು ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಆಲೋಚನೆ ಮಾಡಿ ವಾಸದ ಮನೆಗಳನ್ನು ಕಟ್ಟಲು ಹೆಚ್ಚು ಹಣವನ್ನು ಖರ್ಚುಮಾಡಿ ಮತ್ತು ಖರ್ಚಾದ ಹಣ ಸದ್ವಿನಿಯೋಗವಾಗುವಂತೆ ಪ್ರಯತ್ನ ಮಾಡಬೇಕು ಎಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ,

†ಶ್ರೀ ಪಂಪಾಪತಿ (ದಾವಣಗೆರೆ) :—ಸನ್ಮಾನ್ಯ ಅಧ್ಯಕ್ಷರೇ, ನಾನು ಗೃಹ ನಿರ್ಮಾಣ ಮಂಡಳಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಯ ಮೇಲೆ ಮಾತನಾಡುತ್ತಾ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮೊಟ್ಟಮೊದಲನೆಯದಾಗಿ ಹೇಳುವುದಾದರೆ, ಅವರಿಗೆ ಕೊಟ್ಟಿರತಕ್ಕ ಹಣ ಬಹಳ ಕಡಿಮೆ. ೨೪ ಕೋಟಿರೂಪಾಯಿ ಏನು ಏದೆ ಇದು ನಮ್ಮ ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿ ಅಥವಾ ನಮ್ಮ ರಾಜ್ಯದ ಗೃಹನಿರ್ಮಾಣದ ವಿಚಾರಮಾಡುತ್ತಾ ನೋಡಿದರೆ ಇದು ಬಹಳ ಕಡಿಮೆ ಆದರೂ ಕೂಡ ನಮ್ಮ ಸಚಿವರಿಗೆ ಒಂದೆರಡು ಸಲಹೆಗಳನ್ನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಇಷ್ಟಪಡುತ್ತೇನೆ. ಇವತ್ತು ನಿವೇಶನ ಇಲ್ಲದೇ ಇರತಕ್ಕ ಜನ ಬಹಳ ಜಾಸ್ತಿ ಇದ್ದಾರೆ. ತಮ್ಮ ಅಂಕಿ ಅಂಶಗಳ ಪ್ರಕಾರ ೭ ಲಕ್ಷ ಜನ ಇದ್ದಾರೆ. ಈಗಾಗಲೇ ೭ಲಕ್ಷ ಗೃಹ ನಿವೇಶನಗಳನ್ನು ಒದಗಿಸಿದ್ದಾರೆ. ಇದರಲ್ಲಿ ಮನೆ ಕಟ್ಟಿರುವುದು ಬಹಳ ಕಡಿಮೆ ನಿವೇಶನಗಳನ್ನು ಕೊಟ್ಟಿರತಕ್ಕ ಸ್ಥಳ ಎಲ್ಲಿದೆ ಎನ್ನುವುದೇ ಕೆಲವರಿಗೆ ಗೊತ್ತಿಲ್ಲ, ಗುಡ್ಡದಲ್ಲಿ ಖಾಲಿ ಇರತಕ್ಕ ಸ್ಥಳದಲ್ಲಿ ಗೆರೆ ಹೊಡೆದು ಇಂಥವರಿಗೆ ಇಂಥಾ ನಿವೇಶನ ಎಂದು ಕೊಟ್ಟಿದ್ದಾರೆ. ಇಂಥಾವರಿಗೆ ನಿವೇಶನ ಎಲ್ಲಿದೆ ಎಂದು ಗೊತ್ತಿಲ್ಲ. ಅಲ್ಲದೆ ಕೆಲವರಿಗೆ ಮನೆಗಳನ್ನು ಕೊಟ್ಟಿದ್ದೀರಿ. ಅಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ದೀಪ ಇಲ್ಲ, ರಸ್ತೆ ಇಲ್ಲ. ನೀರಿಲ್ಲ. ಇಂಥಾ ಒಂದು ಪರಿಸ್ಥಿತಿಯಲ್ಲಿ ಮನೆಗಳನ್ನು ಕಟ್ಟಿಕೊಟ್ಟರೆ ಅಲ್ಲಿ ವಾಸ ಮಾಡಲು ಹೇಗೆ ಹೋಗುತ್ತಾರೆ, ಹೇಗೆ ವಾಸ ಮಾಡುತ್ತಾರೆ ಎನ್ನುವುದನ್ನು ಮಾನ್ಯ ಸಚಿವರು ಗಮನಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮನೆ ಕಟ್ಟಿಕೊಳ್ಳುವುದಕ್ಕೆ ಒಂದು ಸಾವಿರ ರೂಪಾಯಿ ಸಾಲ ಕೊಡುತ್ತಾರೆ, ಒಂದು ಸಾವಿರ ರೂಪಾಯಿ ಸಬ್ಸಿಡಿ ಕೊಡುತ್ತಾರೆ. ಮಾನ್ಯ ಅಧ್ಯಕ್ಷರೇ, ಇವತ್ತಿನ ಪರಿಸ್ಥಿತಿಯಲ್ಲಿ ಸಾಮಾನುಗಳ ಬೆಲೆ ಜಾಸ್ತಿಯಾಗಿದೆ, ಮೊದಲು ತೀರ್ಮಾನ ಮಾಡಿದಂತೆ ಎರಡು ಸಾವಿರ ರೂಪಾಯಿಯಲ್ಲಿ ಮನೆಯನ್ನು ಕಟ್ಟುವುದಕ್ಕಾಗುವುದಿಲ್ಲ. ಆದುದರಿಂದ ಇದನ್ನು ಹೆಚ್ಚು ಮಾಡಬೇಕು, ಒಂದೂವರೆ ಸಾವಿರ ರೂಪಾಯಿ ಲೋನ್, ಒಂದೂವರೆ ಸಾವಿರ ರೂಪಾಯಿ ಸಬ್ಸಿಡಿ ಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಕೊಡುತ್ತೇನೆ. ತಾವು ಹರಿಜನ–ಗಿರಿಜನರಿಗೆ ಹೆಚ್ಚು ಸಹಾಯ ಮಾಡುತ್ತೀರಿ. ಆದರೆ ಹಳ್ಳಿಗಳಲ್ಲಿ ಅನೇಕ ಜನ ಬಡವರಿದ್ದಾರೆ. ಯಾವುದೇ ಜಾತಿಯವರು ಇರಲಿ, ನಿರ್ಗತಿಕರಾದವರು, ಬಡವರು, ವಾಸಮಾಡುವುದಕ್ಕೆ ಸ್ಥಳವಿಲ್ಲದೇ ಇರತಕ್ಕ ಜನ ಇದ್ದಾರೆ ಅಂಥವರಿಗೆ ಸೌಕರ್ಯವನ್ನು ಒದಗಿಸುವುದಕ್ಕೆ ಮಾನ್ಯ ಸಚಿವರು ಪ್ರಯತ್ನಮಾಡಬೇಕು. ಇವತ್ತು ಸರ್ಕಾರ ಹಿಂದುಳಿದವರ ಬಗ್ಗೆ ತುಂಬಾ ಅಭಿಮಾನ ವ್ಯಕ್ತಪಡಿಸುತ್ತಿದೆ. ಅದೇ ರೀತಿ ನಿರ್ಗತಿಕರು ಯಾರಿದ್ದಾರೆ, ತುಂಬಾ ತೊಂದರೆಯಲ್ಲಿರತಕ್ಕ ಜನ ಯಾರಿದ್ದಾರೆ, ಕೃಷಿ ಕೆಲಸ ಮಾಡಿ ಜೀವನ ಮಾಡತಕ್ಕವರು, ಈಡಿಗರು ಆವತ್ತು ಕೆಲಸ ಮಾಡಿ ಆವತ್ತು ಜೀವನ ಮಾಡತಕ್ಕವರು ಬೇಕಾದಷ್ಟು ಜನರಿದ್ದಾರೆ, ಅಂಥವರಿಗೆ ಇವತ್ತು ಸರ್ಕಾರ ಈ ಒಂದು ಅನುಕೂಲವನ್ನು ಮಾಡಬೇಕು ಎಂದು ನಾನು ಕೇಳುತ್ತೇನೆ. ಇನ್ನು ದೊಡ್ಡ ದೊಡ್ಡ ನಗರಗಳಲ್ಲಿ ಮನೆಗಳನ್ನು ಕಟ್ಟಿಸತಕ್ಕಂಥಾದ್ದು

ದೊಡ್ಡ ದೊಡ್ಡ ನಗರಗಳಲ್ಲಿ ಗೃಹನಿರ್ಮಾಣ ಮಂಡಲಿಯವರು ಮನೆಗಳನ್ನು ಕಟ್ಟಿಸಲಿಕ್ಕೆ ಏನು ಪ್ರಯತ್ನ ಮಾಡುತ್ತಾರೆ ಅದು ಸಾಲದು. ಬಹಳ ನಿಧಾನವಾಗಿ ಅವರ ಕೆಲಸ ನಡೆಯುತ್ತಾ ಇದೆ. ದೊಡ್ಡ ದೊಡ್ಡ ಕೈಗಾರಿಕೆಗಳು ಇರತಕ್ಕಂಥ ಸ್ಥಳದಲ್ಲಿ ನಾವು ವಿಚಾರ ಮಾಡಿದಾಗ ಅಥವಾ ನೋಡಿದಾಗ ಅವರು ವಾಸ ಮಾಡತಕ್ಕ ಸ್ಥಳವನ್ನು ನಾವು ಗಮನಿಸಿದರೆ ಬಹಳ ಶೋಚನೀಯವಾದ ಸ್ಥಿತಿಯಲ್ಲಿ ಅವರು ವಾಸ ಮಾಡುತ್ತಿರುವುದು ಕಂಡು ಬರುತ್ತದೆ. ಕೇವಲ ೮ ಅಡಿ ೧೦ ಅಡಿ ಇರತಕ್ಕ ಒಂದು ಕೋಣೆಯಲ್ಲಿ ಅವರು ವಾಸ ಮಾಡುತ್ತಾ ಇರುವುದರಿಂದ ಅಲ್ಲೆ ಅಡಿಗೆ, ಅಲ್ಲೆ ಊಟ, ಅಲ್ಲೇ ಬಚ್ಚಲು ಇರುತ್ತದೆ, ಅಷ್ಟರಲ್ಲಿ ೩—೪ ಮಕ್ಕಳು ಗಂಡ ಹೆಂಡತಿ ವಾಸ ಮಾಡುವುದು ನೋಡಿದರೆ ಬಹಳ ಶೋಚನೀಯವಾಗಿದೆಯೆಂದು ನಮಗೆ ಅರ್ಥವಾಗುತ್ತದೆ. ಮಾನ್ಯ ಸಚಿವರಿಗೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ದೊಡ್ಡ ದೊಡ್ಡ ಕೈಗಾರಿಕೆ ಆಡಳಿತಗಾರರ ಜೊತೆಯಲ್ಲಿ ತಾವು ಸಮಾಲೋಚನೆ ಮಾಡಿ ಕೈಗಾರಿಕೆ ಇರತಕ್ಕ ಸ್ಥಳದಲ್ಲಿ ನಿವೇಶನಗಳನ್ನು ಒದಗಿಸುವುದಾಗಲೀ, ಮನೆಗಳನ್ನು ಕಟ್ಟಿಸತಕ್ಕಂಥಾದ್ದಾಗಲೀ ವ್ಯವಸ್ಥೆ ಮಾಡಬೇಕು. ಇವತ್ತಿನ ಪರಿಸ್ಥಿತಿ ಏನಿದೆಯೆಂದರೆ, ಕೈಗಾರಿಕೆ ಒಂದು ಕಡೆ ಇರುತ್ತದೆ. ವಾಸ ಇನ್ನೊಂದು ಕಡೆ ಇರುತ್ತದೆ. ಕಾರ್ಮಿಕರು ಕೈಗಾರಿಕೆಗೆ ಕೆಲಸಕ್ಕೆ ಹೋಗುವುದಕ್ಕೆ ವಾಹನ ಸೌಕರ್ಯ ವಿರುವುದಿಲ್ಲ. ಈ ರೀತಿಯ ಹಲವಾರು ರೀತಿಯ ತೊಂದರೆಗಳನ್ನು ಕಾರ್ಮಿಕರು ಅನುಭವಿಸಬೇಕಾಗಿದೆ. ಇವತ್ತು ಕೈಗಾರಿಕಾ ಮಾಲೀಕರು ಅನೇಕ ರೀತಿಯಲ್ಲಿ ಸರ್ಕಾರಕ್ಕೆ ಬೇಕಾದಷ್ಟು ಹಣವನ್ನು ಕೊಡುತ್ತಾರೆ. ಕಂದಾಯ ರೂಪದಲ್ಲಿ, ಟ್ಯಾಕ್ಸ್ ರೂಪದಲ್ಲಿ, ಇನ್ನೂ ಅನೇಕ ರೂಪದಲ್ಲಿ ಅವರಿಂದ ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತದೆ ಆದುದರಿಂದ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಮನೆಗಳನ್ನು ಕಡ್ಡಾಯವಾಗಿ ಒದಗಿಸಲೇ ಬೇಕು ಎನ್ನತಕ್ಕಂಥ ಒಂದು ಕಾಯಿದೆ ತಂದರೆ ದೊಡ್ಡ ದೊಡ್ಡ ನಗರಗಳಲ್ಲಿರತಕ್ಕ ಮನೆಗಳ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸಹಾಯಕವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ನಾನು ದಾವಣಗೆರೆಯಿಂದ ಚುನಾಯಿತನಾಗಿ ಬಂದಿದ್ದೇನೆ. ನನಗೆ ಕಾರ್ಮಿಕರ ಮಧ್ಯದಲ್ಲಿರತಕ್ಕ ಅವಕಾಶ ಸ್ವಲ್ಪ ಮಟ್ಟಿಗೆ ಇದೆ. ಅಲ್ಲಿ ಮಾಲೀಕರು ಬೇಕಾದಷ್ಟು ಜಾಗವನ್ನು ಇಟ್ಟುಕೊಂಡಿದ್ದಾರೆ. ಸ್ಥಳ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಸ್ಥಳ ಇದ್ದರೂ ಕೂಡ ಮನೆ ಕಟ್ಟಲಿಕ್ಕೆ ಮನಸ್ಸು ಇಲ್ಲ. ಆದುದರಿಂದ ಸರ್ಕಾರ ಸ್ವಲ್ಪ ಒತ್ತಾಯಮಾಡಿದರೆ ಸಾವಿರಾರು ಮನೆಗಳನ್ನು ಕಟ್ಟಿಸಿಕೊಡಬಹುದು ಕಾರ್ಮಿಕರಿಗೆ ಮನೆಗಳನ್ನು ಕೊಡಬಹುದು, ಇದರಿಂದ ಮನೆ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ಪರಿಸ್ಥಿತಿ ದಾವಣಗೆರೆಯಲ್ಲಿ ಮಾತ್ರವಲ್ಲ ಇಡಿ ರಾಜ್ಯದಲ್ಲೇ ಇಂಥಾ ಒಂದು ಪರಿಸ್ಥಿತಿ ಇದೆ. ಬೆಂಗಳೂರು. ಹುಬ್ಬಳ್ಳಿ, ಮೈಸೂರು ಮುಂತಾದ ಬೇರೆ ಎಲ್ಲಾ ಕಡೆ ಇರಬಹುದು ಇತ್ತೀಚೆಗೆ ದೊಡ್ಡ ದೊಡ್ಡ ನಗರಗಳಲ್ಲಿ ನಗರಾಭಿವೃದ್ಧಿ ಮಂಡಳಿಗಳನ್ನು ಸ್ಥಾಪನೆ ಮಾಡಿದ್ದಾರೆ. ಆದುದರಿಂದ ಎಲ್ಲಾ ಕೈಗಾರಿಕೆಗಳವರು ಅವರವರಿಗೆ ಬೇಕಾದಂಥ ಕಡೆ ಡೆವಲಪ್‌ಮೆಂಟ್ ಬೋರ್ಡಿಗೆ ಹೇಳಿದರೆ ಡೆವಲ್‌ಪ್‌ಮೆಂಟ್ ಬೋರ್ಡ್‌ನವರು ಅವರಿಗೆ ಸ್ಥಳವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಆ ಸ್ಥಳದಲ್ಲಿ ಒಂದೇ ಸಲಕ್ಕೆ ಸಾವಿರಾರು ಮನೆಗಳನ್ನು ಕಟ್ಟಲಿಕ್ಕೆ ಆಗುವುದಿಲ್ಲ. ಅವರ ಕೆಪಾಸಿಟಿಗೆ ತಕ್ಕ ಹಾಗೆ ವರ್ಷಕ್ಕೆ ೫೦—೧೦೦ ಮನೆಗಳನ್ನು ಕಟ್ಟಲೇಬೇಕು ಎಂದು ಕಡ್ಡಾಯ ಮಾಡಿದರೆ ತಮಗೆ ಇದರ ಭಾರ ಕಡಿಮೆಯಾಗುತ್ತದೆ,

ಇವತ್ತು ಅನೇಕ ಕೆಲಸಗಾರರು ಕಷ್ಟಪಟ್ಟು ದುಡಿಯುತ್ತಿದ್ದಾರೆ, ಅದರ ಲಾಭವನ್ನು, ಅನೇಕ ಸೌಲತ್ತುಗಳನ್ನು ಕಾರ್ಖಾನೆಯ ಮಾಲೀಕರು ಪಡದುಕೊಳ್ಳುತ್ತಿದ್ದಾರೆ. ಆದುದರಿಂದ ಕಾರ್ಮಿಕರ ಪರಿಸ್ಥಿತಿಯ ಬಗ್ಗೆ ಸಹಾನುಚಿಂತನೆ ಮಾಡಬೇಕಾದ್ದು ಸರ್ಕಾರದವರ ಮತ್ತು ಕೈಗಾರಿಕಾ ಮಾಲೀಕರಿಗೆ ಸಂಬಂಧಪಟ್ಟ ವಿಚಾರವಾಗಿದೆ ಆದುದರಿಂದ ತಾವು ಇದನ್ನು ಗಮನಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ದೊಡ್ಡ ದೊಡ್ಡ ನಗರಗಳಲ್ಲಿ ಅಂದರೆ ದಾವಣಗೆರೆ, ಮತ್ತು ಹರಿಹರ ಇಲ್ಲಿ ಬಾಡಿಗೆ ರೂಪದಲ್ಲಿ ಹಿಂದೆ ಸುಮಾರು ೨೫-೩೦ ವರ್ಷಗಳ ಹಿಂದೆಯೇ ಮನೆಗಳನ್ನು ಕಟ್ಟಿಸಿದರು ಅಲ್ಲಿ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಮಾತ್ರ ಆ ಮನೆಗಳನ್ನು ಕಟ್ಟಿಸಿದರು, ಆ ಮನೆಗಳನ್ನು ಇವತ್ತು ಯಾರು ಯಾರು ಆ ಮನೆಗಳಲ್ಲಿಯೇ ವಾಸವಾಗಿದ್ದರೋ ಅಂಥವರಿಗೇ ಕೊಡುತ್ತಿದ್ದಾರೆ. ಆ ರೀತಿ ಕೊಡಬೇಕು ಎನ್ನುವ ಬಗ್ಗೆ ಕೂಡ ಈಗಾಗಲೇ ಆದೇಶ ಕೂಡ ಹೊರಟಿದೆ. ಕೇಂದ್ರ ಸರ್ಕಾರದಿಂದಲೂ ಕೂಡ ಇದೇ ತರಹದ ಆಜ್ಞೆ ಹೊರಟಿದೆ. ಆದುದರಿಂದ ತಾವು ಇದನ್ನು ಆದಷ್ಟು ಜಾಗ್ರತೆ ಜಾರಿಗೆ ತಂದರೆ ಇದರಿಂದ ಯಾರು ೧೫,೨೦ ವರ್ಷಗಳಿಂದ ಬಾಡಿಗೆ ಕಟ್ಟಿಕೊಂಡು ಬಂದಿದ್ದಾರೋ ಅಂಥವರಿಗೇ ಕೊಟ್ಟರೆ ಇದರಿಂದ ಅವರಿಗೂ ಸಂತೋಷವಾಗುತ್ತದೆ ಮತ್ತು ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೂ

ಅವರಿಗೆ ಅವಕಾಶವಾಗುತ್ತದೆಂದು ಹೇಳಬಯಸುತ್ತೇನೆ. ಇನ್ನು ಮಾನ್ಯ ಸ್ನೇಹಿತರು ಗ್ರಾಮಾಂತರ ಪ್ರದೇಶಗಳಲ್ಲಿ ಜನತಾ ಗೃಹಗಳನ್ನು ನಿರ್ಮಾಣ ಮಾಡಿದುದರ ಬಗ್ಗೆ ಹೇಳಿದ್ದಾರೆ, ಎಲ್ಲಾ ಒಂದೇ ಕಡೆ ಮನೆಗಳನ್ನು ಕಟ್ಟಿ ನೀವು ಅಲ್ಲಿಗೇ ಹೋಗು ಅಂತ ಹೇಳುವುದಕ್ಕಿಂತಲೂ ಯಾರು ಯಾರಿಗೆ ಸ್ಥಳವಿದೆ ಅಥವಾ ನಿವೇಶನವಿದೆ ಅಂಥವರಿಗೆ ಅಲ್ಲಲ್ಲಿಯೇ ಮನೆಗಳನ್ನು ಕಟ್ಟಿಕೊಡತಕ್ಕ ವ್ಯವಸ್ಥೆಯಾಗಬೇಕು. ಏತಕ್ಕೆಂದರೆ ಅವರು ಅಲ್ಲಿಯೇ ಕೆಲಸ ಮಾಡುತ್ತಾ ಅಲ್ಲಿಯೇ ಇರಲು ಅನುಕೂಲವಾಗುತ್ತದೆ. ಕೆಲಸ ಮಾಡುವಲ್ಲಿಯೇ ಮನೆ ಇದ್ದರೆ ಅವರಿಗೆ ಅನುಕೂಲವಾಗುತ್ತದೆ. ಮನೆ ಕಟ್ಟಿದಲ್ಲಿ ಬರಬೇಕು ಎಂದರೆ ಅವರಿಗೆ ಅಲ್ಲಿಗೆ ಹೋಗುವುದಕ್ಕೆ ಇಚ್ಛೆ ಪಡುವುದಿಲ್ಲ. ಇದರಿಂದ ಕಟ್ಟಿದ್ದೂ ಪ್ರಯೋಜನವಾಗುವುದಿಲ್ಲ ಆದುದರಿಂದ ಯಾರು ಯಾರಿಗೆ ಸ್ಥಳವಿರುತ್ತದೆಯೋ ಅಂಥವರಿಗೆ ಅಲ್ಲಿಯೇ ಕಟ್ಟಿಸಿಕೊಡಬೇಕೆಂದು ಒತ್ತಾಯ ಮಾಡುತ್ತಾ, ಕಾರ್ಮಿಕರ ಪರಿಸ್ಥಿತಿಯನ್ನು ಗಮನಿಸಿ ಸರ್ಕಾರದವರು ಪೋಲೀಕರ ಜೊತೆಯಲ್ಲಿ ವ್ಯವಹರಿಸಿ, ಅದಕ್ಕೆ ಬೇಕಾದರೆ ಒಂದು ಶಾಸನವನ್ನು ತಂದು ಅವರಿಗೇ ಗೃಹಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ಕೆ. ಕಳ್ಳಿಗುಡ್ಡ (ಬಾಗಲಕೋಟೆ):—ಮಾನ್ಯ ವಸತಿ ಸೌಕರ್ಯ ಮಂತ್ರಿಗಳವರು ಮಂಡಿಸಿರತಕ್ಕ ಬೇಡಿಕೆಯನ್ನು ಸ್ವಾಗತಿಸುತ್ತಾ, ಬಾಗಲ್ ಕೋಟೆಯಲ್ಲಿ ಇವತ್ತಿನವರೆಗೂ ನೀವು ಒಂದೂ ಮನೆಯನ್ನು ಕಟ್ಟಿಸಿಲ್ಲವೆಂದು ಹೇಳಬೇಕಾಗಿದೆ. ಸಾಧಾರಣವಾಗಿ ೧೯೬೦ನೇ ಇಸ್ವಿಯಲ್ಲಿ ಕೆಲವು ೧೫,೨೦ ಮನೆಗಳನ್ನು ಕಟ್ಟುವುದಕ್ಕೆ ಶುರು ಮಾಡಿದವು ಇವತ್ತಿನವರೆಗೂ ಮುಗಿದಿಲ್ಲ. ಅವು ಇನ್ನು ಎಂದಿಗೆ ಮುಗಿಯುತ್ತವೆಯೋ ಗೊತ್ತಿಲ್ಲ. ೧೨೯,೧೩೦ ನೇ ಸರ್ವೆ ನಂಬರ್ ಸ್ಥಳವನ್ನು ನಮ್ಮ ಹಿಂದಿನ ಪೌರಾಡಳಿತ ಮಂತ್ರಿಗಳವರು ಜಾಗ ಕೊಟ್ಟಿದ್ದರು. ಆ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಬಡಬಗ್ಗರಿಗೆ, ದೀನ ದಲಿತರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಜಾಗ ಕೊಟ್ಟಿದ್ದೇವೆ. ಆದರೆ ಇಲ್ಲಿಯವರೆಗೂ ಅಲ್ಲಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಆಗಿಲ್ಲವೆಂದು ಬಹಳ ದುಃಖದಿಂದ, ವಿಷಾದದಿಂದ ಹೇಳಬೇಕಾಗಿದೆ, ಮತ್ತೆ ಈಗ ಹುಡ್ಕೋ ಅಂತ ಸ್ಕೀಂ ಬಂದಿದೆ, ಅದರ ಮುಖಾಂತರ ಶಾಲಾ ಗುರುಗಳಿಗೆ, ಮತ್ತು ವಿಲೇಜ್ ಅಕಾಂಟೆಟ್ಸ್‌ಗಳಿಗೆ ಮತ್ತು ಗ್ರಾಮ ಸೇವಕರಿಗೆ ಅತ್ಯಂತ ಅವಶ್ಯಕವಾದ ಮನೆಗಳನ್ನು ಕಟ್ಟಿಸಿಕೊಡಲೇಬೇಕಾಗಿದೆ. ಅವರು ಈ ಒಂದು ಅನುಕೂಲವನ್ನು ಮಾಡಿಕೊಟ್ಟರೆ ಪ್ರತಿವರ್ಷವೂ ಈ ವರ್ಗಾವರ್ಗಿ ಕಾಟವೇನಿದೆ ಅದು ತಪ್ಪುತ್ತದೆ, ಆದರೆ ಇವತ್ತು ಬಿ.ಡಿ.ಓ. ಮತ್ತು ತಹಶೀಲ್ದಾರರವರು ಮೊನ್ನೆ ಮೊನ್ನೆ ಎನು ಬಂದಿದ್ದಾರೆ ಅವರಿಗೆಲ್ಲಾ ಮನೆಗಳನ್ನು ಕಟ್ಟಿಕೊಟ್ಟಿದ್ದೀರಿ, ಆದರೆ ನಮ್ಮ ಶಾಲಾ ಮಾಸ್ತರ್‌ಗೆ ಇವತ್ತಿನವರೆಗೂ ಮನೆಗಳನ್ನು ಕಟ್ಟಿಕೊಡುವುದರ ಕಡೆಗೆ ಲಕ್ಷ್ಯವನ್ನೇ ಕೊಟ್ಟ ಹಾಗೆ ಕಾಣುತ್ತಿಲ್ಲವೆಂದು ಅನ್ನಿಸುತ್ತಿದೆ. ಆದುದರಿಂದ ಶಾಲಾ ಮಾಸ್ತರುಗಳಿಗೆ ಮನೆಗಳನ್ನು ಕಟ್ಟಿಸಿ ಕೊಡಲೇ ಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತೆ ಈಗ ಕೆಲವು ಕಡೆ ಹೌಸಿಂಗ್ ಸೊಸೈಟಿ ಅಂತ ಮಾಡಿದ್ದಾರೆ, ಅವು ಏನು ಎಂದರೆ ಅವೆಲ್ಲಾ ಒಂದೇ ನಮೂನೆ ಇದೇ ಅಲ್ಲಿ ಲಿಂಗಾಯಿತರ ಸೊಸೈಟಿ ಮತ್ತು ಬ್ರಾಹ್ಮಣರ ಸೊಸೈಟಿಗಳು ಅಂತ ಆಗಿ ಬಿಟ್ಟಿವೆ ಆದುದರಿಂದ ಇನ್ನು ಮುಂದಾದರೂ ಆ ರೀತಿ ಆಗದ ಹಾಗೆ ನೋಡಿಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ. ಮತ್ತೆ ನಮ್ಮ ಸ್ನೇಹಿತರು ಹೇಳಿದ ಹಾಗೆ ನೀವು ಎಲ್ಲಿ ಅಂದರೆ ಅಲ್ಲಿ ಮನೆ ಕಟ್ಟಿಸಿಕೊಟ್ಟು ಅಲ್ಲಿಗೆ ಹೋಗಿ ಎಂದರೆ ಜನಗಳು ಹೋಗುವುದಿಲ್ಲ ಏತಕ್ಕೆಂದರೆ ಅಲ್ಲಿ ನೀರು, ಲೈಟು ಇರುವುದಿಲ್ಲ. ಇಲ್ಲಿಯವರೆಗೆ ಬಾಗಲಕೋಟೆಯಲ್ಲಿ ಒಂದು ಮನೆಗಳನ್ನು ಕಟ್ಟಿಸಿಕೊಟ್ಟಿಲ್ಲ ಆದರೆ ನಾನು ಮೊನ್ನೆ ಬರುವಾಗ ಕೆಲವರಿಗೆ ನಿವೇಶನಗಳನ್ನು ಕೊಡಿ ಅಂತ ಅಧಿಕಾರಿಗಳಿಗೆ ಹೇಳಿ ಬಂದಿದ್ದೇನೆ, ಅಲ್ಲಿ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ, ಅದು ನಡೆದಿದೆ. ಮತ್ತೆ ಹೌಸಿಂಗ್ ಬೋರ್ಡ್ ಚೇರ್ಮನ್‌ರವರಿಗೂ ಮತ್ತು ಸರ್ಕಾರಕ್ಕೂ ಒಮ್ಮತ ಇದ್ದ ಹಾಗೆ ಕಾಣುತ್ತಿಲ್ಲ. ಏತಕ್ಕೆಂದರೆ ಅಲ್ಲಿಯ ಕಾಗದ ಅಲ್ಲಿಯೇ ಇರುತ್ತದೆ, ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಆಸಕ್ತಿ ವಹಿಸಿ ಕಾಗದ ಪತ್ರಗಳು ಅತಿ ಜಾಗ್ರತೆಯಿಂದ ವಿಲೇವಾರಿ ಆಗಿ ಕ್ರಮ ತೆಗೆದು ಕೊಳ್ಳುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬಾಗಲ್‌ಕೋಟೆಯಲ್ಲಿ ಮನೆ ಕಟ್ಟಿಸಿ ಕೊಡಬೇಕೆಂದು ಇಲ್ಲಿಯವರೆಗೆ ೪೦–೫೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಆದರೆ ಅವು ಇಲ್ಲಿಯವರೆಗೂ ತಯಾರಾಗಿಲ್ಲ, ಅದು ಶ್ರೀ ನಾಡಗೌಡರ ಕಾಲದಲ್ಲಿ ಅಸ್ತಿಭಾರ ಹಾಕಿದಂಥದ್ದು ಇಲ್ಲಿಯವರೆಗೂ ಪೂರ್ತಿಯಾಗಿಲ್ಲ. ಅಲ್ಲಿಗೆ ಈಗ ಎಷ್ಟೋ ಜನ ಅದಕ್ಕೆ ಕಂಟ್ರಾಕ್ಟರ್‌ಗಳು ಬಂದು ಹೋದರು, ಇಂಜಿನಿಯರುಗಳು ೭–೮ ಜನ ಬಂದು ಹೋದರು ಆದರೂ ಆ ಮನೆ ಕೆಲಸ ಪೂರ್ತಿ

ಯಾಗಿಲ್ಲ. ಆದುದರಿಂದ ಇನ್ನು ಮುಂದಾದರೂ ಸರ್ಕಾರದವರು ಆಸಕ್ತಿ ವಹಿಸಿ ಅದನ್ನು ಬೇಗನೆ ಮುಗಿಸಿ ಯಾರಿಗೆ ಕೊಡಬೇಕೋ ಅವರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಟಿ.ಡಿ.ಬಿ.ಯವರು ಎರಡು ಸಾವಿರ ರೂಪಾಯಿಗಳಿಗೆ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ ಆದರೆ ಅವುಗಳಿಗೆ ಇಂಥಂಥಾ ಮೇಟಿರಿಯಲ್ಸನ್ನೇ ಉಪಯೋಗಿಸಬೇಕೆಂದು ಹೇಳಿದ್ದೀರಿ ಇದರಿಂದ ತುಂಬಾ ತೊಂದರೆಯಾಗುತ್ತದೆ. ಅಲ್ಲಿಯೇ ಲೋಕಲ್ ಆಗಿ ಸಿಗತಕ್ಕ ಇಟ್ಟಿಂಗೆಳ್ಳಿಯು ಗೋಡೆಕಟ್ಟಿ ಅದರ ಮೇಲೆ ತಗಡು ಹಾಕಿ ಅದರಿಂದಲೇ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಬಡಬಗ್ಗರು ಮತ್ತು ಕೂಲಿಗಾರರು ತೋಟಗಳಲ್ಲಿ, ಹೊಲಗಳಲ್ಲಿ ಕೆಲಸಮಾಡುವವರಿಗೆ ಅಲ್ಲಲ್ಲಿಯೇ ಅಂದರೆ ಎಲ್ಲೆಲ್ಲಿ ಸ್ಥಳವಿರುತ್ತದೆಯೋ ಅಲ್ಲಲ್ಲಿಯೇ ಕಟ್ಟಿಸಿಕೊಡಬೇಕೆಂದು ಏನು ಮಾನ್ಯ ಸದಸ್ಯರುಗಳು ಹೇಳಿದರು ಅದರಂತೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕೆಲವೊಂದು ಜಾಗವನ್ನು ಜನರಿಗೆ ಕೊಡಬೇಕೆಂದು ತೀರ್ಮಾನವಾದಾಗ ಕೆಲವೊಮ್ಮೆ ಕೆಲವರು ಹೈಕೋರ್ಟಿನವರೆಗೆ ಹೋಗಿ ಬರುತ್ತಾರೆ ಇದರಿಂದ ೩–೪ ವರ್ಷಗಳ ತಡವಾಗುತ್ತದೆ. ಆದುದರಿಂದ ಅದನ್ನು ಬಗೆಹರಿಸುವುದಿಲ್ಲ ಅಸಿಸ್ಟೆಂಟ್ ಕಮಿಷನರ್‌ರವರು ಮತ್ತು ಡಿವಿಜನಲ್ ಕಮಿಷನರ್‌ರವರಿಗೆ ವಹಿಸಬೇಕು ಇಲ್ಲದಿದ್ದರೆ ವಕೀಲರಿಗೆ ವಹಿಸಿದರೆ ಅವರು ಕೇಸನ್ನು ಮುಂದೆ ಹಾಕುತ್ತಾ ಹೋಗುತ್ತಾರೆ ಇದರಿಂದ ಯಾರಿಗೂ ಅನುಕೂಲವಾಗುವುದಿಲ್ಲ. ಅಷ್ಟು ಹೊತ್ತಿಗೆ ಯಾವ ಬಡವರಿಗೆ ನೀವು ಸೈಟ್ ಹಂಚಬೇಕೆಂದು ಮಾಡಿರುತ್ತೀರೋ ಅವನೇ ಸತ್ತು ಹೋಗಿರುತ್ತಾನೆ. ಆದುದರಿಂದ ಇಂಥಾ ವ್ಯವಹಾರಗಳನ್ನು ಆದಷ್ಟು ಬೇಗನೆ ಮುಗಿಸಬೇಕು. ಇನ್ನು ನಮ್ಮ ವಿಜಾಪುರದಲ್ಲಿ ಹೌಸಿಂಗ್ ಬೋರ್ಡ್ ಮುಖಾಂತರ ಬಡವರಿಗಾಗಿ ಮನೆಗಳನ್ನು ಕಟ್ಟಿಸಿದ್ದೀರಿ ಆದರೆ ಅಲ್ಲಿ ಬರೀ ಶ್ರೀಮಂತರಿಗೇ ಕೊಟ್ಟಿದ್ದೀರಿ ಒಬ್ಬರೂ ಬಡವರು ಇಲ್ಲ, ಒಬ್ಬರಾದರೂ ಬಡವರು ಇದ್ದಾರೆಂದು ಖಾತರಿಯಾದರೆ, ತಾವು ಹೇಳುವ ಶಿಕ್ಷೆ ಅನುಭವಿಸಲು ನಾನು ಸಿದ್ಧನಿದ್ದೇನೆ. ಆದುದರಿಂದ ಆ ಪ್ರಕಾರ ಆಗಬಾರದು ಯಾರಿಗಾಗಿ ಮನೆ ಕಟ್ಟಿಸುತ್ತೀರೋ ಅವರಿಗೇ ಕೊಡಬೇಕು. ನಮ್ಮ ಬಡಬಗ್ಗರಿಗೆ ಉಪಯೋಗವಾಗುವ ಹಾಗೆ ಬಾಗಲ್‌ಕೋಟೆಯಲ್ಲಿ ಹೌಸಿಂಗ್ ಬೋರ್ಡ್ ಮುಖಾಂತರ ಮನೆಗಳನ್ನು ಆದಷ್ಟು ಬೇಗ ಕಟ್ಟಿಸಿಕೊಟ್ಟರೆ ನಮಗೆ ಸಮಾಧಾನವಾಗುತ್ತದೆ, ೧೦ ವರ್ಷಗಳ ಹಿಂದೆ ೫ ಸಾವಿರ ರೂಪಾಯಿಗಳಿಗೆ ಕಟ್ಟುತ್ತಿದ್ದ ಮನೆ ಇವತ್ತು ೧೫.೨೦ ಸಾವಿರ ಆದರೂ ಕಟ್ಟುವುದಕ್ಕೆ ಆಗುವುದಿಲ್ಲ, ಬೆಲೆಗಳು ಅಷ್ಟು ವಿಪರೀತವಾಗಿ ಏರಿದೆ.

೩.೦೦ ಪಿ.ಎಂ.

ಅದರಲ್ಲಿ ಮಾಡಬೇಕೆಂದು ಇವರು ಇದರಲ್ಲಿ ಮಾಡಬೇಕೆಂದು ಅವರು ಹೀಗಾಗಿ, ಅದಕ್ಕೆ ಬೇರೆ ಹಾದಿ ಹುಡುಕತಕ್ಕದ್ದು ಬಹಳ ಕಷ್ಟದಾಯಕವಾದ ಕೆಲಸವಾಗಿದೆ. ಬಡಬಗ್ಗರಿಗೆ ನೂರರಲ್ಲಿ ೭೫ ರೂಪಾಯಿಗಳನ್ನು ತುಂಬಿದ್ದಾರೆ, ಮತ್ತು ಬಾಕಿಯಾದನ್ನು ಸರ್ಕಾರದವರು ಕೊಡಬೇಕೆಂದು ಹೇಳಿದ್ದಾರೆ. ಅದು ಮಂಜೂರಾಗಿ ಬೆಂಗಳೂರಿನಲ್ಲಿ ಬಿದ್ದಿದೆ. ಆದ್ದರಿಂದ ಆ ಬಗ್ಗೆ ಬೇಗನೆ ಆಸ್ಥೆ ವಹಿಸಿ ಆದಷ್ಟು ಜಾಗ್ರತೆ ಮುಗಿಸಬೇಕೆಂದು ಹೇಳುತ್ತೇನೆ. ನಮಗೆ ಅವಶ್ಯಕವಾಗಿ ಬೇಕಾಗಿರತಕ್ಕದ್ದು, ಅನ್ನ—ಅರಿವೆ ಹಾಗೂ ವಸತಿ. ಇವುಗಳ ಪೈಕಿ ವಸತಿ ಮೂರನೇ ವಿಷಯ. ಇದರ ಬಗ್ಗೆ ಆಸ್ಥೆ ವಹಿಸಿ ತಾವು ಮತ್ತು ತಮ್ಮ ಅಧಿಕಾರಿಗಳು ಮನಮುಟ್ಟಿ ದುಡಿದರೆ ಬಡಬಗ್ಗರಿಗೆ ತುಂಬಾ ಉಪಕಾರ ಮಾಡಿದಂತಾಗುತ್ತದೆ ಎಂದು ಹೇಳುತ್ತಾ, ಮಾನ್ಯ ಅಧ್ಯಕ್ಷರು ಗಂಟೆ ಬಾರಿಸುವುದಕ್ಕೆ ಮೊದಲೇ ನನ್ನ ಭಾಷಣವನ್ನು ಮುಗಿಸಬೇಕೆಂದು ವಿಚಾರಮಾಡಿರುವುದರಿಂದ, ಇಲ್ಲಿಗೆ ನನ್ನ ಮಾತನ್ನು ಮುಗಿಸಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ಕುಳಿತುಕೊಳ್ಳುತ್ತೇನೆ.

†ಶ್ರೀ ಜಿ.ಕೆ. ತಕ್ಕೇಡ್ (ಪರಸಗಡ) ;— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂತಹ ಈ ಗೃಹ ಖಾತೆಯ ಬೇಡಿಕೆಗೆ ನಾನು ಸಂಪೂರ್ಣವಾಗಿ ಬೆಂಬಲ ಕೊಡುತ್ತೇನೆ, ನಾವು ಚುನಾವಣಾ ಕಾಲದಲ್ಲಿ ಜನರಿಗೆ ಮನೆ ಕಟ್ಟಿಸಿಕೊಡುತ್ತೇವೆಂದು ಹೇಳಿದ್ದೆವು. ಜನರಿಗೆ ಕೊಟ್ಟಂತಹ ಆಶ್ವಾಸನೆಗಳನ್ನು ಈಡೇರಿಸಬೇಕಾದರೆ ಈ ರಾಜ್ಯದಲ್ಲಿ ಹೆಚ್ಚಿನ ಹಣವನ್ನು ನಾವು ಇವತ್ತು ಈ ಗೃಹ ಖಾತೆಗೆ ಕೊಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ನೂರಕ್ಕೆ ೩೫ ರಷ್ಟು ಜನ ಇವತ್ತು ಸ್ವಂತ ಮನೆಗಳನ್ನು ಪಡೆದಿಲ್ಲ. ಆ ಜನರಿಗೆ ನಮ್ಮ ಸರ್ಕಾರದವರು ತಮ್ಮದೇ ಆದಂತಹ ಜನತಾ ಗೃಹ ನಿರ್ಮಾಣ ಯೋಜನೆಯಿಂದ, ಮನೆಗಳನ್ನು ಕಟ್ಟಿಸಿಕೊಡತಕ್ಕದ್ದು, ಕೇಂದ್ರ ಸರ್ಕಾರದ ನೆರವಿನಿಂದ ಹುಡ್ಕೋ ಯೋಜನೆಯಲ್ಲಿ ಕಟ್ಟಿಸಿಕೊಡತಕ್ಕದ್ದು, ಹಾಗೂ ಗೃಹ ಮಂಡಳಿಯವರ ಮುಖಾಂತರ ಸಣ್ಣ ಪ್ರಮಾಣದ ಉತ್ಪಾದನೆ ಹೊಂದಿ

ರುವವರಿಗೆ ಮತ್ತು ದೊಡ್ಡ ಪ್ರಮಾಣದ ಉತ್ಪಾದನೆಯನ್ನು ಹೊಂದಿರುವವರಿಗೆ ಬೇರೆ ಬೇರೆ ರೀತಿಯ ಮನೆಗಳನ್ನು ಕಟ್ಟಿಸಿಕೊಡತಕ್ಕದ್ದು ಈ ಎಲ್ಲ ಕಾರ್ಯಗಳು ನಮ್ಮ ರಾಜ್ಯದಲ್ಲಿ ನಡೆಯುತ್ತಿವೆ. ಈ ದಿಸೆಯಲ್ಲಿ ಯಲ್ಲಿ ನೋಡಿದಾಗ ನಮ್ಮ ರಾಜ್ಯದಲ್ಲಿರತಕ್ಕ ಗೃಹ ಖಾತೆ ಬಹಳ ದೊಡ್ಡ ಖಾತೆ ಅನ್ನಿಸುತ್ತದೆ. ಇದಕ್ಕೆ ನಾವು ಗಮನ ಕೊಡಲೇ ಬೇಕು. ಹಳ್ಳಿಗಳ ಕಡೆ ನೋಡಿರಿ, ಹರಿಜನ—ಗಿರಿಜನರು ಮಾತ್ರವಲ್ಲ, ಎಲ್ಲ ವರ್ಗದ, ಎಲ್ಲ ಸಮಾಜದ, ಎಲ್ಲ ಜಾತಿಯ ಜನರಲ್ಲು ಇವತ್ತು ಬಡವರು ಅತ್ಯಂತ ಚಿಕ್ಕದಾದ ಮನೆಯಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಅವರದ್ದೇ ಆದ ಒಂದು ಸ್ಥಳ ಇಲ್ಲ ಇವತ್ತು ಯಾರು ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ, ಸಣ್ಣ ಸಣ್ಣ ಚಪ್ಪರಗಳನ್ನು ಹಾಕಿಕೊಂಡಿದ್ದಾರೆ ಅವರು ಮಳೆ—ಗಾಳಿ—ಬಿಸಿಲು ಚಳಿಯಲ್ಲಿ ಕೊರಗುತ್ತಿರುವುದನ್ನು ನೋಡಿದರೆ ಅವರಿಗೆ ಆದಷ್ಟು ಜಾಗ್ರತೆ ಮನೆಗಳನ್ನು ಕಟ್ಟಿಸಿಕೊಡ ತಕ್ಕದ್ದು ಅವಶ್ಯಕವಾಗಿದೆ. ಇವತ್ತಿನ ದಿವಸ ನಮಗೆ ಬೇಕಾದ ಜೀವನಾವಶ್ಯಕ ವಸ್ತುಗಳಲ್ಲಿ ಅನ್ನ, ಅರಿವೆ ಹಾಗೂ ವಸತಿ ಇವು ಬಹಳ ಮುಖ್ಯವಾದವುಗಳು. ಅನ್ನ ನಮ್ಮ ರಾಜ್ಯದಲ್ಲಿ ಸ್ವಾವಲಂಬಿಯಾಗಿದೆ ಅರಿವೆ ನಮಗೆ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಸ್ವಾವಲಂಬಿಯಾಗಿದೆ, ಆದರೆ ಈ ದೇಶದಲ್ಲಿ ವಸತಿ ವಿಷಯದಲ್ಲಿ ಸ್ವಾವಲಂಬಿಯಾಗಿಲ್ಲ. ಯುದ್ಧ ಕಾಲದಲ್ಲಿ ಯಾವ ರೀತಿ ಕೆಲಸ ಮಾಡುತ್ತಿದ್ದರೋ ಅದೇ ರೀತಿ ಇವತ್ತಿನ ದಿವಸ ಈ ಗೃಹ ನಿರ್ಮಾಣ ಯೋಜನೆಯನ್ನು ಕೈಗೊಳ್ಳಬೇಕು. ಇದು ಬಹಳ ಪ್ರಾಮುಖ್ಯವಾಧ ವಿಚಾರ. ಇವತ್ತು ಮನೆ ಕಟ್ಟಿಕೊಳ್ಳಲು ಕೇವಲ ೧೨ ನೂರು ರೂಪಾಯಿಗಳನ್ನು ಕೊಡುತ್ತಿದ್ದೀರಿ, ಅದು ಏನೇನು ಸಾಲದು ನಾನು ಸ್ಪಷ್ಟವಾಗಿ ಹೇಳುತ್ತೇನೆ, ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ಹೆಚ್ಚಿನ ಗಮನ ಕೊಡಬೇಕು ಎಂದು. ಇವತ್ತಿನ ದಿವಸ ಶಾಲಾ ಮಕ್ಕಳಿಗೆ ಒಂದು ಕೊಠಡಿಯನ್ನು ಕಟ್ಟಿಸಿಕೊಡಬೇಕೆಂದರೂ ಕನಿಷ್ಟ ಪಕ್ಷ ೧೦ ಸಾವಿರ ರೂಪಾಯಿಗಳನ್ನಾದರೂ ಖರ್ಚು ಮಾಡಬೇಕಾಗುತ್ತದೆ, ಅದರಲ್ಲಿ ೫ ಸಾವಿರ ರೂಪಾಯಿಗಳನ್ನಾದರೂ ಸರ್ಕಾರ ವತಿಯಿಂದ ಕೊಡಬೇಕಾಗುತ್ತದೆ. ಆದರೆ ಇವತ್ತು, ಹಳ್ಳಿಗಳ ಕಡೆ ಗೊಲ್ಲರು, ಕಂಚುಗಾರರು, ಇತ್ಯಾದಿ ಜನರು ಹರಿಜನ—ಗಿರಿಜನರಿಗಿಂತ ಕನಿಷ್ಟ ತರಗತಿಯಲ್ಲಿ ವಾಸಿಸುತ್ತಿದ್ದಾರೆ. ಅಲ್ಲಿರತಕ್ಕಂತ ದುರ್ಗಿಗುಡಿ, ಹನುಮಂತನ ಗುಡಿ, ಹಾಗೂ ಧರ್ಮಶಾಲೆಗಳಲ್ಲಿ ವಾಸಿಸಿಕೊಂಡು ಅಲ್ಲೇ ಅಡಿಗೆ ಮಾಡಿಕೊಂಡು ಮಳೆ-ಚಳಿಗಾಲದಲ್ಲಿ ತುಂಬಾ ಕಷ್ಟಪಡುತ್ತಿದ್ದಾರೆ: ಯಾವ ದೇವಸ್ಥಾನಗಳಲ್ಲಿ ನೋಡಿರಿ, ಅಲ್ಲಿ ಬಡವರು ವಾಸ ಮಾಡಿಕೊಂಡಿದ್ದಾರೆ ಇವತು ಈ ಖಾತೆಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ನಿಜವಾಗಿ ಯಾರು ಕಷ್ಟದಲ್ಲಿದ್ದಾರೆ, ಯಾರಿಗೆ ವಾಸಕ್ಕೆ ಮನೆಗಳಿಲ್ಲ ಅಂಥವರನ್ನು ಹುಡುಕಿ ಅಂಥವರಿಗೆ ಮನೆಗಳನ್ನು ಕಟ್ಟಿಸಿ ಕೊಡತಕ್ಕ ಏರ್ಪಾಡನ್ನು ಮಾಡಬೇಕೆಂದು ಹೇಳುತ್ತೇನೆ. ನಮ್ಮ ಅರಣ್ಯ ಖಾತೆ ಬಹಳ ದೊಡ್ಡದ್ದು, ಅದರಲ್ಲಿ ಸಾಕಷ್ಟು ಕಟ್ಟಿಗೆಗಳು ಸಿಗುತ್ತವೆ ಹೀಗಿರುವಾಗ ನಾವೇ ಇಟ್ಟಿಗೆಗಳನ್ನು ತಯಾರಿಸಿ ಮನೆಗಳನ್ನು ಕಟ್ಟಿಸಿಕೊಡುವುದು ಸೂಕ್ತವಾದುದು. ಇವತ್ತು ಜನತಾ ಗೃಹಗಳನ್ನು ನಿರ್ಮಾಣ ಮಾಡಲು ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದಾರೆ. ನಾನು ಸಮಗ್ರ ಬೆಳಗಾಂ ಜಿಲ್ಲೆಯಲ್ಲಿ ನೋಡಿದ್ದೇನೆ. ಅಲ್ಲಿ ನೂರಕ್ಕೆ ೫೦ ಮನೆಗಳನ್ನು ಚನ್ನಾಗಿ ಕಟ್ಟಿಸಿದ್ದಾರೆ. ಅದನ್ನು ಸ್ವಾಗತಿಸುತ್ತೇನೆ. ಆದರೆ ಕೆಲವು ಕಡೆ ನೂರಕ್ಕೆ ೨೫ ಮನೆಗಳು ಈಗಾಗಲೇ ಬಿದ್ದು ಹೋಗಿವೆ ೧೦ ಮನೆಗಳು ಕಟ್ಟುವ ಪೂರ್ವದಲ್ಲೆ ಬಿದ್ದು ಹೋಗಿವೆ ಮಾನ್ಯ ಪರಪ್ಪನವರು ಮಾತನಾಡುತ್ತಾ ಹೇಳಿದರು, ಯಾವ ರೀತಿ ಮನೆಗಳನ್ನು ಕಟ್ಟಿಕೊಂಡು ಹೋಗುತ್ತಾರೋ ಅದೇ ರೀತಿ ಹಿಂದಿನಿಂದ ಬಿದ್ದು ಹೋಗುತ್ತಿರುತ್ತವೆ ಎಂದು. ಇದು ಸತ್ಯವಾದ ಮಾತು. ನನ್ನ ಕ್ಷೇತ್ರದ ಮುಗಳವಳ್ಳಿ ಗ್ರಾಮದಲ್ಲಿ ಕಟ್ಟಿದ ಎಂಟೇ ದಿವಸದಲ್ಲಿ ಒಂದು ಮನೆ ಬಿದ್ದು ಹೋಗಿದೆ. ಆದರೂ ಕೂಡ ಆ ಕಡೆ ಯಾರೂ ಗಮನ ಹರಿಸಿಲ್ಲ. ಆದ್ದರಿಂದ ೧೨ ನೂರು ರೂಪಾಯಿಗಳಿಗೆ ಒಂದರಂತೆ ಮನೆಗಳನ್ನು ಕಟ್ಟಿದರೆ ಏನೇನೂ ಪ್ರಯೋಜನವಾಗುವುದಿಲ್ಲ ಸಾಧ್ಯವಾದಷ್ಟು ಉತ್ತಮವಾದ ಮನೆಗಳನ್ನು ಕಟ್ಟಿಸಿ ಕೊಡಿ ಎಂದು ಹೇಳುತ್ತೇನೆ. ಕನಿಷ್ಟ ಪಕ್ಷ ೫ ಸಾವಿರ ರೂಪಾಯಿಗಳನ್ನು ಸರ್ಕಾರದ ವತಿಯಿಂದ ಕೊಟ್ಟು ಅವರಿಂದ ೨ ಸಾವಿರ ರೂಪಾಯಿಗಳನ್ನು ಹಾಕಸಿ, ಸುಮಾರು ೭ ಸಾವಿರ ರೂಪಾಯಿಗಳನು ಖರ್ಚು ಮಾಡಿ ಮನೆ ಕಟ್ಟಿದರೆ ಅದರಲ್ಲಿ ೫ಜನ ಇರುವ ಒಂದು ಸಂಸಾರ ಇರುವುದಕ್ಕೆ ಅವಕಾಶವಾಗುತ್ತದೆ. ಇವತ್ತು ೪ ಮೊಳ ಜಾಗದಲ್ಲಿ ಚಪ್ಪರ ಹಾಕಿಕೊಂಡು ವಾಸಿಸುತ್ತಿದ್ದಾರಲ್ಲ ಅವರ ಕಷ್ಟ ಕಾರ್ಪಣ್ಯಗಳನ್ನು ನೋಡಬೇಕಾಗಿದೆ. ಜನತೆಗೆ ಚುನಾವಣಾ ಕಾಲದಲ್ಲಿ ಕೊಟ್ಟಂತಹ ಆಶ್ವಾಸನೆಗಳನ್ನು ಈಡೇರಿಸಬೇಕಾಗಿದೆ. ಈ ಮಾತನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅವಶ್ಯಕವಾಗಿ ಗಮನಿಸಬೇಕಾಗಿದೆ. ಇವತ್ತು ಗೃಹ ನಿರ್ಮಾಣ ಮಂಡಲಿಗೆ ಶ್ರೀಮಾನ್ ಈಶ್ವರಪ್ಪನವರು ಎಂಬ ಒಳ್ಳೆಯ ಅಧ್ಯಕ್ಷರು ಬಂದಿದ್ದಾರೆ. ಅವರು ಹಿಂದೆ ವಕೀಲರಾಗಿದ್ದವರು ತುಂಬಾ ಸಮರ್ಥರಿದ್ದಾರೆ. ಕೇವಲ ಬೆಂಗಳೂರು ನಗರದಲ್ಲಾಗಲೀ, ಅಥವಾ ಜಿಲ್ಲಾ ಕೇಂದ್ರಗಳಲ್ಲಾಗಲೀ ಮನೆಗಳನ್ನು ಕಟ್ಟಿಸುವುದು ಆಗಬಾ

ರದು ಐದುಸಾವಿರ ಮಂದಿಗಿಂತ ಹೆಚ್ಚು ಮಂದಿ ವಾಸವಾಗಿರುವ ಪ್ರತಿ ತಾಲ್ಲೂಕಿನಲ್ಲಿಯೂ ಕೂಡ ಗೃಹ ನಿರ್ಮಾಣ ಮಂಡಲಿಯುವರಿಂ ಸೈಟುಗಳನ್ನು ಪಡೆದು ಮನೆಗಳನ್ನು ಕಟ್ಟಿಸಿಕೊಡತಕ್ಕಂತಹ ಒಂದು ಯೋಜನೆಯನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಈ ರೀತಿಯಾಗಿ ಒಂದು ಬೃಹದಾಕಾರವಾದ ಯೋಜನೆಯನ್ನ ಹಾಕಿಕೊಂಡು ಕಾರ್ಯಕ್ರಮವನ್ನು ನಾಡಿನಾದ್ಯಂತ ಹೆಮ್ಮಿ ಕೊಂಡರೆ ಇವತ್ತು ಸಾಮಾನ್ಯವಾಗಿ ಎಲ್ಲ ಜನರಿಗೂ ವಾಸಕ್ಕೆ ಮನೆ ಸಿಗುವ ಸಾಧ್ಯತೆ ಇದೆ ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†SRI P.F. RODRIGUES(Minister of State for Housing).—Mr.Speaker Sir, As many as 9 hon Members have participated in this discussion on my Demand. Very fruitful suggestions have been made and at the same time very pungent remarks have also been made regarding housing.

At the very outset I wish to point out that there is a basic misconception on the Janatha Housing Scheme of the Government, It should be understood clearly that the Government is not constru ting houses and given them. On the other hand, Government is only enabling individuals to construct houses. This scheme applies to those people who do not possess any site and who do not have a house provided their income does not exceed a certain limit. It is, only those people who are entitled to the benefit of the scheme and not anybody else. You may very well ask me why the Government is not constructing and giving houses. The reason is obvious. If the Government were to construct houses, they will require crores and crores of rupees. An hon. Member made the suggestion that the Government should construct houses costing Rs. 5.000 each and give to the poor people. I am afraid we will require Rs. 500 crores to achieve this object. I am afraid it will be a near impossibility. The tas is very colossal. Nevertheless, the Government is tackling this issue and what the Government is doing is to enable the people to construct houses. A man who wants to live in a house should feel that the house is his and that he is working for that house. Then and then alone he will take care of the house and will have affinity and affection for the House. Otherwise what will happen is that he will remain like a man who is living in a rented house. If tomorrow the tile is broken he will report to the B. D. O. Similarly, if for any reason the wall collapses he will run to the B D. O. and inform him about it and ask him to construct it. Such a contengency should not happen when a man goes and occupies his house It may be a hut or a place not fit for human hapitation. Nevertheless, he has been looking after it, maintaining it and spending money on it, Therefore, it is incumbent on him to spend some money to make the house is own After all we are giving him a free site. I do agree that it is not possible to put up a house with Rs. 2,000 that we have been giving hitherto, Rs. 1000 by way of loan and Rs. 1,000 by way of subsidy.

True, there has been an escalation all along, in the cost of wood, stones, labour and in everything. There has been a persistent demand in this House as well as outside that this amount given by the Government is insufficient and should be more. I am very happy to inform the House through you, Sir, that the Government has taken a decision to increase the subsidy by Rs. 500. So, from now onwards instead of Rs. 2,000 it will be Rs. 2,500. This is going to be the scheme from 1979-80. There has also been a demand in this House as well as outside that it is difficult to construct houses because the cost of wood is raising so steeply that it is costlier than gold. To some extent I am inclined to agree with this view. This aspect of the difficult situation has been taken note of by the Government and in this respect also Government has taken a decision that wherever necessary for these beneficiaries Government will supply wood for doors and windows and also rafters and reepers costing Rs. 1,500. It will be available from B. D. O. He will take it to the place where the house is constructed. Similarly, if these people are given tiles, they will also been taken to the place of construction. This is not an imposition on the people. If for any reason any of the beneficiary wants money and says he will look after the construction himself, we will give him the entire Rs. 1,500. Wherever they want the assistance of Government will hereafter make it available to them so that houses may be constructed, so that they may not feel the burden of the cost of wood that has be come so prohibitive. We are going to introduce this new scheme.

My Friend Sri Ramadev while initiating the debate yesterday said that the Government has no statistics as to the number of siteles people. I beg to differ from him; we do have those statistics. I may say that till the end of January 1979, 9,63,934 families are siteless in Karnataka and it is on the increase. I may make it clear that this Janatha housing is only rural and not urban.

There has also been a criticism in this House that the Demand of Rs. 24 crores is insufficient. In the implementation of Janatha Housing Programme we are going to spend Rs. 20 crores ... Rs. 13 crores from our Exchequer and Rs. 7 crores from the HUDCO. Last year we spent from our State Treasury Rs, 10 crores and Rs. 5 crores came from HUDCO. If it is Rs. 20 crores on a rough estimate each of the districts will be getting Rs. 1 crore for the implementation of this scheme. I do not know whether one crore will be sufficient for the implementation of this scheme. If it is insufficient, please let me know and I will see what can be done in the matter. Therefore, I say that this 24 crores that is set apart for the scheme is in no way less. It was less last year and from this year onwards it is on the increase.

As far as HUDCO scheme is concerned there is what is known as experimental low cost housing whereunder we are giving Rs. 2,000, wood of the value of Rs. 1000 and Rs. 250 in cash. This scheme is meant to those who are able to have their own patch of land and having some ramshackle hut. For improving it we give the assistance There is no hard and fast rule; there is no rigidity in giving benefit to the poor people in the rural parts. There is also a scheme knowns as hutment scheme wherein we give Rs. 250. My hon. friend Sri Shetty from Coondapur was saying that this scheme should not be made applicable to Dakshina Kannada District. I agree. But it is popular in the interior parts where rainfall is less. Wherever necessary we give it and we never impose any scheme. This is how the schemes are going on.

SRI B. V. KAKKILAYA.— There are a number of municipalities ... rather recently converted into municipalities. We have converted all panchayats into municipalities. To such places the Janata housing scheme will not come in because that scheme is applicable to places where the population is less than 5000. Will you be able to help them to build up houses?

SRI P. F. RODRIGUES.— I am grateful to the hon. member for raising this question. In fact I wanted to advert to it a little later. Consequent on the conversion of major panchayats into municipalities, some villages have come within the purview of the municipalities As per the Karnataka Municipalities Act, the Janata houses may not fit in there. The matter will be looked into and we will see how we can solve the problem. Nevertheless as far as poor people in urban areas are concerned, the Government has a plan. We have got 3 crores for them. As far as people in the municipal areas are concerned, this job of construction of houses has to be undertake by the respective municipalities. They must prepare a scheme and send to us and we will try to help them to construct these houses. We have a scheme even for that.

Yesterday my hon. friend Sri Ramdev stated that this is a colossal proble and the Government alone will not be able to solve this problem. I am in complete agreement with him. It is true that it will be difficult for the Government alone to solve this problem. Therefore I appeal to the service minded institutions to come forward in solving this problem in the rural Karnataka. I am happy that this scheme is taken note of and some service-minded institutions have come forward. YMCA has constructed some houses in the outskirts of Bangalore. This appeal has been received well the press. The Deccan Herald in its editorial dated 11th September 1978 has wel-

comed this new move and has commended that the service-minded effort of the YMCA in constructing houess is taken up all over the State and new houses are coming up at the hands of the service minded institutions.

(MR. CHAIRMAN (SRI VEERAPPA MOILY) in the Chair)

Yesterday the hon. member Sri Ramdev said that he does not own any house of his own in Bangalore. As far as Bangalo e City is concerned it is tackled by the B.D.A. But, nonetheless the matter is also lo ked after by the Housing Board. The principle is, wherever the B.D.A is doing the Housing Board should not step in. This collosal problem cannot be overcome in a day. It will have to be done slowly and steadily. My friend said that the cost is increasing on account of land also. I am in agreement with him. That is why Usban ceiling law is there. I hope early implementation of it will be possible. If and when it is implemented excess land is determined and price fixed under the Act. Therefore that will be a constraint on the step rise of prices of land.

Wherever the City improvement Trust Boards are there, they prepare layout and give sites.

SRI B. B. SAYANAK.— In Belgaum there is City Improvement Trust Board, It is acquiring land. But to whom is it giving? It is auctioning the sites and rich people have taken. It is not giving to poor and weaker sections of the population.

3-30 P.M.

SRI P.F. RODRIGUES—The City Improvement Trust Boards do not come under my jurisdiction; they are functioning under a different Ministry. The City Improvement Trust Boards do not undertake construction of houses; they only make available the sites.

Yesterday, hon. member Sri Ramdev stated about the problems of pavement dwellers in the City. I am also aware of the problem. In fact, it is in my mind as to how to solve this problem. I have made a suggestion to give them what is known as 'night dwelling shelters' to facilitate such people. Pavement dwellers have no houses, they work during the day and sleep during nights on pavements of Bus stands, Railway stations, etc. We are thinking whether it is possible to provide night shelters at a nominal fee of 25 or 30 paise per night. It is still in a nebulous stage. Various problems are there and let us try to tackle them one by one. He also made a good suggestion that the banks should come forward in solving this problem. In this connection, I wish to inform the House that I had the

good fortune of addressing a function organised by the Banking institutions, and I said that they must set apart a portion of their profit for providing housing facilities. A Director from the Reserve Bank had come who said that they must identify themselves in the rural reconstruction of the country, specially in the matter of housing. I have a Report about it, and I do hope that as per the suggestion of the Reserve Bank, the Commercial Banks will identify themselves in this mighty cause of rural reconstruction.

Incidentally, my friend Sri Ramdev also stated yesterday that out of the houses constructed by the Housing Board at Yelahanka, only 13 have been occupied. It is true. This is because of the problem of giving electric connections, drainage connections and water supply connections. These are things which are out of my hands. We have paid the amount to these Boards and they have to this job. They too have got their own constraints and difficulties. Nonetheless, to those who have occupied the buildings, water is being supplied from the borewell that has been dug. We do hope that this matter will receive the attention of the Electricity Board and the Water Supply and Sewerage Board, and every effort will be made to see that these schemes are implemented early.

Hon. member Sri Ramdev also made an appeal that houses should be constructed for teachers. I agree that houses have to be constructed for teachers just as they are being constructed for journalists and others. I must say that in some places where the Housing Board has constructed houses for teachers, the Board is called upon to look to the purse of the teachers—very often the purse is hidden for obvious reasons. If a teacher is getting a salary of 500 per month, as per rules he has to pay Rs. 50 towards rent, i.e., 10 per cent of his salary. Supposing if a teacher in a place can get a house for a rent of Rs 20 will he occupy the house constructed by the Housing Board by paying Rs. 50? When there is a net saving of Rs. 30 he may not like to occupy a house for which he has to pay Rs. 50. As such many houses meant for teachers are still vacant and they are considering to hand them over to somebody else. We have therefore made it clear that when a request comes from the institution for allotment of houses for teachers the institution has to guarantee that the rents will be paid by the institution. Otherwise, it will be difficult for us to construct houses and collect rent from them. The teachers are liable for transfer. Therefore, the payment of rent has to be assured to us.

He also made a suggestion that the Income tax Act has to be amended. This will have to be brought to the notice of the Hon'ble Union Minister for Finance Sri Charan Singh. It is a Central Act,

and it is from the Centre that an amendment has to come. So also, about the Rent Control Act. Though it comes under the control of my colleague Sri Basavalingappa, if a definite suggestion is made, we will try to do something in this matter.

There has been a critcism from hon. members of South Kanara that I have never visited that area on account of the hot climate. Sir, fortunately, I also come from that area, the climate of which is rather worse than the other areas of South Kanara. By and large, the District of South Kanara is very warm; it is very hot, not only hot but it is uncomfortable on account of the perspiration we have. The districts of Gulbarga and Raichur may be hot, but fortunately they do not perspire like us. It is not the heat that has kept me away from visiting the area. Soon after the Budget Session is over, I will definitely go to that place unmindful of the heat and will try to solve the problem. I will definitely pay a visit if my visit is going to be helpful to the area.

An hon. member from Sindgi said that some of the officers are not doing their job well. It has come to the notice of the Government that some of the Block Development Officers are not doing their job diligently. As there will always some black-sheep in every herd, there will be some black sheep amongst the officers also. I shall try to bring them to order. The hon. member referred to the huts constructed by the poor people. It is absolutely true that when I had visited that area, I visited some of huts built by those poor people. While entering into their houses. I had to bend my body and some of the houses were so bad, I had to creep into their houses. This is the standard of houses which they have constructed. I could not withstand to the horribly way of their living. I have informed the people of Sindgi that I shall try to solve their housing problem as early as possible.

SRI B.V. KAKKILAYA.—Has it come to your notice of the Minister that some of the Officers have insisted that if they have got 5 cents of land, then only the Janatha Housing scheme will be implemented, otherwise not. In some of the villages less than 5 cents of land has been distributed to some people for want of land. When such people approached the authorities, they have been informed that houses will not be given to them since they have got only 5 cents of land. Has this fact to your notice; if that is so, will you see that those people also get the houses?

ಶ್ರೀ ಪಿ. ರಾಮದೇವ್.--ಮಾನ್ಯ ಅಧ್ಯಕ್ಷರೇ, ನನ್ನದೊಂದು ಸಣ್ಣ ಸ್ಪಷ್ಟೀಕರಣ ಏನೆಂದರೆ...

SRI B. BHASKARA SHETTY.—According to the allotment made by the business Advisory Committee, both the demands will have to be

completed today only. Therefore I request the hon. members not to interrupt the Hon. Minister till he completes his reply to the debate.

SRI S.M. SHEERNALLY CHANDRASEKHAR.—The demand may discussed but the reply can be taken up tomorrow.

SRI P.F. RODRIGUES.—This matter has come to my notice

SRI B.B. SAYANAK.—If the debate is lively then some interruptions should be allowed.

MR. CHAIRMAN—The repetitions should not become repetitive. The tempo cannot be maintained at all.

SRI P.F. RODRIGUES.—It is true that in some places such a thing has happened and that has come to my notice. There is no question of discriminating the people for the simple reason that they got more land and some got less land, everybody should get a house. Incidentlly I would like to inform the House that apart from helping them from constructing the houses, we are giving them two cocoanut plants so that they may look after the cocanut plants well and they could supplement their income by the yield of these trees. It is common knowledge that each nut costs about Rs. 1.50. Suppose if there are 100 nuts, the beneficiary can realise Rs. 150. This is one of the ways of improving their economic conditions.

SRI C.M. ARMUGHAM.—Government in their wisdom has thought fit to construct Janatha Houses treating some amount as loan and some amount at subsidy. In addition to this, the Goverment should think of giving loans to those who are employed in the Government who are now not eligible for any assistance. The Hon. Minister is simply repeating what his officers have fed him with the notes. He should have come out with a statement regarding the next year programme and the amount provided thereof; the amount they propose to get from the HUDCO; the number of applications pending before you. While replying to the debate, he must come prepared to highlight on the points which have mentioned. We are not enamoured of Janatha Houses and we are not going to give compliments to the government on this count.

SRI S.R. BOMMAI.—In Tamil Nadu so far as Janatha Scheme is concerned, they have done much better than us.

SRI C.M. ARMUGHAM.—I would like you to improve the present system of the Janatha houses which is being constructed by the contractors.

SRI P.F. RODRIGUES--I have concentrated my attention exclusively on the Janatha housing scheme in the rural parts and I have never come to the urban part. Sir, in the rural areas where the people are

working on the farms, what better type of accommodation can we provide to them. These people do not have a house of their own. Already I gave a description of the standard of living of those people living in Sindgi. Compared to their houses, our government houses are far better than theirs. The hon. Leader of the opposition said that the Janatha houses constructed in Tamil Nadu are better than us, I beg to differ from him. In fact an officer of the Tamil Nadu had come here to find what is the technique adopted in the construction of the Janatha houses. He stayed here and studied all aspects of this Scheme. What I was emphasising here is that we are helping the beneficiaries with cocanut plants for his economic upliftment. A suggestion has been made that the houses should not be constructed by contractors. In the past there has been some sort of activities where the houses have been constructed by the contractors. Now it has been stopped. It has to be done by the beneficiaries or with their help. The contractor has been completely eliminated.

As far as houses constructed by the Housing Board it has been constructing houses mostly in the towns and cities and not in rural areas. In the construction of these houses by the Housing Board, the problem has not been attended to on a scientific basis. That is how some houses have not been completed. Still some spill over works are there, which require some amount of money. In future, before the construction of houses a demand survey will be made to know what exactly the number of houses needed and in which place etc., After such survey, the Housing Board will go to construct the houses. There is no point in putting up houses of cheaper variety. Nodoubt, in the past there has been some draw-backs. We are trying to improve upon this scheme and see that hood houses are constructed. Moreover, there has been escalation in prices of cement, stell and labour. Further, the Housing Board had to face a sort of click from these contractors. There is an Association of these Contractors. As a result of which they have united and quote higher tenders. Because, of this we had to re-tender; with the result, the time consumed will be more. For this, we have decided to have a Construction Cell in the Housing Board itself. With this we could do real service in the matter of providing houses to the people.

Hon. Member from Bagalkot made some suggestion that houses should be put up there. One difficulty is there There is a fear about the submersion due to Almatti dam. Unless and untill we definitely know the extent of submersion because of Almatti dam, it is not possible to construct houses there. I learn that the Housing Board has a scheme to put up houses there. But because of the proposed submersion, we could not take up that scheme.

Another suggestion made was that whenever they acquire land, people should not be allowed to go to Court. It is not possible, because we can't prevent people going to the Court. With these words, I pray that the Demands.

(Several Members stood up for asking clarifications)

MR. CHAIRMAN--Those who have spoken, may ask some clarifications.

ಶ್ರೀ ಜಿ. ಬಿ. ಶಂಕರರಾವ್— ಯಾರು ಮಾತನಾಡಿದ್ದಾರೆ ಅವರಿಗೆ ಸಚಿವರಿಂದ ಉತ್ತರ ಸರಿಯಾಗಿ ಬರುತ್ತಿಲ್ಲ. ಯಾರು ಮಾತನಾಡಿಲ್ಲ ಅವರೆಲ್ಲ ಸ್ಪಷ್ಟೀಕರಣ ಕೇಳಿದರೆ ಅವರಿಗೆ ಅವಕಾಶ ಕೊಡುವುದು ಸೂಕ್ತವಲ್ಲವೆಂದು ಹೇಳುತ್ತೇನೆ.

MR. CHAIRMAN.--In all fairness, I think it is a healthy tradition to allow clarifications to members who have spoken. If points are not properly replied, they could ask such clarifications. Otherwise, if new points are raised the Minister will not be in a position to answer those. Kindly confined to the policy matters.

SRI QUAMARUL ISLAM.-- I want to ask some clarifications. The Housing Board constructs so many houses. But the houses constructed are not in good condition. During rainy season the condition of those houses are very bad. So, I want to know whether any survey has been made about the condition of these houses?

ಶ್ರೀ ಕೆ. ರಾಮಭಟ್.— ಈಗಿನ ಸರ್ಕಾರದ ಅಧಿಕಾರಿಗಳು, ಹಾಗೂ ಇಲಾಖೆಯ ಅಧಿಕಾರಿಗಳು ಹೆಚ್ಚಾಗಿ ಹಳ್ಳಿಗಳಿಗೆ ಹೋಗಿ ಕೆಲಸ ಮಾಡತಕ್ಕಂತಹ ಒಂದು ಪದ್ಧತಿ ಈಗಿನ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಕಾರ ಇದೆ. ಆ ರೀತಿ ಕೆಲಸ ಮಾಡುವವರಲ್ಲಿ ಗ್ರಾಮಸೇವಕರು, ವಿಲೇಜ್ ಅಕೌಂಟೆಂಟ್, ಆರೋಗ್ಯ ಅಧಿಕಾರಿ, ಹೆಲ್ತ್ ಅಸಿಸ್ಟೆಂಟ್ ಅವರೆಲ್ಲಿರೂ ಹಳ್ಳಿಗಳಿಗೆ ಹೋಗಿ ನೆಲೆಸುವಂತಹ ಸಂಧರ್ಭದಲ್ಲಿ ಅವರಿಗೆ ಸರ್ಕಾರದದಿಂದ ಕ್ವಾರ್ಟರ್ಸ್‌ನ್ನು ಕಟ್ಟಿಸಿಕೊಡುವ ಯೋಜನೆ ಏನಾದರೂ ಹಾಕಿದ್ದೀರಾ? ಅದರ ಬಗ್ಗೆ ಏನಾದರು ಏರ್ಪಾಡು ಮಾಡಿದ್ದೀರಾ?

೪-೦೦ ಪಿ.ಎಂ.

ಶ್ರೀ ಎಸ್. ಎಸ್. ಅರಕೇರಿ.— ಮಾನ್ಯ ವಸತಿ ಸಚಿವರು ದೀನದಲಿತರ ಸಲುವಾಗಿ ಹರಿಜನ-ಗಿರಿಜನರ ಸಲುವಾಗಿ ೧೯೭೯-೮೦ ನೇ ಸಾಲಿನಲ್ಲಿ ಪ್ರತ್ಯೇಕವಾಗಿ ಎಷ್ಟು ಹಣವನ್ನು ಒದಗಿಸಿದ್ದಾರೆಂಬುದನ್ನು ಸ್ಪಷ್ಟಪಡಿಸಲಿಲ್ಲ. ಹರಿಜನ-ಗಿರಿಜನರ ಸಲುವಾಗಿ ಈ ವರ್ಷದಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಿ ಕೊಡುತ್ತೀರಿ ? ಇದಕ್ಕಾಗಿ ಹೊಸದಾಗಿ ಏನಾದರೂ ಯೋಜನೆಗಳು ಇವೆಯೇ ? ಎಂಬುದನ್ನು ದಯ ಮಾಡಿ ತಿಳಿಸಬೇಕು.

ಕಾಪು ಸಂಜೀವ ಶೆಟ್ಟಿ.— ಜನತಾ ಮನೆಗಳನ್ನು ಒಂದೇ ಕಡೆ ಕಟ್ಟಬೇಕೆಂದು ಸರ್ಕಾರದ ನಿಯಮ ಇದೆ. ಇದರಿಂದ ನಮ್ಮಲ್ಲಿ ಹಾಗೂ ಉತ್ತರ ಕನ್ನಡದಲ್ಲಿ ಹಾಗೂ ಶಿವಮೊಗ್ಗದಲ್ಲಿ ಕೃಷಿ ಕಾರ್ಮಿಕರಿಗೆ ಕೆಲಸಕ್ಕೆ ಹೋಗುವುದಕ್ಕೆ ತೊಂದರೆಯಾಗಿದೆ, ಆದ್ದರಿಂದ ಸ್ವಂತ ಸ್ಥಳವಿದ್ದವರಿಗೆ ರಿಯಾಯತಿಯನ್ನು ಕೊಟ್ಟು, ಅವರ ಸ್ವಂತ ಸ್ಥಳದಲ್ಲೇ ಮನೆ ಕಟ್ಟಿಕೊಳ್ಳುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಯಂ. ಟಿ. ಫರೀದ್.— ಜನತಾ ಗೃಹ ನಿರ್ಮಾಣ ಯೋಜನೆಯಲ್ಲಿ ಎರಡು ವಿಧ ಇದೆ. ಒಂದು ೧೨೫೦ ರೂಪಾಯಿಗಳಲ್ಲಿ ಮನೆ ಕಟ್ಟುವುದು, ಮತ್ತೊಂದು ೨೨೫೦ ರೂಪಾಯಿಗಳಲ್ಲಿ ಮನೆ ಕಟ್ಟುವುದು. ಈ ರೀತಿ ಕೊಡುವಾಗ ಎಲ್ಲರಿಗೂ ಸರಿಯಾಗಿ ಡಿಸ್ಟ್ರಿಬ್ಯೂಷನ್ ಆಗಿಲ್ಲ. ಕೆಲವರಿಗೆ ೨೨೫೦

ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೆಲವರಿಗೆ ಕೊಟ್ಟಿಲ್ಲ. ಈ ರೇಟನ್ನು ನಾವು ೩-೪-೫ ವರ್ಷಗಳ ಹಿಂದೆ ನಿಗದಿ ಮಾಡಿದ್ದೆವು. ಇವತ್ತಿನ ದಿವಸದ ವಾತಾವರಣದಲ್ಲಿ ೧೨೫೦ ರೂಪಾಯಿ ಏನೇನೂ ಸಾಲುವುದಿಲ್ಲ. ಎಲ್ಲರಿಗೂ ೨೫೦೦ ರೂಪಾಯಿಗಳನ್ನು ಕೊಡುವುದಕ್ಕೆ ಏನಾದರೂ ಏರ್ಪಾಡು ಮಾಡುತ್ತಾರಾ ? ಎಂಬುದಕ್ಕೆ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ, ಮತ್ತೆ ಎಲ್ಲಿ ಸರ್ಕಾರಿ ಜಾಗ ಇಲ್ಲವೋ ಅಂತಹ ಕಡೆ ಖಾಸಗಿಯವರ ಜಮೀನನ್ನು ಅಕ್ವೈರ್ ಮಾಡಿಕೊಂಡು ನಿವೇಶನ ಹಂಚಬೇಕೆಂದು ಸರ್ಕಾರದ ಆದೇಶ ಇದೆ. ಆದರೆ ನಮ್ಮ ಜಿಲ್ಲೆಯಲ್ಲಿ ಇದುವರೆಗೂ ಎಲ್ಲಿಯೂ ಆ ರೀತಿ ಅಕ್ವೈರ್ ಮಾಡಿಕೊಂಡು ಕೊಟ್ಟಿಲ್ಲ. ಉಲ್ಲಾಳ ಕ್ಷೇತ್ರದಲ್ಲಿ ಒಂದು ಗ್ರಾಮದಲ್ಲಿ ಸಾಧಾರಣ ೩೫ ಸಾವಿರ ಜನಸಂಖ್ಯೆ ಇದೆ. ಆ ಗ್ರಾಮದಲ್ಲಿ ಇಷ್ಟರವರಗೂ ನಿವೇಶನವನ್ನು ಕೊಟ್ಟಿಲ್ಲ. ೧೦ ಎಕರೆ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳಬೇಕೆಂದು ನಾವು ಡಿ.ಡಿ ಸಿ. ಮೀಟಿಂಗ್‌ನಲ್ಲಿ ನಿರ್ಣಯ ಮಾಡಿ ಕಳುಹಿಸಿದ್ದೇವೆ. ಅದು ಇಷ್ಟರವರೆಗೂ ಕಾರ್ಯಗತವಾಗಿಲ್ಲ. ಆದಷ್ಟು ಬೇಗ ಇದನ್ನು ಕಾರ್ಯಗತಗೊಳಿಸಿ ಆ ಗ್ರಾಮದ ಜನರಿಗೆ ನಿವೇಶನವನ್ನು ಒದಗಿಸಿ ಕೊಡಬೇಕು.

ಶ್ರೀ ಎಂ. ಶ್ರೀನಿವಾಸ್.— ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ೧೩-೧೪ ಹಳ್ಳಿಗಳಲ್ಲಿ ಇವತ್ತಿನವರೆಗೂ ನಿವೇಶನಗಳನ್ನು ಹಂಚಿಲ್ಲ. ನಿವೇಶನ ಹಂಚುವುದಕ್ಕೆ ಅಕ್ವೈರ್ ಮಾಡಿಕೊಂಡಿದ್ದ ಜಾಗಕ್ಕೆ ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಆ ರೀತಿ ಸ್ಟೇ ಆಗಿ ೪ ವರ್ಷಗಳಾಗಿವೆ. ಸ್ಟೇ ಆರ್ಡರನ್ನು ವೆಕೇಟ್ ಮಾಡುವುದಕ್ಕೆ ಸರ್ಕಾರ ಶೀಘ್ರವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಎಂ. ಮಾದಯ್ಯ.— ಹೌಸಿಂಗ್ ಪ್ರೊಗ್ರಾಂನಲ್ಲಿ ಒಂದು ಸಂಸಾರಕ್ಕೆ ಮಿನಿಮಂ ನೀಡ್ ಎಷ್ಟು ಎಂಬುದನ್ನು ಆಲೋಚನೆ ಮಾಡಿದ ಹಾಗೆ ಕಾಣಲಿಲ್ಲ. ಕೊನೆಯ ಪಕ್ಷ ಒಂದು ರೂಮು, ಸ್ಥಾನದ ಮನೆ, ವರಾಂಡ, ಬಾತ್‌ರೂಮ್ ಇಷ್ಟಾದರೂ ಇರಬೇಡವೇ ? ಗಂಡ ಹೆಂಡತಿ ಇಬ್ಬರಿಗೋಸ್ಕರ ಎಂಬುದಾಗಿ ತಿಳಿದುಕೊಂಡು ಈ ರೀತಿ ಮಾಡಿದ್ದಾರೋ ಏನೋ ನನಗೆ ಗೊತ್ತಾಗುವುದಿಲ್ಲ. ಆ ಗಂಡ ಹೆಂಡರಿಗೆ ಮದುವೆಯಾಗುವ ಒಬ್ಬ ಮಗಳು ಇದ್ದು ಆ ಮಗಳಿಗೆ ಮದುವೆ ಮಾಡಿದರೆ, ತನ್ನ ಮಗಳು, ಮತ್ತು ಆಕೆಯ ಗಂಡ ಎಲ್ಲಿ ಮಲಗುತ್ತಾರೆ, ಇವರು ಎಲ್ಲಿ ಮಲಗುತ್ತಾರೆ ? ಆದ್ದರಿಂದ ಈ ಒಂದು ಯೋಜನೆಯಲ್ಲಿ ಕಟ್ಟಲಾಗುವ ಮನೆಗಳನ್ನು ಕೊನೆಯ ಪಕ್ಷ ಒಂದು ರೂಮು, ಸ್ನಾನದ ಮನೆ, ಬಚ್ಚಲು ಮನೆ, ವರಾಂಡ ಇರುವ ರೀತಿಯಲ್ಲಿ ಕಟ್ಟಿಸುವುದಕ್ಕೆ ಅವರಿಗೆ ಸ್ವಲ್ಪ ಜಾಸ್ತಿ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಹಳ್ಳಿಗಳಲ್ಲಿ ಹುಡ್ಕೋ ಸ್ಕೀಮಿನಲ್ಲಿ ಮನೆಗಳನ್ನು ಕೊಡುವಾಗ, ಒಂದೇ ಕಡೆ ಮನೆಗಳನ್ನು ಕಟ್ಟಬೇಕೆಂಬ ನಿಯಮವನ್ನು ಇಟ್ಟಿದ್ದೀರಿ. ಹಾಗೆ ಮಾಡಿದರೆ ಹಳ್ಳಿಗಳಲ್ಲಿ ವಾಸ ಮಾಡತಕ್ಕಂತಹ ಕೆಲವರಿಗೆ ಬಹಳಷ್ಟು ತೊಂದರೆಯಾಗುತ್ತದೆ. ಅವರಿಗೆ ಸ್ವಂತ ನಿವೇಶನ ಇದ್ದರೆ ಅದರಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಇರುವುದಿಲ್ಲ. ಸ್ವಂತ ನೀವೇಶನ ಇದ್ದರೆ ಅಲ್ಲಿಯೇ ಮನೆಯನ್ನು ಕಟ್ಟುವುದಕ್ಕೆ ಸಹಾಯ ಮಾಡಬೇಕು. ಇದರ ಬಗ್ಗೆ ಆಲೋಚನೆ ಮಾಡಬೇಕು.

ಮತ್ತೆ ತಾವು ಕೊಡತಕ್ಕಂತಹ ಗ್ರಾಂಟ್ ಸಕಾಲದಲ್ಲಿ ಮುಟ್ಟುತ್ತಿಲ್ಲ. ಮರಮುಟ್ಟು ಸಾಮಾನುಗಳನ್ನು ಸರಬರಾಜು ಮಾಡುವುದಕ್ಕೆ ನೀವು ಯಾರಿಗೋ ಕಾಂಟ್ರಾಕ್ಟ್ ಕೊಟ್ಟಿರುತ್ತೀರಿ ಆತನು ಸರಿಯಾದ ಸಮಯಕ್ಕೆ ಸರಬರಾಜು ಮಾಡುವುದಿಲ್ಲ. ಬಡವ ಹಣ ಖರ್ಚುಮಾಡಿ ಗೋಡೆಯನ್ನು ಹಾಕಿಕೊಂಡಿರುತ್ತಾನೆ ಮಳೆ ಬಂದರೆ ಗೋಡೆಯಲ್ಲಾ ಹಾಳಾಗಿ ಹೋಗುತ್ತದೆ. ಆದ್ದರಿಂದ ಸಕಾಲಕ್ಕೆ ಮರ ಮುಟ್ಟುಗಳನ್ನು ಒದಗಿಸಿ ಕೊಡುವ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಪಿ. ರಾಮದೇವ್.— ನಾನು ಕೇಳಿರತಕ್ಕಂತಹ ಮೂರು ಪ್ರಶ್ನೆಗಳಿಗೂ ಮಾನ್ಯ ಮಂತ್ರಿಗಳು ಉತ್ತರ ಕೊಡಲಿಲ್ಲ ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಮನೆಗಳಿಗೆ ಉಪಯೋಗಿಸತಕ್ಕಂತಹ ಸಾಮಗ್ರಿಗಳ ಬೆಲೆ ಗಗನಕ್ಕೆ ಏರಿದೆ. ಹಂಚು, ಸಿಮೆಂಟ್ ಕಲ್ಲು, ಮರಳು, ಇವುಗಳ ಬೆಲೆ ಗಗನಕ್ಕೆ ಏರಿದೆ. ಇವುಗಳನ್ನೆಲ್ಲಾ ಅಗತ್ಯ ವಸ್ತು ಎಂಬುದಾಗಿ ಪರಿಗಣಿಸಲು ಸಂಬಂಧಪಟ್ಟಂತಹ ಒಂದು ಶಾಸನವನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ! ಎರಡನೆಯದಾಗಿ ಯಲಹಂಕದಲ್ಲಿ ಕೆಲಸ ನಡೆದಿದೆ. ಅಲ್ಲಿ ಸುಮಾರು ೭೦೦ ಮನೆಗಳನ್ನು ವೀಕರ್ ಸೆಕ್ಷನ್‌ರವರಿಗಾಗಿ ಕಟ್ಟಿದ್ದಾರೆ. ಇದರಲ್ಲಿ ಕೇವಲ ೩೦೦ ಮನೆಗಳನ್ನು ಮಾತ್ರ ಆಕ್ಯುಪೈ ಮಾಡಿಕೊಂಡಿದ್ದಾರೆ. ಮತ್ತೆ ಮಿಡ್ಲ್ ಇನ್‌ಕಂ ಗ್ರೂಪ್‌ನವರಿಗೆ ೩೫೦ ಮನೆಗಳನ್ನು ಕಟ್ಟಿದ್ದಾರೆ. ಇದರಲ್ಲಿ ಮೂರು ಜನ ಮಾತ್ರ ಮನೆಯನ್ನು ಆಕ್ಯುಪೈ ಮಾಡಿಕೊಂಡಿದ್ದಾರೆ. ಕಾರಣ ಏನೆಂದರೆ ಉಪಯೋಗಿಸಿರತಕ್ಕಂತಹ ಸಾಮಗ್ರಿ ಸರಿಯಾಗಿಲ್ಲ. ಅದು ಯಾವತ್ತು ಬಿದ್ದು

ಹೋಗುತ್ತದೋ ಎಂಬ ಭಯ ಅವರಿಗಿದೆ. ಆದ್ದರಿಂದ ಇದನ್ನು ವಿಜಿಲೆನ್ಸ್ ಕಮಿಷನ್‌ಗೆ ಒಪ್ಪಿಸುವುದಕ್ಕೆ ತಯಾರಾಗಿದ್ದೀರಾ ? ಸುಮಾರು ೨೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಯಾರು ಇದರಲ್ಲಿ ತಪ್ಪಿತಸ್ಥರು ಇದ್ದಾರೆ ಅವರಿಗೆ ತಕ್ಕ ಶಿಕ್ಷೆಯನ್ನು ಕೊಡುವುದಕ್ಕೆ ತಯಾರಾಗಿದ್ದೀರಾ ?

ಶ್ರೀ ಜಿ. ರಾಜುಗೌಡ.— ಜನತಾ ಗೃಹಗಳನ್ನು ನೇರವಾಗಿ ಯಾರಿಗೂ ಕಾಂಟ್ರಾಕ್ಟ್ ಕೊಟ್ಟಿಲ್ಲ ಎಂಬುದಾಗಿ ಹೇಳಿದರೂ ಪರೋಕ್ಷವಾಗಿ ಕೊಟ್ಟಿದ್ದೀರಿ ಎಂಬುದಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಮನೆಗಳಿಗೆ ಬೇಕಾದ ಉಪಕರಣಗಳನ್ನು ಸರಬರಾಜು ಮಾಡುವುದಕ್ಕಾಗಿ ಯಾವನೋ ಒಬ್ಬರಿಗೆ ಕಾಂಟ್ರಾಕ್ಟ್ ಕೊಟ್ಟಿದ್ದೀರಿ. ಆತನು ಸಕಾಲದಲ್ಲಿ ಸರಬರಾಜು ಮಾಡುವುದಿಲ್ಲ. ಇದರಿಂದಾಗ ಹುಕಿರತಕ್ಕಂತಹ ಗೋಡೆಗಳು ಕುಸಿದು ಬಿದ್ದು ಹೋಗುತ್ತಿರುತ್ತವೆ. ಇದನ್ನು ದಯಮಾಡಿ ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಯಾರು ಅವರ ಸ್ವಂತ ನಿವೇಶನ ಇದೆ ಅದರಲ್ಲೇ ಮನೆಕಟ್ಟಿಕೊಳ್ಳುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ಮನೆಯ ಸೌಕರ್ಯಕ್ಕಾಗಿ ಹೌಸಿಂಗ್ ಬೋರ್ಡಿನವರು ಮಲ್ಟಿ ಸ್ಟೋರೈಡ್ ಬಿಲ್ಡಿಂಗನ್ನು ಕಟ್ಟಿ ಅವುಗಳನ್ನು ಬಾಡಿಗೆಗೆ ಕೊಟ್ಟು ನಂತರ ಅವರಿಗೆ ಆಕ್ಯುಪೆನ್ಸಿ ರೈಟ್ಸ್ ಮಾಡಿಕೊಡುವುದಕ್ಕೆ ಯಾವುದಾದರು ಯೋಜನೆ ಏನಾದರು ಇದೆಯೆ ?

SRI P. F. RODRIGUES.— Some of the points have been raised by the Hon. Members. I would like to give replies to those clarifications Regarding survey, I would like to say that the survey is done prior to the construction of the house. What is the use if the survey is done after the houses are constructed. The survey which the hon. Member is contemplating is to find out what type of House we are having now and if there is any leakage, and wherever itis necessary for us to do it, we will do it and wherever it has to be done by the parties, it has to be done by them and it is not our job. Regarding spill-over works, the amount is needed no doubt. We are trying to recover the huge arrears so that the position of the Housing Board would be improved. We will make use of that money for the spill-over works and how best to get the money to complete the spill-over works is under the active consideration of the Housing Board. Some hon. Mem er has suggested that the Government must give security to the Housing Board and that matter is under the active consideration of the Government. A suggestion has been made that the houses should be constructed for the Village Accountants It is a matter that has to be done by the Revenue Ministry and not by us but nevertheless.

MR. SPEAKER.— The Chief Minister has already announced that so much of amount will be released.

SRI A. LAKSHMI SAGAR. - Perhaps, he does not know.

SRI P. F. RODRIGUES — I know, Unfortunately, you presume that I don't know Nonetheless, for the Village Account n s, houses are going to be constructed. The scheme is there. For Harijans and weaker sections, houses are being construeted in rural parts. It is not merely for Harij ns; All those who are entitled to get it and comes within the Sche e are getting the houses. Out of the houses

constructed, how many Harijans are there is a matter for investigation in the entire State and I cannot give the exact number at this stage.

SRI S. S. ARAKERI.— I would like to know categorically (Year-wise), the amount allotted for the SCs/STs.

SRI P. F. RODRIGUES.— Out of the money that has been alloted, these houses are constructed. The Harijans too should come into the picture. It is not an exclusive compartment for Harijans,

Another suggestion was made to the effect that the houses must be constructed in the places where the siteless or houseless people are working. We are giving the houses near the places of their work and not for away.

It was mentioned that Steel and other prices are increasing and whether the Government would it in the Essentail Supplies Act. It is a matter for consideration and I cannot give a definite reply now. We are going to give Rs. 2,500/- to them hereafter. They can have a Varandha, and another room and we have no objection for it but they cannot put the entire burden on the Government alone and say do this and that.

No doubt, we have given the sites but the land-lords have gone to the High Court and obtained the stay. We cannot help it. Article 226 of the Constitution guarantees to them the right to go to the High Court and file a writ petition. But, nevertheless, wherever cases have gone to the high Court, we have instructed the Government Pleader to take action to vacate the Stay and expedite the matter and see that it is disposed off as early as possible.

Some hon. Member has mentioned about the condition of houses in Yelahanka and said that there is something gone wrong. Well, it is a matter to be referred to the Vigilance Commission. I request the hon. Member to bring all the details to my notice and I will study and then definitely take action.

SRI P. RAMDEV.— I have already submitted a Memorandum to the Hon. Minister about it. It is already leaking and falling.

SRI P. F. RODRIGUES.—That is a matter to be attended to. Wherever things have gone wrong, I don't hesitate to take action.

It was suggested that houses have been constructed by Contractors in the past. It is true that in the past, Janatha Houses had been constructed by the Contractors and now we have stopped and given instructions that under no circumstances the Janatha Houses should be constructed by the Contractors. So, we have given strict instructions to the B.D.O. about it.

Some hon. Member has mentioned about hire purchase system. Well, it is a matter for consideration. In fact, in one place, we tried but unfortunately, they did not come forward. If they are coming forward, we will definitely do it without any hesitation.

Hon. Member Sri Fareed has said that instead of Rs. 1250/- houses. it is better to make it Rs. 2500/- uniformally. It has been expressed here that in some cases, Rs. 1250/- houses are only papular. Therefore, I would like to mention here that, whosoever wants money for Rs. 1250/- houses, they will get it and whosoever wants money for Rs. 2500/- houses, they will also get it and there is no question of scrapping one and maintaining another one.

It has been stated that houses have been given to the Harijans and others but there is no facility to keep their ploughs, cattle and what not. Those things will have to be look-after by them. First and foremost, this is to be given to the poor people. ಯಾರಿಗೆ ಮನೆ ಇಲ್ಲವೋ ಯಾರಿಗೆ ವಸತಿ ಇಲ್ಲವೋ ಅಂಥಾವರಿಗೆ ಮಾತ್ರ ನೀವೆಶನ ಕೊಡುತ್ತೇವೇ ವಿನಾ ಯಾರಿಗೆ ಜಮೀನು ಇದೆಯೋ ಅಂಥಾವರಿಗೆ ಈ ನಿವೇಶನವನ್ನು ಕೊಡುವುದಿಲ್ಲಾ. ಬೇಕಾದರೆ they can add up another room and make adequate protection for whatever implements they have.

MR SPEAKER :—The question is.

'That a sum not exceeding Rs.24,45,50,000 inclusive of the sum 'granted on account' be granted to the Government to defray the charges which will come in coures of payment during the financial year ending 31st day of March 1980 in respect of Demand No.29 "Housing (Excluding Government Residential Buildings"

the motion was adopted and the sums were granted.

Demand Nos.11,25 and 61

SRI K.H SRINIVAS (Minister of State for Information and Youth Services).—Sir On the recommendation of the Governor, I beg to move.

> "That a sum not exceeding Rs.4,16,55,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No.11 "Youth Services and Literary and Cultural Affairs."

That a sum not exceeding Rs 2,14,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No.25 "Information and publicity."

The questions were proposed.

SMT. MANORAMA MADWARAJ (Minister of State for Women and Children's Welfare).—Sir, on the recommendation of the Governor, I beg to move.

"That a sum not exceeding Rs,6,11,97,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No.61 "Women and Children's Welfare."

The question was proposed.

MR. SPEAKER.—Now all the demands are before the House for discussion.

SMT. S. PRAMILA.—I request the Hon.Speaker to take the demand relating to Women and Children's welfare independently and it should not be tagged on to other demands.

MR. SPEAKER.—It cannot be done.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರಲ್ಲಿ ನನ್ನದೊಂದು ಸವಿನಯ ಪ್ರಾರ್ಥನೆ. ಅನೇಕ ಮಹಿಳಾ ಸದಸ್ಯರುಗಳು ಇದ್ದಾರೆ. ಅವರ ಇಲಾಖೆಯ ಒಂದು ಡಿಮ್ಯಾಂಡ್ ಬಂದಿರುವಾಗ ಅದಕ್ಕೆ ಒಂದುದಿವಸ ಸ್ಪೆಷಲ್ ಆಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕಾಗಿತ್ತು. ಮುಂದಿನ ವರ್ಷವಾದರೂ ಇಂಥ ಒಂದು ಅವಕಾಶವನ್ನು ತಾವು ಮಾಡಿಕೊಡಬೇಕು.

† ಶ್ರೀಮತಿ ಎಸ್. ಪ್ರಮಿಳ (ಚಾಮರಾಜ ಪೇಟೆ).—ಮಾನ್ಯ ಸಭಾಧ್ಯಕ್ಷರೇ. ಹೋದ ಶನಿವಾರದ ದಿವಸ ಸಭೆಯಲ್ಲಿ ಕೊಳಚೆಪ್ರದೇಶಗಳ ಬಗ್ಗೆ ಮಾತನಾಡುತ್ತಿದ್ದಾಗ ಸಭೆಯಲ್ಲಿ ಸದಸ್ಯರು ಇಲ್ಲದೆ ಇದ್ದಾಗ ಮಾನ್ಯಸದಸ್ಯರಾದ ಭಾಸ್ಕರ ಶೆಟ್ಟಿಯವರು, ಸದಸ್ಯರೇ ಇಲ್ಲ ಯಾರಿಗೋಸ್ಕರ ಮಾತನಾಡಬೇಕು ಎಂದು ಆಕ್ಷೇಪಣೆ ಎತ್ತಿದರು, ಈಗ ಮಹಿಳೆಯರ ಕ್ಷೇಮಾಭಿವೃದ್ಧಿಯ ವಿಷಯದ ಬಗ್ಗೆ ಮಾತನಾಡಬೇಕಾದಾಗ ಮಂತ್ರಿಗಳಾರೂ ಇಲ್ಲ. ಯಾರಿಗೋಸ್ಕರ ನಾನು ಇಲ್ಲಿ ಹೇಳಬೇಕು ? ನಾನು ಮಾತನಾಡುವುದನ್ನು ಕೇಳುವುದಕ್ಕೆ ರಾಜ್ಯಸಚಿವರಿಬ್ಬರನ್ನು ಬಿಟ್ಟರೆ ಬೇರೆ ಕ್ಯಾಬಿನೆಟ್ ದರ್ಜೆಮಂತ್ರಿಗಳಾರೂ ಇಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಮಂತ್ರಿಗಳವರು ಕಾಫಿ ಕುಡಿಯಲಿಕ್ಕೆ ಹೊರಗಡೆ ಹೋಗಿದ್ದಾರೆ. ಈಗ ಬರುತ್ತಾರೆ.

ಶ್ರೀಮತಿ ಎಸ್. ಪ್ರಮಿಳ.—ನಾನು ಮಾತನಾಡುವುದನ್ನು ಕೇಳುವವರು ಯಾರು ? ಅನೇಕ ವಿಷಯಗಳಲ್ಲಿ ಸರ್ಕಾರದವರು ಡಿಸಿಷನ್ ತೆಗೆದುಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾರೂ ಇಲ್ಲಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಒಂದು ಕೆಲಸ ಮಾಡಿ, ಈಗ ಇದ್ದಂಥ ಶ್ರೀಮತಿ ಮನೋರಮಾ ಮಾಧ್ವರಾಜ ಅವರನ್ನೇ ಕ್ಯಾಬಿನೆಟ್ ದರ್ಜೆಗೆ ಏರಿಸಿಬಿಡಿ.

ಶ್ರೀಮತಿ ಎಸ್. ಪ್ರಮೀಳ.—ಇವತ್ತಿನದಿವಸ ಯೂತ್ ವೆಲ್‌ಫೇರ್ ಡಿಮ್ಯಾಂಡ್ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗದೆ, ಮಹಿಳೆಯರ ಕಲ್ಯಾಣದ ಬಗ್ಗೆ ವಿಶೇಷವಾಗಿ ನಾನುಮಾತನಾಡುತ್ತೇನೆ. ನಮ್ಮಸ್ನೇಹಿತರಾದ ಜೀವರಾಜ ಆಳ್ವ ಅವರು ಯೂತ್ ಸರ್ವಿಸಸ್ ಬಗ್ಗೆ ಮಾತನಾಡುವವರಿದ್ದಾರೆ. ನಮ್ಮ ಮಹಿಳಾ ಮಂತ್ರಿವರ್ಯರು ಕೇವಲ ಆರು ಕೋಟಿ ರೂಪಾಯಿಗಳ ಬೇಡಿಕೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ನಾನು ಅವರಿಗೆ ಇಲ್ಲಿ ತಾವು ಏತಕ್ಕೋಸ್ಕರ ಮಂತ್ರಿಗಳಾಗಿದ್ದೀರಿ ಎಂದುಮೊದಲನೆಯದಾಗಿ ಪ್ರಶ್ನೆ ಮಾಡುತ್ತೇನೆ. ಈ ಆರು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಹುರಿಯುವ ಬೆಂಕಿಗೆ ತುಪ್ಪ ಹಾಕಿ ಮಹಿಳೆಯರ ಕಷ್ಟಸುಖಗಳನ್ನು ಜಾಸ್ತಿ ಮಾಡುವುದಕ್ಕೆ ಹೋಗಬೇಡಿ ತಾವು ತಮ್ಮ ಮಂತ್ರಿ ಪದವಿಯನ್ನು ಮುಖ್ಯಮಂತ್ರಿಗಳಿಗೆ ಕೊಟ್ಟು ಹಿಂದಕ್ಕೆ ಬರಬೇಕಾಗಿತ್ತು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮಹಿಳೆಯರ ಉದ್ಧಾರ ಮಾಡುವುದಕ್ಕೆ ಇಡೀ ಕ್ಯಾಬಿನೆಟ್ ನಲ್ಲಿ ಕಾಬಿನೆಟ್ ದರ್ಜೆಯ ಒಬ್ಬ ಮಹಿಳಾ ಮಂತ್ರಿ ಇಲ್ಲವಲ್ಲ ಎಂದು ನಾನು ಈ ಸಂದರ್ಭದಲ್ಲಿ ನೊಂದು ಹೇಳಬೇಕಾಗಿದೆ. ವಿದ್ಯಾ ಇಲಾಖೆಗಾಗಲೀ, ಆರೋಗ್ಯ ಇಲಾಖೆಗಾಗಲೀ, ಸೋಷಿಯಲ್ ವೆಲ್‌ಫೇರ್‌ಗಾಗಲೀ, ಅಥವಾ ಕಾನೂನು ಇಲಾಖೆಗಾಗಲೀ ಯಾವರೀತಿಯಲ್ಲಿ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು ಇದ್ದು ಅವರು ಯಾವುದೇ ರೀತಿಯಲ್ಲಿ ಡಿಸಿಷನ್ ತೆಗೆದುಕೊಳ್ಳುವುದಕ್ಕೆ ಅವಕಾಶವಾಗಿದೆ. ತಮಗೆ ಮಾತ್ರ ಯಾವುದೋಒಂದು ಕೆಳಪೆ ಪೋರ್ಟ್‌ಫೋಲಿಯೋ ಕೊಟ್ಟು ಬಾಲವಾಡಿಗಳನ್ನು ನೋಡಿಕೊಳ್ಳುವುದಕ್ಕೆ ಬಿಟ್ಟಿದ್ದಾರೆ, ಇಂಥ ಮಿನಿಸ್ಟರ್‌ಗಿರಿ ತಮಗೆ ಏಕೆ ಬೇಕೋ ಎಂದು ನಾನು ತಮ್ಮನ್ನು ಪ್ರಶ್ನೆ ಮಾಡಬೇಕಾಗಿದೆ. ಸ್ವಾತಂತ್ರ್ಯ ಬಂದು ನಮಗೆ ೩೦ ವರ್ಷಗಳಾದರೂ ಇಡೀ ದೇಶದಲ್ಲಿ ಕರ್ನಾಟಕದಲ್ಲಿ ಮಾತ್ರವಲ್ಲ ಮಹಿಳೆಯರಿಗೆ ಸರಿಯಾದ ಸ್ಥಾನ ದೊರಕುತ್ತಿಲ್ಲ. ನಾವು ಯಾವ ಪಾರ್ಟಿಯಲ್ಲೇ ಇರಲೀ, ಕಾಂಗ್ರೆಸ್‌ನಲ್ಲಿರಲಿ, ಜನತಾ ಪಾರ್ಟಿಯಲ್ಲಿರಲಿ, ತಾವು ತಮ್ಮ ಮಂತ್ರಿ ಪದವಿಯನ್ನು ಬಿಟ್ಟು ಬನ್ನಿ, ನಮ್ಮನಾಯಕತ್ವವನ್ನು ವಹಿಸಿ ನಾವು ಅಧಿಕಾರ ನಡೆಸೋಣ. ಇಂಥ ಕಾಲ, ಇಂಥ ಸಂದರ್ಭ ಬಹು ದೂರ ಇಲ್ಲ ಎನ್ನುವ ಮಾತನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಮ್ಮ ಕಡೆಯಲ್ಲಿಯೋ ಮಹಿಳೆಯರು ಜಾಸ್ತಿ ಜನ ಇದ್ದಾರೆ.

ಶ್ರೀಮತಿ ಎಸ್. ಪ್ರಮೀಳ.—ಹೋದ ಅಸೆಂಬ್ಲಿಯಲ್ಲಿ ೧೯ಜನ ಮಹಿಳಾ ಸದಸ್ಯರು ಇದ್ದರು, ಈ ಸಾರಿ ಕೇವಲ ೧೧ ಜನ ಇದ್ದಾರೆ. ಬರುವ ವರ್ಷದಲ್ಲಿ ಇದೇ ಸಂದರ್ಭ ಮುಂದುವರಿದರೆ ಕೇವಲ ಒಬ್ಬಿಬ್ಬರು ಬರಬಹುದು. ಅಥವಾ ಇಲ್ಲದಂತೆಯೂ ಆಗಬಹುದು ಈ ಪರಿಸ್ಥಿತಿಯನ್ನು ನಾವು ದೀರ್ಘವಾಗಿ ಯೋಚನೆ ಮಾಡಬೇಕು. ಇದನ್ನು ಕಳಕಳಿಯಿಂದ ವಿಚಾರ ಮಾಡಬೇಕಾದವರು ನಾಯಕರುಗಳು. ಮಹಿಳೆಯರ ಕಷ್ಟಸುಖಗಳನ್ನು ಅರ್ಥಮಾಡಿಕೊಂಡು ಅವರಿಗೆ ಬೇಕಾದಂಥ ಸ್ವತಂತ್ರವಾದ ಹಕ್ಕುಗಳನ್ನು ಎಲ್ಲಿಯವರೆಗೆ ಇವರು ಕೊಡುವುದಿಲ್ಲವೋ ಅಲ್ಲಿಯವರೆಗೆ ಅವರು ಮಾನವರಾಗಿ ಉಳಿಯುವುದಿಲ್ಲ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರ ಶೇಖರ್.—ನಮ್ಮ ಪಕ್ಷ ಮಹಿಳಾನಾಯಕರೇ ಇರತಕ್ಕ ಪಕ್ಷ. ತಾವು ಕೂಡ ಈಕಡೆ ಬರಬಹುದಾಗಿತ್ತು.

ಶ್ರೀ ಕೆ ಭಾಸ್ಕರ ನಾಯಿಡು.—ಯಾರುಬರಲಿ, ಬಾರದೇಹೋಗಲಿ, ತಾವು ಮಾತ್ರ ನಮ್ಮಕಡೆ ಬರಬೇಕು. ಇದು ನಮ್ಮ ಆಶೆ.

ಶ್ರೀ ಎಸ್.ಆರ್. ಬೊಮ್ಮಾಯಿ.–ಸೆಂಟ್ರಲ್ ಕಮಿಟಿಯವರು ಶ್ರೀಮತಿ ಇಂದಿರಾಗಾಂಧಿಯವರನ್ನೆ ಈಗ ವಿಚಾರ ಮಾಡಬೇಕಾಗುತ್ತಿದೆ.

ಶ್ರೀಮತಿ ಎಸ್, ಪ್ರಮೀಳ.—ಮಾನ್ಯಅಧ್ಯಕ್ಷರೇ ಮಹಾತ್ಮಾ ಗಾಂಧೀಜಿಯವರು ೧೯೧೮ನೇ ಇಸವಿಯಲ್ಲಿ ಒಂದು ಮಾತನ್ನು ಹೇಳಿದರು.

> "Today the sole occupation of a women amongst us is supposed to be to bear children, to look after her husband and otherwise is drudge for the household not only is the women endured to domestic slavery, but when goes out as a labourer to earn wages, though she works harder than man she is paid less."

ಶ್ರೀ ಕೈ.ಎಚ್. ಶ್ರೀನಿವಾಸ್.--ಆಗ ಶ್ರೀಮತಿಯವರು ಇನ್ನೂ ಹುಟ್ಟಿರಲಿಲ್ಲ ಅದಕ್ಕೆ ಅವರು ಹೇಳಿದ ಮಾತು ಈಗ ಅನ್ವಯವಾಗುವುದಿಲ್ಲ.

ಶ್ರೀಮತಿ ಎಸ್. ಪ್ರಮೀಳ.---ಪೂಜ್ಯ ಮಹಾತ್ಮಗಾಂಧೀಜಿಯವರು ಇವತ್ತು ಇದ್ದಿದ್ದರೆ, ಅವರು ಮಹಿಳಾ ನಾಯಕರುಗಳನ್ನೇ ಅಧಿಕಾರದಲ್ಲಿರುವಂತೆ ಮಾಡುತ್ತಿದ್ದರು. ಆ ಹೊತ್ತಿನಿಂದ ಪರಿಸ್ಥಿತಿ ಯಾವರೀತಿಯಲ್ಲಾದರೂ ಅಂದರೆ, ಶೈಕ್ಷಣಿಕ ರಂಗದಲ್ಲಿ ಆಗಲೀ, ಸಾಮಾಜಿಕ ರಂಗದಲ್ಲಿ ಆಗಲೀ ಬದಲಾವಣೆಯಾಗಿದೆಯೋ ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಪ್ರಶ್ನೆ ಮಾಡುತ್ತೇನೆ. ಬದಲಾವಣೆ ಯಾಗದೆ ಇರುವುದಕ್ಕೆ ಕಾರಣರು ಯಾರು ಎಂದರೆ ಈಗ ಅಧಿಕಾರದಲ್ಲಿರುವವರೇ ಎಂದು ನಾನು ಹೇಳ ಬೇಕಾಗಿದೆ. ಇದಕ್ಕಿಂತ ಹೆಚ್ಚಾಗಿ ಕಾರ್ಲ್ ಮತ್ತು ಮಾರ್ಕ್ಸ್ ಹೇಳಿದಂಥ ಮಾತನ್ನು ನಾನು ಇಲ್ಲಿ ಹೇಳ ಬೇಕಾಗಿದೆ. ''The emancipation of women and their quality with men are impossible and must remain so long as women are excluded from strictly productive work and restricted to home work ie., is private.'' ಎಂದು ಹೇಳಿದ್ದಾರೆ. ಇವತ್ತು ನಮ್ಮ ಕರ್ನಾಟಕ ಸರ್ಕಾರದಲ್ಲಿ ಆಗಲೀ ಯಾವ ಮಹಿಳೆಯನ್ನು ವೆಲ್‌ಫೇರ್ ಆಕ್ಟಿವಿಟೀಸ್‌ನಲ್ಲಾಗಲೀ, ಪಾಲಿಸಿ ಡಿಸಿಷನ್‌ನಲ್ಲಾಗಲಿ, ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡಿದ್ದಾರೆಂದು ನಾನು ಕೇಳಬೇಕಾಗಿದೆ. ಇಲ್ಲಿಯವರೆಗೆ ಮಹಿಳೆಯರನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಅವರು ಕಷ್ಟಸುಖಗಳನ್ನು ಅರಿತು ಅವರ ಅಭ್ಯುದಯದ ಬಗ್ಗೆ ಎಲ್ಲಿಯವರೆಗೆ ಇವರು ಯೋಚನೆ ಮಾಡುವುದಿಲ್ಲವೋ ಅಲ್ಲಿಯವರಿಗೆ ಮಹಿಳೆಯರ ಉದ್ಧಾರವಾಗುವುದಿಲ್ಲ ಎಂದು ನಾನು ಹೇಳು ವುದಕ್ಕೆ ಬಯಸುತ್ತೇನೆ. ನಿಜವಾಗಿಯೂ ಮಹಿಳೆಯರನ್ನು ಉದ್ಧಾರ ಮಾಡಬೇಕು ಎಂದು ತಮ್ಮ ಮನಸ್ಸಿನಲ್ಲಿದರೆ, ಕಿಂಚಿತಾದರೂ ತಮಗೆ ಇಂಥ ಒಂದು ಒಳ್ಳೆಯಕಾರ್ಯ ಮಾಡಬೇಕು ಎಂದು ಇಷ್ಟ ವಿದ್ದರೆ ಮಹಿಳೆಯರಿಗೆ ಅಧಿಕಾರಕೊಟ್ಟು ಅವರಿಗೆ ಹೆಚ್ಚಿನ ರೀತಿಯಲ್ಲಿ ಅವಕಾಶಗಳನ್ನು ಕೊಡಿ. ಅಮೇರಿಕಾದಲ್ಲಿ ಈ ವಿಷಯದಲ್ಲಿ ಚರ್ಚೆ ಬಂದಾಗ ಅಲ್ಲಿರತಕ್ಕ ಒಬ್ಬ ಮಹಿಳೆ ಕಾನ್ಸ್‌ಟಿಟ್ಯೂಷನ್‌ನ ಆರ್ಟಿಕಲ್ ೧೪ನ್ನು ಪ್ರಸ್ತಾಪ ಮಾಡಿದ್ದಾಳೆ. ಕಾನೂನು ಏನೇ ಇರಲಿ ಮಹಿಳೆಯರಿಗೆ ಅನುಕೂಲವಾಗ ಬೇಕಾದರೆ ಬೇರೆ ಕಾನೂನನ್ನೇ ತರಬೇಕು. ಎಂದು ಹೇಳಿದ್ದಾರೆ. ಅದೇ ರೀತಿಯಲ್ಲಿ ಶ್ರೀಮತಿ ಮಾಧ್ವರಾಜ ಅವರು ಇಂಥ ಕಾನೂನುಗಳನ್ನು ತಂದು ಮಹಿಳೆಯರ ಅಭಿವೃದ್ಧಿಗೆ ಅನುಕೂಲಮಾಡಿ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲಿ ಎರಡು ಕಾನೂನುಗಳನ್ನು ತಾವು ಮುಖ್ಯವಾಗಿ ಜಾರಿಗೆ ತರಬೇಕು. ಈಗ ಮಹಿಳೆಯರಿಗೆ ಸರಿಯಾದ ವಿದ್ಯೆ ಇಲ್ಲದ ಕಾರಣ ಅವರು ಅಧಿಕಾರ ದಲ್ಲಿದ್ದಾರೆ. ಅವರಿಗೆ ವಿದ್ಯೆ ಇಲ್ಲದ ಕಾರಣ ಕಾನೂನಿನಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವುದು ಕಷ್ಟವಾಗಿದೆ. ಆದಕಾರಣ ಮಹಿಳೆಯರು ಮುಂದೆ ಬರಬೇಕಾದರೆ ಅತಿ ಮುಖ್ಯವಾಗಿ ಈ ಎರಡು ಕಾನೂನುಗಳನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಅದರಲ್ಲಿ ಮೊದಲನೆಯದು Equal Opportunity Employment Act ; ಇದನ್ನು ತೆಗೆದುಕೊಂಡು ಬನ್ನಿ. ಈಗ ಒಂದು ಫ್ಯಾಕ್ಟರಿಯಲ್ಲಿ ನೂರು ಜನರನ್ನು ಕೆಲಸಕ್ಕೆ ತೆಗೆದುಕೊಂಡರೆ ಅದರಲ್ಲಿ ೫೦ ಜಾಗಗಳನ್ನು ಹೆಂಗಸರಿಗೆ ಕಡ್ಡಾಯವಾಗಿ ಕೊಡಲೇಬೇಕೆಂಬ ಕಾನೂನನ್ನು ಜಾರಿಗೆ ತಂದರೆ ಅದರಿಂದ ಮಹಿಳೆಯರಿಗೆ ಅನುಕೂಲವಾಗಬಹುದು ಮತ್ತು ಈಗ ಆಗಿರುವಂತಹ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸಾಧ್ಯವಾಗಬಹುದೆಂದು ಹೇಳುತ್ತೇನೆ. ಇದರ ಜೊತೆಗೆ Equal opportunity for Women to take Admissions in the Colleges of Private Schools Act ; ಎಂಬ ಕಾನೂನನ್ನು ಜಾರಿಗೆ ತರಬೇಕು. ಅಂದರೆ ಶಾಲಾಕಾಲೇಜುಗಳಲ್ಲಿ ನೂರು ಜನರಿಗೆ ಅಡ್ಮಿಷನ್ ಕೊಡುವ ಕಾಲಕ್ಕೆ ೫೦ ಜಾಗಗಳನ್ನು ವಿದ್ಯಾರ್ಥಿ ನಿಯರಿಗೆ ಮೀಸಲಿಡಬೇಕೆಂಬ ಕಾನೂನನ್ನು ಜಾರಿಗೆ ತೆಗೆದುಕೊಂಡು ಬನ್ನಿ. ಮೆಡಿಕಲ್ ಕಾಲೇಜ ನಲ್ಲಿಯೂ ಸಹ ಅಡ್ಮಿಷನ್ ಕೊಡುವಾಗ ಶೇಕಡಾ ೫೦ರಷ್ಟು ಸೀಟುಗಳನ್ನು ಹೆಂಗಸರಿಗೇ ಮೀಸಲಿಡ ಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ನಾನು ಮೇಲೆ ಹೇಳಿದಂಥ ಎರಡು ಕಾನೂನುಗಳನ್ನು ಈ ಅಧಿವೇಶನದಲ್ಲಿಯೇ ತರಬೇಕೆಂದು ಕೇಳಿಕೊಳ್ಳುತ್ತೇನೆ.

೪-೩೦ ಪಿ.ಎಂ.

ಇನ್ನು ನಮ್ಮ ಆರ್ಟಿಕಲ್ ೧೫(೩)ರಲ್ಲಿ no discrimination on the ground of sex: .... ಎಂದು ಹೇಳಿದೆ. ಅಂದರೆ ಹೆಣ್ಣುಮಕ್ಕಳ ವಿಚಾರದಲ್ಲಿ ಭೇದಭಾವ ಮಾಡಬಾರದೆಂದು ಅದರಲ್ಲಿ ಹೇಳಿದೆ. ಆದಕಾರಣ ಇಲ್ಲಿಯವರೆಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಹೆಣ್ಣುಮಕ್ಕಳಿಗೆ ಆಗಿರುವಂತಹ ಅನ್ಯಾಯಗಳನ್ನು ತಪ್ಪಿಸಲು ಮುಖ್ಯವಾಗಿ ನಾನು ಮೊದಲು ಹೇಳಿದ ಎರಡು ಕಾನೂನುಗಳನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕರ್ನಾಟಕ ರಾಜ್ಯದಲ್ಲಿ ಮಹಿಳೆಯರಿಗೆ ಆಗಿರುವಂತಹ ಅನ್ಯಾಯದ ಬಗ್ಗೆ ಒಂದು ಚಿತ್ರವನ್ನು ತಮ್ಮ ಮುಂದಿಡುತ್ತೇನೆ. ಕಾನೂನು ಮಾಡತಕ್ಕಂಥ ಶಾಸಕರಿಗೆ ತಾಯಿ ಬೇಕಾಗಿಲ್ಲ, ಗಂಡ ಹೆಂಡತಿಗೆ ಮರ್ಯಾದೆ ಕೊಡುತ್ತಿಲ್ಲ, ತಂದೆ ತಾಯಿಗಳಿಗೆ ಹೆಣ್ಣುಮಕ್ಕಳೇ ಹೊರೆಯಾಗಿದ್ದಾರೆ ಸ್ತ್ರೀಧನ ಇಟ್ಟುಕೊಳ್ಳಲು ಅವಕಾಶವಿಲ್ಲ. ಭೂಶಾಸನದಲ್ಲಿ ಹೆಣ್ಣು ಮಕ್ಕಳಿಗೆ ಜೀವನಾಂಶ ಕೊಡುವ ಅಗತ್ಯವಿಲ್ಲವೆಂದು ಅದನ್ನು ತೆಗೆದುಹಾಕಿದ್ದಾರೆ. ಹೆಣ್ಣು ಭೂಮಿತಾಯಿ ಎಂದು ಹೇಳುತ್ತಾರೆ ಆದರೆ ಹೆಣ್ಣು ಮಕ್ಕಳ ಹೆಸರಿನಲ್ಲಿದ್ದ ಭೂಮಿಯನ್ನೆಲ್ಲಾ ಕಿತ್ತುಕೊಂಡಿದ್ದಾರೆ. ಹೀಗೆ ಹೆಣ್ಣನ್ನು ಎಲ್ಲ ರೀತಿಯಿಂದಲೂ ಕಡೆಗಣಿಸಲಾಗಿದೆ. ಎಲ್ಲಿಯವರೆಗೆ ಹೆಣ್ಣು ಸ್ವಾವಲಂಬಿಯಾಗಬೇಕೆಂಬ ವಿಚಾರ ಸರ್ಕಾರದ ಮನಸ್ಸಿನಲ್ಲಿ ಬರುವುದಿಲ್ಲವೋ ಅಲ್ಲಿಯವರೆಗೆ ಹೆಣ್ಣು ಸ್ವಾವಲಂಬಿಯಾಗುವುದಿಲ್ಲ. ಹೆಣ್ಣಿಗೆ ಆಸ್ತಿಯನ್ನು ಇಟ್ಟುಕೊಳ್ಳುವ ಹಕ್ಕನ್ನು ಎಲ್ಲಿಯವರೆಗೆ ಕೊಡುವುದಿಲ್ಲವೋ ಅಲ್ಲಿಯವರೆಗೆ ಹೆಣ್ಣು ಗಂಡಿನ ಗುಲಾಮಳಾಗಿ ಬಿದ್ದಿರಬೇಕಾಗುತ್ತದೆ. ಗಂಡಸರ ಸೌಕರ್ಯಕ್ಕಾಗಿ ಹೆಂಗಸರಿಗೆ ಯಾವ ರೀತಿಯಿಂದಲೂ ಮುಂದೆ ಬರಲು ಬಿಡುತ್ತಿಲ್ಲ. ನಮ್ಮ ಕಾನೂನಿನಲ್ಲಿರುವ ಇಂತಹ ತೊಡಕುಗಳನ್ನೆಲ್ಲಾ ತೆಗೆದುಹಾಕಲು ಮಹಿಳೆಯರೆಲ್ಲಾ ಸೇರಿ ಅಂಧೋಳನ ನಡೆಸಬೇಕಾದ ಕಾಲ ಬಂದಿದೆ. ಇಲ್ಲಿಯವರೆಗೆ ಆಗಿರುವ ಅನ್ಯಾಯಗಳನ್ನು ಸರಿಪಡಿಸದೇ ಹೋದರೆ ಇನ್ನು ಹತ್ತು ವರ್ಷಗಳ ನಂತರ ಮಹಿಳೆಯರೆಲ್ಲರೂ ಅಂಧಕಾರದಲ್ಲಿ ಬೀಳುತ್ತಾರೆಂದು ಹೇಳುತ್ತೇನೆ. ಭೂಸುಧಾರಣಾ ಕಾನೂನಿನಲ್ಲಿ ಹೆಂಗಸರಿಗೆ ಅನ್ಯಾಯ ಮಾಡಲಾಗಿದೆ. ಇದು ಅಕ್ಷಮ್ಯ ಅಪರಾಧ, ಇದನ್ನು ಸರಿಪಡಿಸಬೇಕೇದು ಶ್ರೀಮತಿ ಇಂದಿರಾಗಾಂಧಿಯವರಿಗೆ ಒಂದು ಮನವಿಯನ್ನು ಅರ್ಪಿಸಲಾಯಿತು. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕರ್ನಾಟಕ ರಾಜ್ಯಕ್ಕೆ ಕಳುಹಿಸಿಕೊಟ್ಟರು. ಆದರೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈ ಬಗ್ಗೆ ಸರ್ಕಾರದವರು ಕ್ರಮ ತೆಗದು ಕೊಳ್ಳದಿದ್ದರೆ ಮಹಿಳೆಯರ ಕಲ್ಯಾಣವೂ ಆಗುವುದಿಲ್ಲ, ಮಹಿಳೆಯ ಕ್ಷೇಮಾಭಿವೃದ್ಧಿಯೂ ಆಗುವುದಿಲ್ಲವೆಂದು ಹೇಳುತ್ತೇನೆ. ಶ್ರೀಮತಿ ಮನೋರಮಾ ಮಧ್ವರಾಜ್ ಅವರನ್ನು ಹೆಂಗಸರ ಮತ್ತು ಮಕ್ಕಳ ಕಲ್ಯಾಣ ಮಂತ್ರಿಗಳು ಎಂದು ಕರೆಯಲಾಗುತ್ತಿದೆ. ಆದರೆ ಹೆಂಗಸರಿಗೆ ಸಂಬಂಧಪಟ್ಟಂತೆ ಮತ್ತು ಮಕ್ಕಳಿಗೆ ಸಂಬಂಧಪಟ್ಟಂತೆ ಅಂದರೆ ಇವರುಗಳ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ, ಆರೋಗ್ಯಕ್ಕೆ ಸಂಬಂಧಪಟ್ಟಂತೆ ಹಾಗೂ ಇನ್ನಿತರ ವಿಚಾರಗಳಲ್ಲಿ ಕಾನೂನು ಯಾವ ರೀತಿ ಇರಬೇಕು ಎಂಬ ಬಗ್ಗೆ ತಮ್ಮನ್ನು ಏನಾದರು ಕನ್‌ಸಲ್ಟ್ ಮಾಡುತ್ತಾರೆಯೋ ಎಂದು ಕೇಳುತ್ತೇನೆ. ಸರ್ಕಾರದವರು ನಿಮ್ಮನ್ನು ಕನ್‌ಸಲ್ಟ್ ಮಾಡದಿದ್ದರೆ ನೀವು ಇವರ ಕ್ಷೇಮವನ್ನು ಯಾವ ರೀತಿ ನೋಡಿಕೊಳ್ಳುತ್ತೀರಿ? ಈಗ ಆರೋಗ್ಯ ನಿಮ್ಮ ಕೈಯಲ್ಲಿ ಇಲ್ಲ; ವಿದ್ಯಾಭ್ಯಾಸ ನಿಮ್ಮ ಕೈಯಲ್ಲಿ ಇಲ್ಲ. ಇನ್ನು ಇವರ ಕಲ್ಯಾಣವನ್ನು ಯಾವ ರೀತಿ ಮಾಡುತ್ತೀರಿ? ತಾವು ಅಭ್ಯುದಯವನ್ನು ಯಾವ ರೀತಿ ಮಾಡುತ್ತೀರಿ? ತಾವು ಇವರ ಅಭ್ಯುದಯವನ್ನು ಎಲ್ಲಿ ಯಾವಾಗ, ಯಾರಿಗೆ ಮಾಡುತ್ತೀರಾ ಎಂದು ಕೇಳುತ್ತೇನೆ? ಈ ವರದಿಯಲ್ಲಿ ಹೇಳಿರುವ ಪ್ರಕಾರ ೪ ಕಾನೂನುಗಳನ್ನು ನಿಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಮುಖ್ಯವಾದುದೆಂದರೆ : "Suppression of Immoral Traffic in Women and Girls Act 1956. ಈ ಕಾನೂನಿನಲ್ಲಿ ಹೇಳಿರುವ ಪ್ರಕಾರ ನೋಡುವುದಾದರೆ, ಈ ಒಂದು ಕೆಲಸ ದೆ ವಸ್ಥಾನದ ಹತ್ತಿರ ಮತ್ತು ಶಾಲೆಗಳ ಹತ್ತಿರ ಆಗಬಾರದು ; ಈ ಎರಡು ಜಾಗಗಳನ್ನು ಬಿಟ್ಟು ಬೇರೆ ಕಡೆಗಳಲ್ಲಿ ಗಂಡಸು ಹೆಂಗಸನ್ನು ರಾಜಾರೋಷವಾಗಿ ಉಪಯೋಗಿಸಿಕೊಳ್ಳಲು ಇಲ್ಲವೇ ಮಾರಾಟ ಮಾಡಲು ಅವಕಾಶವಿದೆ ಎಂದು ಅರ್ಥವಾಯಿತು. ಇಂತಹ ಒಂದು ಕಾನೂನನ್ನು ನಿಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ಇಂತಹ ಕಾನೂನನ್ನು ನನ್ನ ಕೈಯಲ್ಲಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲವೆಂದು ಎತ್ತಿ ಎಸೆದುಬಿಡಿ. ಈ ಕಾನೂನನ್ನು ಜಾರಿಗೆ ತರುವುದು ಕಷ್ಟ, ಇದರಿಂದ ಹೆಣ್ಣು ಮಕ್ಕಳಿಗೆ ಅನ್ಯಾಯವಾಗುತ್ತಿದೆ, ಆದಕಾರಣ ಇದನ್ನು ನನ್ನ ಕೈಯಲ್ಲಿಟ್ಟು ಕೊಳ್ಳುವುದಕ್ಕಾಗುವುದಿಲ್ಲವೆಂದು ತಾವು ಹೇಳಬೇಕು. ಇದರಿಂದ ನನ್ನ ಸ್ಟೇಟಸ್‌ರೆಡ್ಯೂಸ್ ಆಗಿದೆ

ಆದಕಾರಣ ಇದನ್ನು ಈ ನನ್ನ ಕೈಗೆ ಕೊಡಬೇಡಿ ಎಂದು ಹೇಳಬೇಕು. ಇಲ್ಲಿ ಹೇಳಿರುವ ಪ್ರಕಾರ Karnataka Children Act, 1964 ; ಇದು ನಿಮ್ಮ ಕೈಯಲ್ಲಿದೆ. ಈ ಆಕ್ಟಿನ ಕೆಳಗೆ, ೪೮೯ ಹುಡುಗರು ೫೮ ಹುಡುಗಿಯರು ರಿಮ್ಯಾಂಡ್ ಹೋಮ್ಸನಲ್ಲಿದ್ದಾರೆ. ೧೮೦೬ ಹುಡುಗರು, ೫೧೫ ಹುಡುಗಿಯರು ಸರ್ಟಿಫೈಡ್ ಶಾಲೆಗಳಲ್ಲಿ ಇದ್ದಾರೆ. ೧೯೬೭ ಮಕ್ಕಳು ಫಿಟ್-ಪರ್ಸನ್ ಇನ್‌ಸ್ಟಿಟ್ಯೂಷನ್ಸ್‌ನಲ್ಲಿದ್ದಾರೆ. ಈ ಎಲ್ಲಾ ಅಂಕಿಅಂಶಗಳನ್ನು ಲೆಕ್ಕ ಮಾಡಿ ನೋಡಿದಾಗ ೫ ಸಾವಿರದೊಳಗೆ ಬರಬಹುದು; ತಾವು ಇಷ್ಟು ಜನರ ಅಭಿವೃದ್ಧಿ ಮಾಡಿದರೆ ಸಾಕೇ ? ನಮ್ಮ ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಒಂದೂವರೆ ಕೋಟಿ ಮಹಿಳೆಯರ ಗತಿ ಏನಾಗಬೇಕು ? ಇವರ ಅಭಿವೃದ್ಧಿಯ ಕಡೆಗೆ ತಾವು ಯಾವ ರೀತಿ ಗಮನಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ನಮ್ಮ ರಾಜ್ಯದಲ್ಲಿರತಕ್ಕಂಥ ೩ ಕೋಟಿ ಜನತೆಯ ಪೈಕಿ ಒಂದೂವರೆ ಕೋಟಿ ಹೆಂಗಸರಿದ್ದಾರೆ ಅರ್ಧ ಕೋಟಿ ಮಕ್ಕಳಿದ್ದಾರೆ. ಇವರೆಲ್ಲರ ಅಭಿವೃದ್ಧಿಗೆ ತಾವು ೬ ಕೋಟಿ ರೂ. ಗಳನ್ನು ಗೊತ್ತು ಮಾಡಿದ್ದೀರಿ. ಅಂದರೆ ಒಬ್ಬರಿಗೆ ಎರಡು ರೂ. ಗಳಂತೆ ಖರ್ಚು ಮಾಡಬೇಕಾಗುತ್ತದೆ. ಈ ಎರಡು ರೂ. ಗಳಲ್ಲಿ ಏನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯ ? ಇದು ವಿಷ ತೆಗೆದುಕೊಳ್ಳುವುದಕ್ಕೂ ಸಾಲುವುದಿಲ್ಲ. ಏಕೆಂದರೆ ಡಾಕ್ಟರ್ ಹತ್ತಿರ ಹೋಗಿ ಔಷಧ ತೆಗೆದುಕೊಂಡರೆ ೫ ರೂ. ಕೊಡಬೇಕು. ಆದಕಾರಣ ಎರಡು ರೂ.ಗಳಿಗೆ ವಿಷ ಸಹ ಸಿಗುವುದಿಲ್ಲ. ಅಂದರೆ ಇಲ್ಲಿ ಸಾಯುವುದಕ್ಕೂ ಸಾಧ್ಯವಿಲ್ಲ ಅಂದರೆ ನಿಮ್ಮಿಂದ ಇವರ ಉದ್ಧಾರ ಯಾವ ರೀತಿ ಮಾಡುವುದಕ್ಕೆ ಸಾಧ್ಯ ? ಈ ಇಲಾಖೆಯನ್ನು ಏತಕ್ಕೆ ತಾವು ಒಪ್ಪಿಕೊಂಡಿದ್ದೀರಿ? ಸ್ವಾಮಿ ಹೆಂಗಸರ ಕಲ್ಯಾಣ ಆಗಬೇಕು, ಅಭ್ಯುದಯ ಮಾಡಬೇಕು ಎಂದು ಹೇಳುತ್ತಾರೆ. ಆದರೆ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಹೆಣ್ಣು ಮಕ್ಕಳ ಅಭ್ಯುದಯ ಆಗಿದೆಯೇ?. ಯಾವ ಯಾವ ಇಲಾಖೆಯಲ್ಲಿ ಹೆಣ್ಣು ಮಕ್ಕಳ ಅನ್ಯಾಯವಾಗಿದೆ ಎಂಬುದನ್ನು ತಾವು ತಿಳಿದುಕೊಂಡು ಅದನ್ನು ನಿವಾರಣೆ ಮಾಡತಕ್ಕ ಪ್ರಯತ್ನವನ್ನು ಏನಾದರೂ ಮಾಡಿದ್ದೀರಾ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ಕೂಲಿಗಾರರು, ಹೊಲಗದ್ದೆಗಳಲ್ಲಿ ಕೆಲಸ ಮಾಡತಕ್ಕ ಹೆಣ್ಣುಮಕ್ಕಳು, ಮನೆಗಳಲ್ಲಿ ಅಡಿಗೆ ಮಾಡುವಂತಹ ಹೆಣ್ಣು ಮಕ್ಕಳು, ಕಸಾ ಗುಡಿಸತಕ್ಕವರು ಹೆಣ್ಣುಮಕ್ಕಳು, ಹೀಗಿರುವಾಗ ಅವರಿಗೆ ಅನ್ಯಾಯವಾಗಿರುವ ಬಗ್ಗೆ ಏನಾದರೂ ಗಮನ ಕೊಟ್ಟಿದ್ದೀರಾ ? ಅವರನ್ನು ಮೇಲಕ್ಕೆ ತರತಕ್ಕ ಕೆಲಸವನ್ನು ಏನಾದರೂ ಮಾಡಿದ್ದೀರಾ ? ಅವರನ್ನು ಮೇಲಕ್ಕೆ ಎತ್ತುವ ಬಗ್ಗೆ ಯಾವ ಯೋಜನೆಯನ್ನು ಹಾಕಿ ಕೊಂಡಿದ್ದೀರಿ ? ಡೊಮೆಸ್ಟಿಕ್ ಸರ್ವೆಂಟ್‌ಗೆ ಸಂಬಂಧಪಟ್ಟ ಹಾಗೆ ಒಂದು ಯೂನಿಯನ್ ಸ್ಥಾಪನೆ ಮಾಡಿ ಅವರನ್ನು ಉದ್ಧಾರ ಮಾಡುವ ಬಗ್ಗೆ ಯೋಜನೆಯನ್ನು ಹಾಕಿಕೊಳ್ಳಬೇಕು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಆ ಯೂನಿಯನ್‌ಗೆ ಇವರನ್ನೇ ಅಧ್ಯಕ್ಷರನ್ನಾಗಿ ಮಾಡಿದರೆ ಒಬ್ಬರಿಗೂ ಊಟ ಸಿಕ್ಕುವುದಿಲ್ಲ.

ಶ್ರೀಮತಿ ಎಸ್. ಪ್ರಮೀಳ.—ಮನೆಯಲ್ಲಿ ಕಸ ಗುಡಿಸುವುದಕ್ಕೆ, ಅಡಿಗೆ ಮಾಡುವುದಕ್ಕೆ ಕೂಲಿ ನಾಲಿ ಮಾಡುವುದಕ್ಕೆ, ಹೊಲದಲ್ಲಿ ಬೀಜ ಬಿತ್ತ ಬೇಕಾದರೆ, ನಾಟಿ ಹಾಕಬೇಕಾದರೆ ಹೆಣ್ಣು ಮಗಳು ಬೇಕು. ಮೊನ್ನೆ ವ್ಯವಸಾಯ ಶಾಖೆಯ ಮಂತ್ರಿಗಳು ಹೇಳುತ್ತಿದ್ದರು. ೧೪ ಲಕ್ಷ ಮಹಿಳೆಯರು ವ್ಯವಸಾಯ ಕೂಲಿಗಾರರಾಗಿ ಇದ್ದಾರೆ ಎಂದು. ಹೀಗಿರುವಾಗ ಕರ್ನಾಟಕದಲ್ಲಿ ಯಾರನ್ನಾದರೂ ಒಬ್ಬ ಹೆಣ್ಣುಮಗಳನ್ನು ಕ್ಯಾಬಿನೇಟ್ ಮಂತ್ರಿಗಳನ್ನಾಗಿ ಮಾಡಿದ್ದೀರಾ ? ಲೋಕಸೇವಾ ಆಯೋಗದ ಮೆಂಬರ್ ಮಾಡಿದ್ದಿರಾ ? ಮುಖ್ಯ ಕಾರ್ಯದರ್ಶಿಯವರನ್ನಾಗಿ ಮಾಡಿದ್ದಿರಾ? ಜ್ಯುಡಿಷಿಯಲ್ ಡಿಪಾರ್ಟ್‌ಮೆಂಟ್‌ನಲ್ಲಿ ಜಡ್ಜ್ ಆಗಿ ನೇಮಕ ಮಾಡಿದ್ದೀರಾ? ಗವರ್ನ್‌ಮೆಂಟ್ ಪ್ಲೀಡರ್ ಆಗಿ ನೇಮಕ ಮಾಡಿದ್ದೀರಾ ? ಬಸ್ಸಿನಲ್ಲಿ ೩ ಸೀಟು ರಿಸರ್ವೇಷನ್, ದಾದಿಯರ ಕೆಲಸ ಮತ್ತು ಶಾಲಾ ಶಿಕ್ಷಕಿಯರು ಇಂಥ ಕೆಳಪೆ ಕೆಲಸಕ್ಕೆ ಮಾತ್ರ ಹೆಣ್ಣುಮಕ್ಕಳನ್ನು ನೇಮಕ ಮಾಡಿದ್ದೀರ.

ಶ್ರೀ ಬಿ. ಭಾಸ್ಕರ್ ಶೆಟ್ಟಿ.— ನಮ್ಮ ದೇಶದಲ್ಲಿ ಮಹಿಳೆಗೆ ಉನ್ನತ ಸ್ಥಾನ ಕೊಡಬೇಕೆಂದು ಭಾರತದ ಪ್ರಧಾನಮಂತ್ರಿಗಳಾಗಿ ಮಾಡಿದ್ದೆವು ಅಂಥವರನ್ನು ನೀವು ಅಪಪ್ರಚಾರ ಮಾಡಿ ಅವರನ್ನು ಅಧಿಕಾರದಿಂದ ತೆಗೆದಿದ್ದೀರ.

ಶ್ರೀಮತಿ ಎಸ್. ಪ್ರಮೀಳ.—೧೯೬೬ನೇ ಇಸವಿಯಲ್ಲಿ ಒಬ್ಬ ಮಹಿಳೆಯನ್ನು ಪ್ರಧಾನಮಂತ್ರಿಯನ್ನಾಗಿ ಮಾಡುವುದಕ್ಕೆ ನಾವು ಸಹಕಾರ ಕೊಟ್ಟೆವು. ಆದರೆ ಅವರ ಅಧಿಕಾರದಿಂದ ನಮಗೆ ಭ್ರಮನಿರಸನವಾಯಿತು. ಅವರು ಹೆಣ್ಣಾಗಿ ಉಳಿಯಲಿಲ್ಲ. ಎಲ್ಲಾ ಗಂಡಸರನ್ನೂ ಅವರ ಹಿಂದೆ ಡ್ಯಾನ್ಸ್ ಮಾಡುವಂತೆ ಮಾಡಿದರು. ಆ ಹೆಣ್ಣಿನಲ್ಲಿ ಎಲ್ಲೋ ಏನೋ ತಪ್ಪು ಆಗಿದೆ. ಆದ್ದರಿಂದ ಗಂಡಸರನ್ನೆಲ್ಲಾ

ಡ್ಯಾನ್ಸ್ ಮಾಡಿಸಿದ್ದಾರೆ. ಆ ಹೆಣ್ಣಿನಿಂದ ಭ್ರಮನಿರಸವಾಗಿದೆ. ಆದ್ದರಿಂದ ಬಹಳ ಮಟ್ಟಿಗೆ ಆಕೆಯನ್ನು ಹೆಣ್ಣು ಎಂದು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಹೆಣ್ಣುಮಕ್ಕಳು ಸರ್ವೇಸಾಧಾರಣವಾಗಿ ಅನ್ಯಾಯ ಮಾಡುವುದಕ್ಕೆ ಹೋಗುವುದಿಲ್ಲ. ಆದುದರಿಂದ ಅವರ ಅಧಿಕಾರಶಾಹಿ ವರ್ತನೆಯಿಂದ ಅವರು ಅಧಿಕಾರ ವನ್ನು ಬಿಟ್ಟು ಕೆಳಕ್ಕೆ ಬರಬೇಕಾಯಿತು. ಆದರೆ ಈಗ ನಮ್ಮ ಕರ್ನಾಟಕದಲ್ಲಿ ಒಬ್ಬ ಮಹಿಳೆಗೆ ಕ್ಯಾಬಿನೆಟ್ ಮಂತ್ರಿಗಳ ಸ್ಥಾನವನ್ನು ಕೊಟ್ಟು ನೋಡಿ. ಏನು ಮಾಡುತ್ತೇವೆ ಎಂಬುದನ್ನು ನೋಡಿ. ಆಗ ನಿಮಗೆ ಗೊತ್ತಾಗುತ್ತದೆ. ನಾಳೆಯೇ ನೀವು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ. ನೀವು ಹರಿಜನ ಮಹಿಳೆಗೆ ಬೇಕಾದರೆ ಮಂತ್ರಿಸ್ಥಾನವನ್ನು ಕೊಡಿ. ನೀವು ಹರಿಜನರ ಉದ್ಧಾರವನ್ನು ಮಾಡುತ್ತೇವೆಂದು ನೀವು ಹೇಳುತ್ತೀರಲ್ಲ ಹರಿಜನ ಮಹಿಳೆಗೆ ಕ್ಯಾಬಿನೆಟ್ ಮಂತ್ರಿ ಸ್ಥಾನವನ್ನು ಕೊಡಿ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಅವರು ಇಡೀ ಮಹಿಳಾ ಭಾಗದ ಪಾಲಿನ ಕೆಲಸವನ್ನು ಸುಗಮವಾಗಿ ನೋಡಿ ಕೊಳ್ಳುತ್ತಾರೆಂದು ನಾನು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಕುಮಾರಿ ಪ್ರಮೀಳಾ ಅವರು ನಮ್ಮ ಕಡೆ ಬರಲಿ. ಅವರ ಹಿಂದೆ ಯಾರೂ ಡ್ಯಾನ್ಸ್ ಮಾಡದಿದ್ದರೆ ಸರಿ. ಅಲ್ಲಿಯ ಮಟ್ಟಿಗಾದರೂ ಸುಧಾರಿಸಬಹುದು.

ಶ್ರೀ ಎಸ್. ಆರ್ ಬೊಮ್ಮಾಯಿ.—ನಿಮ್ಮ ಕಡೆಯೇ ಶ್ರೀಮತಿ ಮೋಟಮ್ಮನವರು ಇದ್ದಾರೆ. ಶ್ರೀಮತಿ ರೇಣುಕಾ ರಾಜೇಂದ್ರ, ಶ್ರೀಮತಿ ನಾಗಮ್ಮ ಕೇಶವಮೂರ್ತಿ ಇದ್ದಾರೆ. ಇವರ್‍ಯಾರೂ ಬೇಡ ವೆಂದರೆ ಶ್ರೀಮತಿ ಸುಶೀಲಮ್ಮನವರಿಗಾದರೂ ಮಂತ್ರಿ ಪದವಿ ಕೊಡಿ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಹಾಗಾದರೆ ಶ್ರೀಮಾನ್ ಬೊಮ್ಮಾಯಿ ಅವರು ವಿರೋಧಪಕ್ಷದ ನಾಯಕರು ಅವರು ತಮ್ಮ ಸ್ಥಾನವನ್ನು ತೆರವು ಮಾಡಿ ಕುಮಾರಿ ಪ್ರಮೀಳಾ ಅವರಿಗೆ ಆ ಸ್ಥಾನವನ್ನು ಬಿಟ್ಟುಕೊಡಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಗಬಹುದು.

ಶ್ರೀಮತಿ ಎಸ್. ಪ್ರಮೀಳಾ.—ನಾನು ಎಲ್ಲಾದರೂ ಆ ಕಡೆ ಬಂದರೆ ಎಲ್ಲಿ ಮುಖ್ಯಮಂತ್ರಿ ಆಗುತ್ತೇನೋ ಎಂದು ಅವರಿಗೆ ಹೆದರಿಕೆ ಇದೆ. ಅದಕ್ಕೋಸ್ಕರ ನಾನು ಆ ಕಡೆ ಬರುವುದಕ್ಕೆ ತಯಾರಾಗಿಲ್ಲ. ನನಗೆ ಅಧಿಕಾರದ ಆಸೆ ಇಲ್ಲ. ಯಾರು ಹೆಂಗಸರು ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ಸಹಕಾರ ಕೊಡು ತ್ತಾರೆ ಅವರನ್ನು ತೆಗೆದುಕೊಳ್ಳಿ ಅವರಿಗೆ ನಾವು ನಮ್ಮ ಸಹಕಾರವನ್ನು ಕೊಡುತ್ತೇವೆ ಶ್ರೀಮತಿ ಮನೋರಮ ಮಧ್ವರಾಜ್ ಅವರಿಗೆ ಅತಿ ಮುಖ್ಯವಾದ ಬಹಳ ಗಹನವಾದ ಒಂದು ವಿಷಯವನ್ನು ಈ ಸಂಧರ್ಬದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಅವರನ್ನು ಕೇಳುತ್ತೇನೆ. ಇದುವರೆಗೂ ಮಹಿಳೆಯರ ಉದ್ಧಾರ ಆಗಿಲ್ಲ. ಇದಕ್ಕೆ ಕಾರಣ ಏನು ಎಂಬುದನ್ನು ಏನಾದರೂ ನೀವು ವಿಶ್ಲೇಷಣೆ ಮಾಡಿ ನೋಡಿದ್ದೀರಾ ? ಇಡೀ ಕರ್ನಾಟಕದಲ್ಲಿ ಯಾವಯಾವ ಇಲಾಖೆಯಲ್ಲಿ ಎಷ್ಟೆಷ್ಟು ಮಹಿಳೆಯರು ಇದ್ದಾರೆ ಎಂಬುದನ್ನು ಸರ್ವೇ ಮಾಡಿ ನೋಡಿದ್ದೀರಾ ? ಇಲಾಖೆಯಲ್ಲಿ ಇರತಕ್ಕ ಮಹಿಳೆ ಯರ ಕಷ್ಟಸುಖಗಳನ್ನು ತಾವು ವಿಚಾರಣೆ ಮಾಡಿದ್ದೀರಾ? ಇಲಾಖೆಗಳಲ್ಲಿ ಮಹನೀಯರು ಮಹಿಳೆಯರಿಗೆ ಕೊಡತಕ್ಕ ಕಿರುಕುಳದ ಬಗ್ಗೆ ತನಿಖೆ ಮಾಡಿ ನೋಡಿದ್ದೀರಾ? ನೀವು ಯಾವುದನ್ನೂ ಮಾಡಿಲ್ಲ. ಮಹಿಳೆ ಯರಿಗೆ ಅನೇಕ ರೀತಿಯಲ್ಲಿ ಅನ್ಯಾಯವಾಗಿದೆ. ಅವರು ಅವಿದ್ಯಾವಂತರಾಗಿದ್ದಾರೆ. ಮಹಿಳೆಯರಲ್ಲಿ ಸಾಕ್ಷರತೆ ಆಗದೇ ಇರುವುದಕ್ಕೆ ಕಾರಣ ಏನು? ಮಹಿಳೆಯರು ಎಲ್ಲಿಯವರೆಗೆ ತಮ್ಮ ಹಕ್ಕುಭಾದ್ಯತೆಗಳನ್ನು ಅರಿತುಕೊಳ್ಳುವುದಿಲ್ಲ, ಜ್ಞಾನ ಉಂಟಾಗುವುದಿಲ್ಲ ಅಲ್ಲಿಯವರೆಗೆ ಮಹಿಳೆಯರ ಉಧ್ಧಾರವಾಗುವುದಿಲ್ಲ. ಅದಕ್ಕಾಗಿ ಈ ಸಂದರ್ಭದಲ್ಲಿ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ಅವರ ಒಂದು ಇಲಾಖೆಯಲ್ಲಿ ಒಂದು ಸೆಲ್ ಓಪನ್ ಮಾಡಿ ವಾರ್ತೆಯನ್ನು ಪ್ರಚಾರ ಮಾಡತಕ್ಕಂತಹ ಒಂದು ಕೆಲಸವನ್ನು ಮಾಡಬೇಕು. ಕರ್ನಾಟಕದ ಪ್ರತಿಯೊಬ್ಬ ಮಹಿಳೆಗೂ ಕೂಡ ಕಾನೂನಿನ ಬಗ್ಗೆ ತಮ್ಮ ಹಕ್ಕುಭಾದ್ಯತೆಗಳ ಬಗ್ಗೆ, ಅರಿವು ಉಂಟಾಗತಕ್ಕಂತಹ ಶಿಕ್ಷಣವನ್ನು ಕೊಡ ತಕ್ಕಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಪ್ರತಿಯೊಂದು ತಾಲ್ಲೂಕಿನಲ್ಲೂ, ಹಳ್ಳಿ ಯಲ್ಲಿಯೂ ನಿಮ್ಮ ಆಫೀಸರುಗಳನ್ನು ಬಿಟ್ಟು ಅವರಲ್ಲಿ ಅಕ್ಷರ ಜ್ಞಾನ, ಸಾಕ್ಷರತಾ ಪ್ರಚಾರ, ಮಹಿಳೆಯ ಹಕ್ಕು ಭಾದ್ಯತೆಗಳು ಇವುಗಳ ಜ್ಞಾನವನ್ನು ಉಂಟುಮಾಡತಕ್ಕ ವ್ಯವಸ್ಥೆ ಮಾಡಬೇಕು. ಪ್ರತಿಯೊಬ್ಬ ಮಹಿಳೆಯೂ ವಿದ್ಯಾವಂತಳಾಗಬೇಕು. ಆಕೆಯು ತನ್ನ ಕಾಲಮೇಲೆ ತಾನು ನಿಂತು ಜೀವನ ಮಾಡ ತಕ್ಕಂತಹ ವ್ಯವಸ್ಥೆ ಮಾಡಬೇಕು. ಆ ರೀತಿ ಮಾಡಿದರೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ತನ್ನ

ಕಾರ್ಯವನ್ನು ನಿರ್ವಹಿಸಿದ ಹಾಗೆ ಆಗುತ್ತದೆ ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಹೆಣ್ಣುಮಕ್ಕಳು ವಿದ್ಯಾವಂತರಾಗಿರತಕ್ಕ ಒಂದು ಅಂಕಿ ಅಂಶಗಳನ್ನು ತೆಗೆದುಕೊಂಡರೆ ಕೇವಲ ಶೇಕಡ ೧೪ ಜನ ಮಹಿಳೆಯರು ರೂರಲ್ ಎಜುಕೇಷನ್ ಆಗಿದೆ. ಸಾಕ್ಷರತೆಯ ಜ್ಞಾನ ಇಡೀ ಕರ್ನಾಟಕದಲ್ಲಿ ೨೧ ಪರ್ಸೆಂಟ್ ಇದೆ. ಇದು ಇನ್ನೂ ಹೆಚ್ಚಾಗಬೇಕು. ಈ ಅಂಕಿ ಅಂಶ ೧೯೭೧ರಲ್ಲಿತ್ತು. ಆದರೆ ಈಗ್ಗೆ ೧೯೭೮ರಲ್ಲಿ ಅದು ಕಡಿಮೆಯಾಗುತ್ತಾ ಬಂದಿದೆ. ಇವತ್ತು ಒಂದು ಲಕ್ಷಕ್ಕಿಂತಾ ಹೆಚ್ಚು ಮಹಿಳೆಯರು ವಿಧವೆಯರು ಡೆಸ್ಟಿಟ್ಯೂಡ್ ಆಗುತ್ತಿದ್ದಾರೆ. ರಿಪೋರ್ಟಿನಲ್ಲಿರತಕ್ಕ ಚಿತ್ರವನ್ನು ನೋಡಿದರೆ ಮಹಿಳಾ ವಿದ್ಯಾವಂತರ ಸಂಖ್ಯೆ ಕಡಿಮೆಯಾಗುತ್ತಿದೆ. ಈ ರೀತಿಯಾದರೆ ನೀವು ಯಾವ ರೀತಿ ಮಹಿಳೆಯರನ್ನು ಉದ್ಧಾರ ಮಾಡುತ್ತಿದ್ದೀರಾ? ಅವರನ್ನು ಯಾವ ಕೆಲಸಕ್ಕೆ ತೆಗೆದುಕೊಂಡು ಅವರಿಗೆ ಮೋಕ್ಷ ಸಿಕ್ಕುವಂತೆ ಮಾಡುತ್ತೀರಾ? ಅವಳು ವಿಧವೆಯಾದ ಮೇಲೆ ಅವಳಿಗೆ ಭೂಮಿ ಬೇಡ ಎಂದರೆ ಅವಳಿಗೆ ಊಟ ಬೇಡವೇ? ವಿಧವೆಯರಿಗೆ ಪರಿಹಾರ ಕೊಡುತ್ತೇವೆ ಎಂದರೆ ೪೦ ರೂಪಾಯಿ ಪರಿಹಾರ ತೆಗೆದುಕೊಂಡು ಯಾವ ರೀತಿ ಅವಳು ಬದುಕಬೇಕು ಅವಳು ೪೦ರೂ. ಪರಿಹಾರ ತೆಗೆದುಕೊಂಡು ಬಿಕ್ಷೆ ಬೇಡಬೇಕೆ? ೪೦ ರೂಪಾಯಿಯಲ್ಲಿ ಒಬ್ಬ ಮಹಿಳೆ ಕರ್ನಾಟಕದಲ್ಲಿ ಜೀವನ ಮಾಡಬೇಕೆಂದರೆ ಸಾಧ್ಯವೆ? ಇವತ್ತು ನಮ್ಮ ಶಾಸಕರಿಗೆ ಒಂದು ದಿವಸಕ್ಕೆ ೫೧ ರೂಪಾಯಿ ದಿನಭತ್ಯ ಕೊಡುತ್ತಿದ್ದೀರಿ, ಆದರೆ ಒಬ್ಬ ವಿಧವೆಗೆ ಒಂದು ತಿಂಗಳಿಗೆ ೪೦ ರೂಪಾಯಿ ಪರಿಹಾರ ಕೊಟ್ಟರೆ ಅವಳು ಹೇಗೆ ಜೀವನವನ್ನು ಮಾಡಬೇಕು. ಎಲ್ಲಾದರೂ ಸಾಯಬೇಕೇ ಎಂದು ನಾನು ಕೇಳುತ್ತೇನೆ. ಈ ಭಿಕ್ಷೆ ಮಾತ್ರ ನಮಗೆ ಬೇಡ, ಇದನ್ನು ನೀವು ತೆಗೆದುಕೊಂಡು ನಮ್ಮ ಹಕ್ಕುಬಾಧ್ಯತೆಗಳನ್ನು ನಮಗೆ ಕೊಡಿ, ನಮ್ಮ ಕಾಲುಮೇಲೆ ನಾವು ನಿಲ್ಲತಕ್ಕ ಶಕ್ತಿಯನ್ನು, ವಿದ್ಯೆಯನ್ನು ನಮಗೆ ಕೊಡಿ, ನಾವು ಉದ್ಧಾರವಾಗತಕ್ಕ ಕೆಲಸವನ್ನು ನಮಗೆ ಕೊಡಿ ಎಂದು ಕೇಳುತ್ತಾ ಇದ್ದಾರೆ.

ಇನ್ನು ಕರ್ನಾಟಕದಲ್ಲಿ ಡೌರಿ ಪ್ರೊಹಿಬಿಷನ್ ಆಕ್ಟ್ ಏನಿದೆ ಅದರ ಪ್ರಕಾರ ಎಷ್ಟು ಜನಕ್ಕೆ ನೀವು ಪ್ರಾಸಿಕ್ಯೂಟ್ ಮಾಡಿದ್ದೀರಿ, ಎಷ್ಟು ಜನರನ್ನು ಜೈಲಿಗೆ ಹಾಕಿದ್ದೀರಿ, ಎಷ್ಟು ಜನಕ್ಕೆ ಫೈನ್ ಹಾಕಿದ್ದೀರಿ ಎಂದು ನಾನು ಇವತ್ತು ಕೇಳುತ್ತಾ ಇದ್ದೇನೆ. ಇಲ್ಲದೇ ಹೋದರೆ ಡೌರಿ ಪ್ರೊಹಿಬಿಷನ್ ಆಕ್ಟ್ ಏಕೆ ತಂದಿರಿ ಇದನ್ನು ಜಾರಿಗೆ ತರುವುದಕ್ಕೆ ಆಗದೇ ಹೋದರೆ ಇದನ್ನು ಅಬಾಲಿಷ್ ಮಾಡಿ ಇಲ್ಲದೇ ಹೋದರೆ ಡೌರಿ ಪ್ರೊಹಿಬಿಷನ್ ಆಕ್ಟನ್ನು ಸೂಕ್ತವಾಗಿ ಇಂಪ್ಲಿಮೆಂಟ್ ಮಾಡಿ, ಇದರ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಈ ಕಾನೂನನ್ನು ಯಾರು ಉಲ್ಲಂಘನೆ ಮಾಡುತ್ತಾರೆ ಅವರಿಗೆ ಶಿಕ್ಷೆ ಕೊಡುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೈಲಾಸಂರವರು ಒಂದು ನಾಟಕವನ್ನು ಬರೆದಿದ್ದಾರೆ ''ತಾಳಿ ಕಟ್ಟುವ ಕೂಲಿ' ಎಂದು. ತಾಳಿ ಕಟ್ಟಿ ಬನ್ನಿ, ಕೂಲಿ ಕೊಡಿ, ತಾಳಿ ಕಟ್ಟಿದರೆ ವರದಕ್ಷಿಣೆ ಕೊಡುತ್ತಾರೆ ಎಂದೆಲ್ಲಾ ಅದರಲ್ಲಿದೆ. ಈ ರೀತಿ ಗಂಡು ತನ್ನನ್ನು ತಾನು ಮಾರಿಕೊಳ್ಳುವುದಕ್ಕೆ ಹೊರಟರೆ ಅದು ಎಂಥಾ ಒಂದು ಅವಮಾನಕರವಾದ ಪ್ರಸಂಗ. ಇವತ್ತು ಗಂಡು ತನ್ನನ್ನು ತಾನು ಮಾರಿಕೊಳ್ಳುತ್ತಿದೆ. ಈ ರೀತಿ ನಮ್ಮ ಗಂಡುಮಕ್ಕಳು ತಮ್ಮನ್ನು ತಾವು ಮಾರಿಕೊಳ್ಳಬಾರದು. ತಮ್ಮನ್ನು ತಾವು ಮಾರಿಕೊಂಡು ಹಣ ತೆಗೆದುಕೊಳ್ಳ ತಕ್ಕಂಥಾದ್ದು ಮರ್ಯಾದೆ ತರತಕ್ಕ ವಿಷಯವಲ್ಲ. ಇದರಿಂದ ಅವರ ಸ್ಟೇಟಸ್ ಕಡಿಮೆಯಾಗುತ್ತದೆ. ಕೆಲವರು ಡೌರಿ ತೆಗೆದುಕೊಳ್ಳುವುದಿಲ್ಲ, ಕಾರು, ಸ್ಕೂಟರು ತೆಗೆದುಕೊಳ್ಳುತ್ತಾರೆ ಇನ್ನು ಕೆಲವರು ೧೦-೧೫ ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾರೆ, ಇದು ಹೀನಾವಾಯದುದು. ಆದುದರಿಂದ ಡೌರಿ ಪ್ರೊಹಿಬಿಷನ್ ಆಕ್ಟ್ ಏನಿದೆ ಇದನ್ನು ಕಾಗಿನಿಸಿಬಲ್ ಅಫೆನ್ಸ್ ಮಾಡಬೇಕು. ಪೋಲೀಸರು ಏನಾದರೂ ಹೋದರೆ ಅವರ ಕೈ ಬೆಚ್ಚಗೆ ಮಾಡುತ್ತಾರೆ. ತಂದೆತಾಯಿಗಳು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದುದರಿಂದ ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲಬಾರಿಗೆ ಡೌರಿ ಪ್ರೊಹಿಬಿಷನ್ ಆಕ್ಟ್ ಏನಿದೆ ಅದನ್ನು ಕಾಗ್ನಿಸಿಬಲ್ ಅಫೆನ್ಸ್ ಮಾಡಿದರೆ ತಂದೆತಾಯಿಗಳು ಕಂಪ್ಲೈಂಟ್ ಕೊಟ್ಟರೂ ಸರಿ, ಕೊಡದೇ ಹೋದರೂ ಸರಿ ಪೋಲೀಸರು ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಇದರ ಬಗ್ಗೆ ತಾವು ಗಮನಹರಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮೊನ್ನೆ ಕುಮಾರಿ ಪ್ರಮೀಳರವರು ತಮ್ಮ ತಂಗಿ ಮದುವೆ ಮಾಡಿದರು. ನಾವು ನೋಡಿದಹಾಗೆ ವರೋಪಚಾರ ಎಲ್ಲಾ ಮಾಡಿದರು, ಆದರೆ ಇಲ್ಲಿ ಈ ರೀತಿ ಭಾಷಣ ಮಾಡುತ್ತಿದ್ದಾರೆ; ತಂಗಿ ಸುಖವಾಗಿರಲಿ ಎಂದು ಮಾಡಿದರು.

ಶ್ರೀಮತಿ ಎಸ್. ಪ್ರಮೀಳ.—ನನ್ನ ತಂಗಿ ಮದುವೆಯಲ್ಲಿ ವರದಕ್ಷಿಣೆ ಕೊಟ್ಟಿಲ್ಲ, ತನ್ನನ್ನು ಮಾರಿಕೊಳ್ಳುವಂಥ ಗಂಡಿಗೆ ನನ್ನ ತಂಗಿಯನ್ನು ಕೊಡುವುದಕ್ಕೆ ಎಂದೂ ಸಾಧ್ಯವಿಲ್ಲ.

ಶ್ರೀಮತಿ ಸುಶೀಲಾ ಚೆಲುವರಾಜ್.—ಡೌರಿ ಕೊಟ್ಟಿರುವ ಬಗ್ಗೆ ಯಾರ್ಯಾರು ಕಂಪ್ಲೇಂಟ್ ಕೊಟ್ಟಿದ್ದಾರೆ ಎನ್ನುವುದನ್ನು ತಿಳಿಸಿ.

ಶ್ರೀಮತಿ ಎಸ್. ಪ್ರಮೀಳ.—ಡೌರಿ ಕೊಟ್ಟಿದ್ದೇವೆಂದು ಯಾರೂ ಹೇಳುತ್ತಾ ಇಲ್ಲ ಅದ ಕ್ಕೋಸ್ಕರವೇ ನಾನು ಡೌರಿ ಪ್ರೊಹಿಬಿಷನ್ ಆಕ್ಟನ್ನು ಕಾಗ್ನಿಸಿಬಲ್ ಅಫೆನ್ಸ್ ಮಾಡಿ ಎಂದು ಹೇಳುತ್ತಾ ಇರುವುದು.

ಶ್ರೀಮತಿ ಸುಶೀಲಾ ಚೆಲುವರಾಜ್.—ಅದನ್ನು ಕಂಡುಹಿಡಿಯುವುದಕ್ಕೆ ಆಗುವುದೇ ಇಲ್ಲ.

ಶ್ರೀಮತಿ ಎಸ್. ಪ್ರಮೀಳ.—ನಾನು ವಕೀಲಿ ವೃತ್ತಿಯಲ್ಲಿರುವುದರಿಂದ ಡೌರಿ ಬಗ್ಗೆ ಅನೇಕ ವಿಷಯಗಳನ್ನು ಕೇಳಿದ್ದೇನೆ. ನಾವು ಪ್ರತ್ಯಕ್ಷವಾಗಿ ಮದುವೆ ಮಂಟಪದಲ್ಲಿ ನೋಡಬಹುದು. ಪ್ರತ್ಯಕ್ಷ ವಾಗಿ ನೋಡದೇ ಹೋದರೂ ನಡೆಯತಕ್ಕ ಅನೇಕ ವಿಚಾರಗಳನ್ನು ಪ್ರತಿನಿತ್ಯ ಕೇಳುತ್ತಾ ಇರುತ್ತೇವೆ. ಕೆಲವರು ಹಣದ ರೂಪದಲ್ಲಿ ಕೊಡುತ್ತಾರೆ ಕೆಲವರು ವಸ್ತುಗಳ ರೂಪದಲ್ಲಿ ಕೊಡುತ್ತಾರೆ ಅದನ್ನು ನಾವು ನೋಡುತ್ತಾ ಇದ್ದೇವೆ. ಗಿಫ್ಟ್ ಕೊಡತಕ್ಕ ಬಗ್ಗೆ ಕೂಡ ಗಿಫ್ಟ್ ಪ್ರೊಹಿಬಿಷನ್ ಆಕ್ಟ್ ಮಾಡಬೇಕು ಉದಾಹರಣೆಗೆ ಹೇಳುವುದಾದರೆ, ವೆಸ್ಟ್ ಪಾಕೀಸ್ತಾನದಲ್ಲಿ ಗಿಫ್ ಡಿಸ್‌ಪ್ಲೇ ಪ್ರೊಹಿಬಿಷನ್ ಆಕ್ಟ್ ತಂದಿದ್ದಾರೆ ಅದನ್ನು ನೀವು ತರಿಸಿಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ಕಾಗ್ನಿಸಿಬಲ್ ಅಫೆನ್ಸ್ ಆಗಿ ಮಾಡಿದ್ದೇವೆ ಅದು ಅಮಲಿನಲ್ಲಿ ಹಾಗೇ ಇದೆ.

ಶ್ರೀಮತಿ ಎಸ್. ಪ್ರಮೀಳ.—ಕೆಲವು ಮದುವೆಗಳಲ್ಲಿ ನೋಡಿದ್ದೇವೆ. ಮದುವೆ ಮನೆಗಳಲ್ಲಿ ಡಿಸ್‌ಪ್ಲೇ ಮಾಡಿರುತ್ತಾರೆ. ಇಷ್ಟು ಸೀರೆಗಳನ್ನು ಕೊಡಬೇಕು, ಇಷ್ಟು ಒಡವೆಗಳನ್ನು ಕೊಡಬೇಕು, ಇಷ್ಟು ಫರ್ನಿಚರ್ ಕೊಡಬೇಕು ಎಂದು ಡಿಸ್‌ಪ್ಲೇ ಮಾಡಿರುತ್ತಾರೆ. ಗಿಫ್ಟ್ಸ್ ಕೊಡದೇಇದ್ದರೆ ಮದುವೆಮಾಡಿಕೊಳ್ಳುವುದಿಲ್ಲ, ತಾಳಿ ಕಟ್ಟುವುದಿಲ್ಲ ಎನ್ನತಕ್ಕ ಪ್ರಸಂಗಗಳೂ ಇವೆ. ನಾನೂ ಪರ್ಸನಲ್ಲಾಗಿ ಹೇಳುತ್ತಾ ಇಲ್ಲ, ಆದುದರಿಂದ ಪಾಕಿಸ್ತಾನದಲ್ಲಿ ಗಿಫ್ಟ್ ಡಿಸ್‌ಪ್ಲೇ ಪ್ರೊಹಿಬಿಷನ್ ಆಕ್ಟ್ ಏನು ತಂದಿದ್ದಾರೆ, ಅದೇ ರೀತಿ ನೀವು ತಂದರೆ ಸೋಷಿಯಲ್ ಲೆಜಿಸ್ಲೇಷನ್ ಆಗುತ್ತದೆ. ಹೆಣ್ಣುಮಕ್ಕಳಿಗೆ ಬದುಕುವುದಕ್ಕೆ ಆಗುತ್ತದೆ, ಇದನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಚಿಲ್ಡ್ರನ್ಸ್ ಮ್ಯಾರೇಜ್ ಪ್ರೊಹಿಬಿಷನ್ ಆಕ್ಟ್ ತರಬೇಕು. ಏಕೆಂದರೆ, ತುಂಬಾ ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡುತ್ತಾರೆ. ರೂರಲ್ ಪಾಪುಲೇಷನ್‌ನಲ್ಲಿ ೯೦ ಪರ್ಸೆಂಟ್ ಚಿಕ್ಕ ವಯ ಸ್ಸಿನಲ್ಲಿ ಮದುವೆ ಮಾಡತಕ್ಕ ಪರಿಪಾಠ ಇವತ್ತು ಇದೆ. ಅವರಿಗೆ ಜ್ಞಾನ ಇದೆಯೋ ಇಲ್ಲವೋ ಗೊತ್ತಿಲ್ಲ, ಬೇಕು ಬೇಕಾದವರು ಚಿಕ್ಕವಯಸ್ಸಿನಲ್ಲಿ ಮದುವೆಮಾಡತಕ್ಕ ಪದ್ಧತಿ ಇದೆ. ಇದಕ್ಕೆ ಗುಜರಾತಿನಲ್ಲಿ ಚಿಲ್ಡ್ರನ್ಸ್ ಮ್ಯಾರೇಜ್ ಪ್ರೊಹಿಬಿಷನ್ ಆಕ್ಟನ್ನು ಕಾಗ್ನಿಸಿಬಲ್ ಅಫೆನ್ಸ್ ಎಂದು ಮಾಡಿದ್ದಾರೆ. ಅದೇ ರೀತಿ ಕರ್ನಾಟಕದಲ್ಲಿ ಕೂಡ ಕಾಗ್ನಿಸಿಬಲ್ ಅಫೆನ್ಸ್ ಎಂದು ಮಾಡಿದರೆ ಅನುಕೂಲವಾಗುತ್ತದೆ. ಇದರಿಂದ ಚಿಕ್ಕವಯಸ್ಸಿನಲ್ಲಿ ಮಕ್ಕಳ ಮದುವೆಯಾಗಿ ಅವರ ಜೀವನ ಹಾಳಾಗುವುದನ್ನು ತಪ್ಪಿಸಬಹುದು. ಆದುದರಿಂದ ಇದನ್ನು ನಿಮ್ಮ ಡಿಪಾರ್ಟ್‌ಮೆಂಟ್ ವತಿಯಿಂದ ಮಾಡಬೇಕು ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಲೇಬರ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ, ಮುಖ್ಯವಾಗಿ ಬೆಂಗಳೂರಿನ ವಿಚಾರ ಹೇಳುವುದಾದರೆ, ಬರೋಕಾ ಲಿಮಿಟೆಡ್, ಇಂಡಸ್ಟ್ರಿಯಲ್ ಎಸ್ಟೇಟ್ ಮುಂತಾದ ಕಡೆಗಳಲ್ಲಿ, ಫ್ಯಾಕ್ಟರಿ ಗಳಲ್ಲಿ ಹೆಣ್ಣುಮಕ್ಕಳು ಏನು ಕೆಲಸಮಾಡುತ್ತಿದ್ದಾರೆ ಅವರು ಅಲಸೂರಿನಿಂದ ಚಾಮರಾಜಪೇಟೆಗೆ ಐದಾರು ಮೈಲಿ ನಡೆದುಕೊಂಡು ಹೋಗುತ್ತಾಇದ್ದಾರೆ. ಅವರಿಗೆ ೮ ಆಣೆಯಿಂದ ಒಂದೂವರೆ ರೂಪಾಯಿವರೆಗೆ ದಿನಗೂಲಿ ಕೊಡುತ್ತಾ ಇದ್ದಾರೆ. ನಮ್ಮ ಹೆಣ್ಣುಮಕ್ಕಳು ತಿಂಗಳಿಗೆ ೪೫ ರೂಪಾಯಿ ಗಳನ್ನು ತೆಗೆದುಕೊಂಡು ಇಲ್ಲಿಂದ ಅಲ್ಲಿಗೆ ನಡೆದುಕೊಂಡು ಹೋಗಿ ಜೀವನಮಾಡುವುದು ಹೇಗೆ, ಅವರಿಗೆ ಜೀವನದಲ್ಲಿ ಏನು ಆಸೆ ಇರುತ್ತದೆ. ಅವರಿಗೆ ನಿರ್ದಿಷ್ಟವಾದ ಸಂಬಳ ಇಲ್ಲ, ಉದ್ಯೋಗ ಇಲ್ಲ, ಮನೆ ಇಲ್ಲ, ಇಂತಹ ಸಂದರ್ಭದಲ್ಲಿ ಅವರು ಬದುಕುವುದಕ್ಕೆ ಸಾಧ್ಯವಿಲ್ಲ ಸೆಕ್ಯೂರಿಟಿ ಆಫ್ ಲೈಫ್ ಇಲ್ಲ, ಅಂಥವರಿಗೆ ಏನು ಮಾಡಿದ್ದೀರಿ ಎಂದು ನಾನು ಕೇಳುತ್ತೇನೆ. ಅದಕೋಸ್ಕರ ನಿಮ್ಮ ಡಿಪಾರ್ಟ್

ಮೆಂಟ್‌ನಲ್ಲಿ, ಇದಕ್ಕೆ ಒಂದು ಸೆಲ್ ಓಪನ್‌ಮಾಡಿ, ಸ್ಪೆಷಲ್ ಆಫೀಸರನ್ನು ನೇಮಕಮಾಡಿ, ಆ ಆಫೀಸರ್ ಮುಖಾಂತರ ಮಹಿಳೆಯರ ಕುಂದುಕೊರತೆಗಳನ್ನು ನಿಮ್ಮ ಅವಗಾಹನೆಗೆ ತರಲಿಕ್ಕೆ ಅನುಕೂಲವಾಗುತ್ತದೆ. ಈಗ ಲೇಬರ್ ಮಿನಿಸ್ಟರ್ ಲೇಬರ್ ಡಿಪಾರ್ಟ್‌ಮೆಂಟ್ ತೆಗೆದುಕೊಂಡಿದ್ದಾರೆ. ಅವರಿಗೆ ಹೆಣ್ಣುಮಕ್ಕಳ ಕಷ್ಟಸುಖಗಳನ್ನು ಅರ್ಥಮಾಡಿಕೊಳ್ಳುವಷ್ಟು ಶಕ್ತಿ ಇಲ್ಲ. ಹೆಣ್ಣುಮಕ್ಕಳು ತಿಂಗಳಿಗೆ ೪೫ ರೂಪಾಯಿ ತೆಗೆದುಕೊಂಡು ಜೀವನಮಾಡುವುದಕ್ಕಾಗುವುದಿಲ್ಲ. ಆದುದರಿಂದ ತಾವು ಕೂಲಂಕುಷವಾಗಿ ಇದನ್ನು ಪರಿಶೀಲನೆಮಾಡಿ, ನನ್ನ ಸಲಹೆಯಂತೆ ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ ಇದಕ್ಕಿಂತ ಹೆಚ್ಚಾಗಿ ನಮ್ಮಲ್ಲಿ ಮುಖ್ಯವಾದ ವಿಷಯವೇನೆಂದರೆ ಮಹಿಳೆಯರು ಸ್ವಾವಲಂಬನೆಗೆ.......

೫-೦೦ ಪಿ. ಎಂ.

ಶ್ರೀ ಎಂ. ಗಂಗಣ್ಣ ಭೀಮಪ್ಪ.—ನಮ್ಮ ಕಡೆ ವರಶುಲ್ಕ ಅಂತ ಇದೆ. ಗಂಡು ಹೆಣ್ಣಿನ ಕಡೆಯು ವರಿಗೇ, ೫೦೦, ೧೦೦೦ ರೂ. ಗಳನ್ನು ಕೊಡಬೇಕಾಗುತ್ತದೆ ಇದಕ್ಕೇನು ತಾವು ಹೇಳುತ್ತೀರಿ? ಇದಕ್ಕೆ ಯಾವ ರೀತಿಯ ಕಾನೂನು ಮಾಡಬೇಕೆಂದು ತಾವು ಸಲಹೆ ಕೊಡುತ್ತೀರಿ ?

ಶ್ರೀಮತಿ ಎಸ್. ಪ್ರಮೀಳಾ.—ನಿಮ್ಮನ್ನು ಮಾರಿಕೊಳ್ಳಬೇಡಿ ಎಂದು ಹೇಳಿದೆ, ತಾವು ಹೇಳಿದ್ದನ್ನು ಏತಕ್ಕೆ ಅವರು ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಗಂಡು ಒಂದು ವೇಳೆ ಏನಾದರೂ ಹೆಣ್ಣುಮಗಳನ್ನು ಬಿಟ್ಟು ಹೋದರೆ ಅವರಿಗೆ ತನ್ನ ರಕ್ಷಣೆಗೋಸ್ಕರವಾಗಿ ಇರಲಿ ಎಂದು ತೆಗೆದುಕೊಳ್ಳುವ ಪದ್ಧತಿ ಇದೆ. ತಾವು ಹೆಣ್ಣುಮಕ್ಕಳ ಹಿತರಕ್ಷಣೆಗಾಗಿ ತಾವು ಒಂದು ಕಮಿಷನ್ ನೇಮಕ ಮಾಡಬೇಕಾಗಿದೆ. ಹಾವನೂರ್ ರಿಪೋರ್ಟ್‌ನಲ್ಲೂ ಕೂಡ ಮಹಿಳೆ ಹಿಂದುಳಿದ ವರ್ಗಕ್ಕೆ ಸೇರಿದವಳೆಂದು ಹೇಳಿದ್ದಾರೆ, ಅದೇ ರೀತಿ ಕಾಕ ಕಾಲೇಲ್ಕರರವರು ಮಹಾತ್ಮಗಾಂಧೀಜಿಯವರು ಹೇಳಿದ್ದಾರೆ. ಆದರೆ ಇದುವರೆಗೂ ಆದ ಅನ್ಯಾಯವನ್ನು ಸರಿಪಡಿಸುವುದಕ್ಕೆ ಯಾವುದೇ ಒಂದು ಕ್ರಮವನ್ನು ತೆಗೆದುಕೊಂಡಿಲ್ಲ, ಅದಕ್ಕಾಗಿ ಕ್ರಮಬದ್ಧವಾದ ನಿರೂಪಣೆಯನ್ನು ಹೊರಡಿಸಿಲ್ಲ. ಈಗಲಾದರೂ ಶ್ರೀಮತಿ ಮನೋರಮಾ ಮಾಧ್ವ ರಾಜ್‌ರವರು ಒಂದು ಕಮೀಷನ್ ನೇಮಕ ಮಾಡಿ ಮಹಿಳೆಯರಿಗೆ ಇಲ್ಲಿಯವರೆಗೆ ಆದ ಅನ್ಯಾಯವನ್ನು ಒಂದು ಕ್ರೋಢೀಕರಿಸಿ ಅದನ್ನೆಲ್ಲಾ ಸರಿಪಡಿಸುವುದಕ್ಕೆ ಹೋದಸಾರಿ ಕೂಡ ನಾನು ಕೇಳಿದ್ದೆ ಆದರೆ ಇದುವರೆಗೂ ಏನೂ ಮಾಡಲಿಲ್ಲ, ಈ ಸಾರ್ತಿಯೂ ನಾನೂ ಕೇಳುತ್ತಿದ್ದೇನೆ. ನಮ್ಮ ಕಡೆ ಒಂದು ಮಾತು ಇದೆ, ಅನ್ನ ಕೇಳಬೇಡ, ಬಟ್ಟೆ ಕೇಳಬೇಡ, ನಿನ್ನ ಗಿಣಿ ಸಾಕದ ಹಾಗೆ ಸಾಕುತ್ತೀವಿ ಚಿನ್ನ ಅಂತ ಹೇಳಿದಹಾಗೆ ಅನ್ನ ಮಾತ್ರ ಕೇಳಬೇಡ, ಬಟ್ಟೆ ಕೇಳಬೇಡ ಚಿನ್ನ, ಗಿಣಿ ಸಾಕಿದ ಹಾಗೆ ಸಾಕುತ್ತೀವಿ ಅಂತ ತಾವು ಹೇಳುವುದನ್ನು ನಾವು ಕೇಳಬೇಕಾಗಿದೆ. ಇವತ್ತು ಬರೀ ನಾಲ್ಕು ಗೋಡೆಗಳ ಮಧ್ಯೆ ಮಾತ್ರ ಇರಿ ಎಂದು ಹೇಳುವುದಾದರೆ, ನಮಗೆ ನಿಮ್ಮ ಚಿನ್ನ ಬೇಡ, ಬಂಗಾರ ಬೇಡ, ಒಡವೆ ಬೇಡ ಕೆಲಸ ಮಾಡಲಿಕ್ಕೆ ನಮಗೆ ಶಕ್ತಿ ಇದೆ ಕೆಲಸ ಕೊಡಿ, ಉಳುಮೆ ಮಾಡುವುದಕ್ಕೆ ಶಕ್ತಿ ಇದೆ ಭೂಮಿ ಕೊಡಿ ಎಂದು ಕೇಳುತ್ತಿದ್ದೇವೆ.........

ಅಧ್ಯಕ್ಷರು.—ತಮಗೆ ನಿಗದಿ ಮಾಡಿದ ವೇಳೆ ಆಗುತ್ತಾ ಬಂತು, ಬೇಗನೆ ಭಾಷಣ ಮುಗಿಸಿ.

ಶ್ರೀಮತಿ ಎಸ್. ಪ್ರಮಿಳಾ.—ಇನ್ನು ಕೇವಲ ೨೦ ನಿಮಿಷ ಕೊಡಿ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇಷ್ಟು ಹೊತ್ತು ಅವರು ಮಾತನಾಡಿದ್ದಾರೆ ಇನ್ನು ಮಾತನಾಡು ವುದಕ್ಕೆ ನಮಗೆ ಅಡ್ಡಿಯಿಲ್ಲ, ಆದರೆ ಅವರ ಪಕ್ಷದ ಕಡೆಯ ವೇಳೆಯಲ್ಲಿ ಸರಿತೂಗಿಸುವ ಹಾಗಿದ್ದರೆ ನಮ್ಮ ಅಭ್ಯಂತರವೇನೂ ಇಲ್ಲ.

ಅಧ್ಯಕ್ಷರು.—ಅದು ಆಗುವುದಿಲ್ಲ ಮತ್ತೆ ಅವರ ಕಡೆಯವರೇ ಗಲಾಟೆಮಾಡುತ್ತಾರೆ. ತಾವು ದಯವಿಟ್ಟು ಮುಕ್ತಾಯ ಮಾಡಿ.

ಶ್ರೀಮತಿ ಎಸ್. ಪ್ರಮೀಳಾ.—ಅಧ್ಯಕ್ಷರೇ ಇನ್ನು ಹೆಚ್ಚು ಮಾತನಾಡುವುದಕ್ಕೆ ವೇಳೆ ತೆಗೆದು ಕೊಳ್ಳುವುದಿಲ್ಲ, ಹೆಣ್ಣುಮಕ್ಕಳ ಕಷ್ಟ ಏನು ಎನ್ನುವ ಬಗ್ಗೆ ನಿಮ್ಮ ಮುಂದೆ ಸಂಪೂರ್ಣವಾದ ಚಿತ್ರವನ್ನು ಇಟ್ಟಿದ್ದೇನೆ. ನಿಮಗೂ ಹೆಣ್ಣುಮಕ್ಕಳು ಮರಿ ಇರುವುದರಿಂದ, ಹೆಣ್ಣುಮಕ್ಕಳು ಉದ್ಧಾರ

ವಾಗಬೇಕು ಎನ್ನುವುದು ನಿಮ್ಮ ಮನಸ್ಸಿನಲ್ಲಿ ಇರುವುದಾದರೆ, ನಿಮ್ಮ ಧಮನಿ ಧಮನಿಯಲ್ಲಿ ಹರಿಯುವ ರಕ್ತದಲ್ಲಿ ಕಷ್ಟದ ಅರಿವು ಗೊತ್ತಾಗಿದ್ದರೆ ತಾವು ಈಗ ಹೆಣ್ಣುಮಕ್ಕಳಿಗೆ ಏನು ಅನ್ಯಾಯ, ಭೇದಭಾವನೆ ಯಾಗುತ್ತಿದೆ ಅದನ್ನು ತಡೆಗಟ್ಟುವುದಕ್ಕೆ ತಾವು ಕೂಡಲೇ ವ್ಯವಸ್ಥೆ ಮಾಡಬೇಕು. ಇನ್ನು ಕೊನೆಯದಾಗಿ ಎಕಾನಮಿ ಆಫ್ ದಿ ಫ್ಯಾಮಿಲಿ ಬಗ್ಗೆ ಒಂದೇ ಒಂದು ಮಾತು ಹೇಳುವುದಾದರೆ, ಗಂಡ ದುಡಿದುಕೊಂಡು ಬರಬೇಕು ಹೆಂಡತಿ ಆದವಳು ಮನೆಯಲ್ಲಿ ಅಡಿಗೆ ಮಾಡಿಕೊಂಡು ಬಿದ್ದಿರಬೇಕು. ಎಂದರೆ ಗಂಡ ದುಡಿಯುವುದಕ್ಕೆ ಶಕ್ತಿ ಕೊಡತಕ್ಕವಳು ಯಾರು ? ಹೆಣ್ಣು, ಹೆಣ್ಣು ಮನೆಯಲ್ಲಿ ಶಾಂತಿ, ಸಮಾಧಾನವಾಗಿದ್ದ ಪಕ್ಷದಲ್ಲಿ ಮಾತ್ರ ಗಂಡು ಚೆನ್ನಾಗಿ ದುಡಿಯಬಲ್ಲ ಇಲ್ಲದೇ ಇದ್ದ ಪಕ್ಷದಲ್ಲಿ ಅದು ಅವನಿಂದ ಸಾಧ್ಯವಿಲ್ಲ. ಆದುದರಿಂದ ಗಂಡು ದುಡಿದ ಹಣದ ಪಾಲಿನಲ್ಲಿ ಅವಳಿಗೂ ಸಂಪೂರ್ಣ ಹಕ್ಕು ಇದೆ. ಅವನ ಸಂಬಳ ಪೂರ್ತಿ ಅವನ ಹೆಸರಿಗೆ ಆಗಿ ಅವಳ ಕೈಗೆ ಹೋದ ಪಕ್ಷದಲ್ಲಿ ಅವಳು ತನ್ನ ಸಂಸಾರವನ್ನು ಸರಿಯಾಗಿ ತೂಗಿಸಿಕೊಂಡು ಹೋಗುವುದಕ್ಕೆ ಸಾಧ್ಯವಾದೀತು ಇಲ್ಲವಾದರೆ ಅವಳು ಆರ್ಥಿಕ ಸ್ವಾವಲಂಬನೆಯಾಗಬೇಕಾದೀತು. ಇದನ್ನು ನೀವು ಎಲ್ಲಿಯವರೆಗೂ ಮಾಡುವುದಿಲ್ಲವೋ ಅಲ್ಲಿಯವರೆಗೂ ಅವಳ ಎಕ್ಸ್‌ಪ್ಲಾಯ್ಟ್ ಆಗುತ್ತದೆ. ಆ ರೀತಿ ಎಕ್ಸ್‌ಪ್ಲಾಯ್ಟ್ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಇನ್ನು ಇವತ್ತು ಬೆಳಿಗ್ಗೆ ಪೇಪರಿನಲ್ಲಿ ದಿ॥ ಕಲ್ಪನಾರವರ ಅಕಾಲಿಕ ಮರಣದ ಬಗ್ಗೆ ಯಾವ ಮನುಷ್ಯರು ಹಿಂದೆ ಇದ್ದು ಈ ಕೆಲಸವನ್ನು ಮಾಡಿಸಿದ್ದಾರೆ ಎನ್ನುವ ಬಗ್ಗೆ ಬಂದಿದೆ. ಅದೇ ರೀತಿ ಬೆಂಗಳೂರು ನಗರದಲ್ಲಿರುವ ಫ್ಲೋರಾ ನೈಟ್‌ಕ್ಲಬಿನಲ್ಲಿ ೩ ಹೆಣ್ಣು ಮಗಳು ಕ್ಯಾಬರೆ ನೃತ್ಯ ಆಡುವಾಗ ಅವಳಿಗೆ ಚಾಕುವಿನಿಂದ ಹೊಡೆದು ಬಡೆದು ಅಮಾನುಷ ಕೃತ್ಯವೆಸಗಿರುವ ಬಗ್ಗೆ ಪ್ರತ್ಯಕ್ಷ ಚಿತ್ರ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ. ಇದನ್ನು ನಾವು ಎಲ್ಲಿಯವರೆಗೆ ಸಹಿಸಲಿಕ್ಕೆ ಸಾಧ್ಯ ಎಂದು ನಿಮ್ಮಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಇವತ್ತು ಒಬ್ಬ ನರ್ತಕಿಯರಿಗಾಗಲೀ, ಒಬ್ಬ ಸಿನಿಮಾ ರಂಗದ ಕಲಾವಿಧೆಯರಿಗಾಗಲೀ ರಕ್ಷಣೆ ಕೊಡದೇ ಹೋದರೆ ಇಲ್ಲಿ ಬೆಂಗಳೂರು ನಗರದಲ್ಲಿ ಒಂದು ಆಟೋ ರಿಕ್ಷಾದಲ್ಲಿ ಹೋದರೆ ಅವಳು ಮನೆಗೆ ಸುರಕ್ಷಿತವಾಗಿ ಮುಟ್ಟುತ್ತಾಳೋ ಇಲ್ಲವೋ ಎನ್ನುವ ಬಗ್ಗೆ ರಕ್ಷಣೇ ಇಲ್ಲದೇಹೋದರೆ ಹೇಗೆ ? ನೀವು ಮುಖ್ಯಮಂತ್ರಿಗಳವರನ್ನು ಕೇಳಿ ಅವರ ಕೈಯಿಂದ ಹೆಣ್ಣುಮಕ್ಕಳ ಮಾನ ಪ್ರಾಣ ರಕ್ಷಣೆ ಮಾಡಲು ಆಗದೇಹೋದರೆ ಅವರ ಹತ್ತಿರ ಇರುವ ಪೋರ್ಟ ಫೋಲಿಯೋವನ್ನು ನೀವೇ ವಹಿಸಿಕೊಳ್ಳಿ ಅಂತ ಮನವಿ ಮಾಡಿಕೊಳ್ಳುತ್ತೇನೆ. ಆಂದ್ರ ಪ್ರದೇಶದಲ್ಲಿ ಹೆಣ್ಣುಮಕ್ಕಳ ಅಡ್ಮಿನಿಸ್ಟ್ರೇಷನ್ ಇರುವ ಪೋಲೀಸ್ ಠಾಣೆಗಳು ಇವೆ. ಅಲ್ಲಿ ಹೆಣ್ಣು ಮಕ್ಕಳಿಗೆ ತೊಂದರೆಯಾದರೆ ಅವರು ಸೀದಾ ಪೋಲೀಸ್ ಠಾಣೆಗೆ ಹೋಗಿ ಕಂಪ್ಲೇಂಟ್ ಕೊಡಲು ಅನುಕೂಲ ಮಾಡಿಕೊಟ್ಟಿದ್ದಾರೆ. ಅಲ್ಲಿ ಲೇಡಿ ಪೋಲೀಸ್ ಇನ್ಸ್‌ಪೆಕ್ಟರ್, ಲೇಡಿ ಕಾನ್ಸ್‌ಟೇಬಲ್‌ಗಳು ಇದ್ದಾರೆ ಅದೇ ರೀತಿ ನೀವು ಸಹ ನಮ್ಮ ಕರ್ನಾಟಕ ರಾಜ್ಯದಲ್ಲಿ ಹೆಣ್ಣುಮಕ್ಕಳ ಕಷ್ಟಕಾರ್ಪಣ್ಯಗಳನ್ನು ಪರಿಹಾರ ಮಾಡಲು ಏತಕ್ಕೆ ಒಂದು ಪ್ರತ್ಯೇಕವಾದ ಸ್ಟೇಷನ್ ಓಪನ್ ಮಾಡಬಾರದೆಂದು ಕೇಳಬಯ ಸುತ್ತೇನೆ. ಅಡ್ಮಿನಿಸ್ಟ್ರೇಷನ್ ಅವರ ಕೈಯಲ್ಲಿ ಕೊಟ್ಟರೆ ಅವರು ಹೇಗೆ ತಮ್ಮನ್ನು ತಾವು ರಕ್ಷಣೆ ಮಾಡಿ ಕೊಳ್ಳಬಲ್ಲರು ಎಂಬುದು ತಮಗೇ ಗೊತ್ತಾಗುತ್ತದೆಂದು ಕೇಳಿಕೊಂಡು ನನಗೆ ಮಾತನಾಡಲು ಕೊಟ್ಟಿದ್ದ ವೇಳೆಗಿಂತ ಇನ್ನು ೫ ನಿಮಿಷಗಳಕಾಲ ಹೆಚ್ಚು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತಾ, ತಾವು ಏನು ೬ ಕೋಟಿ ರೂಪಾಯಿಗಳನ್ನು ಕೇಳಿದ್ದೀರಿ ಅದು ಏನೇನು ಸಾಲದು ೫೦ ಕೋಟಿ ರೂಪಾಯಿಗಳ ನ್ನಾದರೂ ಕೇಳಿ ಪಡೆದು ಆದರಿಂದ ನಮ್ಮ ಹೆಣ್ಣುಮಕ್ಕಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡಿ ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್(ಹೊಸನಗರ):— ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿಯವರಗೂ ಮಾನ್ಯ ಸದಸ್ಯಣೀಯರಾದ ಶ್ರೀಮತಿ ಪ್ರಮಿಳಾ ರವರ ಭಾಷಣವನ್ನು ಕೇಳಿಸಿಕೊಂಡ ನನಗೆ ಮೂರ್ಚೆ ಹೋಗುವಂಥಾ ಪರಿಸ್ಥಿತಿ ಬಂದಿದೆ. ಏತಕ್ಕೆಂದರೆ ಅವರು ಏನಾದರೂ ಮುಖ್ಯಮಂತ್ರಿಗಳಾಗಿ ಬಿಟ್ಟರೆ ಒಂದೇ ಸಲ ಗಂಡು ಮಕ್ಕಳನ್ನು ಸಾಲಾಗಿ ನಿಲ್ಲಿಸಿ ಶೂಟ್ ಮಾಡಿ ಬಿಡುತ್ತಾರೊ ಏನೋ ಎನ್ನುವ ಭಾವನೆ ನನಗೆ ಬಂತು...ಅಷ್ಟು ದ್ವೇಷ ಅಡಗಿಬಿಟ್ಟಿದೆ ಅವರಲ್ಲಿ ಪಾಪ.......

ಶ್ರೀಮತಿ ಎಸ್. ಪ್ರಮಿಳಾ :— ಇಂಥಾ ಅಪರಾಧ ನೀವು ಮಾಡಿದ್ದು ನಿಜವಾಗಿದ್ದರೆ ನಿಮ್ಮನು ಶೂಟ್ ಮಾಡಬೇಕಾಗುತ್ತದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್:— ಆದರೆ ದೋಷ ಎಲ್ಲಿದೆ ಎಂದರೆ ಅವರು ಪಾಪ ಮದುವೆ ಆಗದೇ ಇರುವುದು. ಆ ದ್ವೇಷ ಮದುವೆ ಆಗಿ ಬಿಟ್ಟಿದ್ದರೆ. ಗಂಡಸರ ಮೇಲೆ ಇಷ್ಟು ದ್ವೇಷ ಇರುತ್ತಿರಲಿಲ್ಲ ಅಂತ ನನ್ನ ಭಾವನೆ. ಏತಕ್ಕಂದರೆ ಸಂಸಾರ ಹೇಗೆ ನಡೆಯುತ್ತದೆ ಎಂಬುದೆಲ್ಲಾ ಅವರಿಗೆ ಗೊತ್ತಾಗಿರುತ್ತಿತ್ತು. ಸಾವಿರ ಕುದುರೆ ಸರದಾರ, ಮನೆಯ ಹೆಂಡತಿಯ ಮುಂದೆ ಪಿಂಜಾರ ಅಂತ ನಮ್ಮ ಕಡೆ ಗಾದೆ ಇದೆ ಹಾಗೆ, ಎಷ್ಟೋ ಗಂಡಸರು ಹೆಂಡತಿಯ ಕೈಯಲ್ಲಿ ಒಡೆತ ತಿನ್ನುತ್ತಿರುವುದು ಇದೆ. ಉದಾಹರಣೆಗೆ ತಮಗೆ ಹೇಳಬೇಕು ಎಂದರೆ ಶಿವಮೊಗ್ಗದಲ್ಲಿ ನಮ್ಮ ಮನೆಯ ಎದುರಿಗೆ ಗಂಡ ಹೆಂಡತಿಯರಿದ್ದರು. ಹೆಂಡತಿ ಗಂಡನಿಗೆ ದಿವಸಾ ಹೊಡೆಯುವುದು. ಆ ಗಂಡ ಪಾಪ ಮೈ ಕೈ ಮೂಳೆ ಮುರಿಯುವ ಹಾಗೆ ಹೊಡಸಿಕೊಂಡರೂ ಕೂಡ ಒಂದು ಚೂರು ಗಲಾಟೆ ಮಾಡದೇ ಆ ಕಷ್ಟವನ್ನು ಅನುಭವಿಸುತ್ತಿದ್ದ. ಆಕೆ ಹೊಡೆದು ಹೊಡೆದು ಸುಸ್ತಾಗಿ ಕೆಳಕ್ಕೆ ಬಿದ್ದ ಮೇಲೆ ಆ ಹೆಂಡತಿ ಸ್ವಲ್ಪ ಹೊತ್ತಾದ ಮೇಲೆ ಸುಧಾರಿಸಿಕೊಂಡು ಆ ಗಂಡನಿಗೆ ಮೈ ಕೈಗೆ ಎಲ್ಲಾ ಎಣ್ಣೆ ಸವರುವುದು, ಈ ದೃಶ್ಯವನ್ನು ನಾವು ಕಣ್ಣಾರೆ ನೋಡಿದ್ದೇವೆ ಏತಕೆಂದರೆ ದಾಂಪತ್ಯ ಜೀವನ ಎಂದರೆ ಏನು ಎಂಬುದು ಪಾಪ ಅವರಿಗೆ ಗೊತ್ತಿಲ್ಲ.

ಶ್ರೀಮತಿ ಅನುಸೂಯ ಗಜಾನನ ಶರ್ಮ :— ಒಬ್ಬ ಹೆಂಗಸಿನ ಹತ್ತಿರ ಒಬ್ಬ ಗಂಡಸು ಹೊಡೆಸಿಕೊಂಡ ಅಂತ ತಾವು ಇಷ್ಟು ಪಶ್ಚಾತಾಪ ಪಡುತ್ತಿದ್ದೀರಿಲ್ಲಾ, ಲಕ್ಷ ಗಟ್ಟಲೆ ಹೆಣ್ಣುಮಕ್ಕಳು ಗಂಡಸರ ಹತ್ತಿರ ಹಿಂಸೆ ಪಡುತ್ತಿದ್ದಾರಲ್ಲಾ ಅದಕ್ಕೆ ಉತ್ತರ ಕೊಡಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ :— ದಾಂಪತ್ಯ ಜೀವನದಲ್ಲಿ ಸರಸ ವಿರಸ ಎಲ್ಲಾ ಇರುತ್ತದೆ. ಅದರ ರುಚಿ ಪಾಪ ಅವರಿಗೇನು ಗೊತ್ತು. ಸುಮ್ಮನೇ ಪುರುಷ ಸಮಾಜವನ್ನು ದ್ವೇಷ ಮಾಡತಕ್ಕ ವಿಚಾರ ಒಂದು ಅವರಿಗೆ ಗೊತ್ತಿದೇಯೋ ಹೊರತು ಅವರ ಒಳಗಿನ ವಿಷಯ ಅವರಿಗೆ ಅರ್ಥವಾಗಿಲ್ಲ. ನಾನು ತಮ್ಮನ್ನು ಕೇಳುತ್ತೇನೆ ಈಗ ಜೇಗಂ ಆ್ಯಕ್ಟ್ ಅಂತ ಒಂದು ಜಾರಿಗೆ ಬಂತು. ಒಬ್ಬ ಗಂಡಸು ಒಂದು ಹೆಂಗಸ್ಸಿಗೆ ಗಿಂತ ಜಾಸ್ತಿ ಇಟ್ಟುಕೊಳ್ಳಬಾರದು ಅಂತ. ಅದರೆ ಅದು ಜಾರಿಯಲ್ಲಿ ಬಂದಿದೆಯೋ ? ಇಲ್ಲ. ಅದಕ್ಕೆ ಯಾರು ಕಂಪ್ಲೆಂಟ್ ಕೊಡಬೇಕು ? ಹೆಂಡತಿ ಇಲ್ಲ ಮಾವ ಕೊಡಬೇಕು, ಆ ಮಾವಯ್ಯ ಅಯ್ಯೋ ನನ್ನ ಅಳಿಯ ಹೇಗಾದರು ಸರಿ ಮಗಳನ್ನು ಕಾಪಾಡಿದರೆ ಸರಿ, ನಾನು ಏತಕ್ಕೆ ಕಂಪ್ಲೆಂಟ್ ಕೊಟ್ಟು ನನ್ನ ಅಳಿಯನನ್ನು ಜೈಲಿಗೆ ಕಳುಹಿಸಬೇಕು ಅಂತ ಅವನೂ ಕಂಪ್ಲೆಂಟ್ ಕೊಡುವುದಿಲ್ಲ ಹೀಗೆ ಯಾರೂ ಕಂಪ್ಲೆಂಟ್ ಕೊಡದಿದ್ದರೆ ಅವನ ಮೇಲೆ ಹೇಗೆ ಕೇಸ್ ಹಾಕುವುದು ? ಹೀಗಾಗಿ ಇವತ್ತು ಆ ಕಾನೂನು ಹಾಗೆಯೆ ಮೂಲೆಯಲ್ಲಿ ಬಿದ್ದಿದೆ. ಆದುದರಿಂದ ಇದನ್ನೆಲ್ಲಾ ನಾವು ಕಾನೂನಿನಿಂದ ಬಗೆಹರಿಸುವುದಕ್ಕಾಗುವುದಿಲ್ಲ. ಇವತ್ತು ಡೌರಿ ಆ್ಯಕ್ಟ್ ಅಂತ ಮಾಡಿದ್ದೇವೆ, ಮಾಡಿಲ್ಲ ಅಂತ ಅಲ್ಲ, ಆದರೆ ಈ ವರದಕ್ಷಿಣೆಯ ಪಿಡುಗು ಏನಿದೆ ಇದು ಜಾಸ್ತಿಯಾಗಬೇಕಾಗಿದ್ದರೆ ಅದಕ್ಕೆ ಹೆಂಗಸರೇ ಜವಾಬ್ದಾರರು ಹೊರತು, ಗಂಡಸರು ಅಲ್ಲ. ಯಾವುದೇ ಕುಟುಂಬದಲ್ಲಿ ಯಾಗಲೀ ಅವರ ಪಕ್ಷದ ಮನೆಯ ಗೌರವ ತನ್ನ ಅಳಿಯನಿಗೆ ಒಳ್ಳೆಯ ಶೂಟ್ ಬೂಟ್ ವಾಚ್ ಕೊಡಿಸಿದಳು ಎಂದರೆ ಇವರು ಕೊಡಿಸಬೇಕೆಂದು ಗಂಡಸರ ಹತ್ತಿರ ಜಗಳ ತೆಗೆಯುವವರು ಈ ಹೆಂಗಸರೇ ಹೊರತು ಗಂಡಸರಲ್ಲ. ಗಂಡಸರು ಅದಷ್ಟು ಕಡಿಮೆ ವೆಚ್ಚದಲ್ಲಿ ಮದುವೆಯದರೆ ಸಾಕಪ್ಪ ಅಂತ ಇರುತ್ತಾರೆ, ಜಾಸ್ತಿ ಕೊಡಬೇಕು ಅಂತ ಅವರಿಗೇನೂ ಇರುವುದಿಲ್ಲ. ಏಕೆಂದರೆ ಸಂಪಾದನೆ ಮಾಡುವವರು ಅವರು, ಸ್ವಲ್ಪ ಕಡಿಮೆ ಖರ್ಚಿನಲ್ಲಿ ಆದರೆ ಸಾಕು ಎಂದು ಇರುತ್ತಾರೆ. ಒಂದು ಮನೆಯಲ್ಲಿ ಲಗ್ನ ಕಾರ್ಯವೆಂದರೆ ಆ ಮನೆ ದಿವಾಳಿಯಾಗಿರುತ್ತದೆ. ಎಷ್ಟು ಕೊಟ್ಟರೂ ಸಾಲದು, ಸೀರೆ, ಕಣ ಕೊಟ್ಟರೂ ಸಾಲದು, ವರೋಪಚಾರಕ್ಕೆ ಇಂಥದ್ದೇ ಆಗಬೇಕು, ಇಷ್ಟೇ ಆಗಬೇಕು ಎಂದೆಲ್ಲ ಅಭಿಪ್ರಾಯಗಳು ಇರುತ್ತವೆ. ಇದಕ್ಕೆಲ್ಲ ಮೂಲ ಕಾರಣ ಸ್ತ್ರೀ ಸಮಾಜ, ಇದು ಕುಮಾರಿ ಪ್ರಮಿಳ ಅವರಿಗೆ ಗೊತ್ತಿಲ್ಲ ಏಕೆಂದರೆ ಸಂಸಾರ ಮಾಡಿದ್ದರೆ ಗೊತ್ತಾಗುತ್ತಿತ್ತು. ಅವರು ಶೇಕಡ ೫೦ರಷ್ಟು ಮಂದಿ ಹೆಂಗಸರಿಗೆ ಕೆಲಸ ಕೊಡಿ ಎಂದರೆ ಉದಾಹರಣೆಗೆ, ನಾನು ನಮ್ಮ ಕ್ಷೇತ್ರದ ಒಂದು ಹುಡುಗಿಗೆ ಕೆಲಸ ಕೊಡಿಸುವ ಸಲುವಾಗಿ ಒಂದು ಬ್ಯಾಂಕಿನ ಅಧ್ಯಕ್ಷರಿಗೆ ಫೋನ್ ಮಾಡಿದೆ, ಆಗ ಅವರು ಹೇಳಿದರು. ಯಾರಾದರು ಹುಡುಗರು ಇದ್ದರೆ ಕಳುಹಿಸಿಕೊಡಿ, ಹೆಣ್ಣು ಮಕ್ಕಳು ಮಾತ್ರ ಬೇಡ ಏಕೆಂದರೆ ಅವರು ಬಂದು ೩ ತಿಂಗಳು ಕಳೆಯುವುದರೊಳಗೆ ಯಾರನ್ನೋ ಲಗ್ನ ಮಾಡಿಕೊಂಡು ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತಾರೆ ಎಂದರು. ಈಗ ದೋಷ ಎಲ್ಲಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅಮೇರಿಕ ಮುಂದುವರಿದ

ದೇಶ, ಅದನ್ನು ತಾವು ನೋಡಿದ್ದಿರಿ ಮತ್ತು ನಾನು ಕೂಡ ನೋಡಿದ್ದೇನೆ. ಅದು ನಮಗಿಂತಲೂ ಮುಂದುವರಿದ ದೇಶ, ಆದರೆ ಅಲ್ಲಿ ಎಷ್ಟು ಮಂದಿ ಹೆಣ್ಣುಮಕ್ಕಳು ಕೆಲಸದಲ್ಲಿದ್ದಾರೆ? ಡಾಕ್ಟರ್ಸ್ ಮತ್ತು ಲೆಕ್ಚರರ್ಸ್ ಬಿಟ್ಟರೆ ಇನ್ನು ಯಾವ ರಂಗದಲ್ಲಿ ಹೆಣ್ಣುಮಕ್ಕಳು ಇದ್ದಾರೆ ಎಂಬುದನ್ನು ತೋರಿಸಿ, ಇಲ್ಲ. ಏಕೆ ಇಲ್ಲ ಎಂದರೆ: ಶ್ರಮವಾದ ಕೆಲಸಗಳನ್ನು ಮಾಡುವುದಕ್ಕೆ ಅವರು ತಯಾರಿರುವುದಿಲ್ಲ, ಇದಕ್ಕೆ ದೇವರನ್ನು ಕೇಳಬೇಕು. ಕೆಲಸ ಮಾಡತಕ್ಕವರನ್ನು ಕೇಳಿದರೆ, ಹೆಣ್ಣುಮಕ್ಕಳು ಮನೆಯಲ್ಲಿ ಹಾಯಾಗಿರಬೇಕೆಂಬ ಭಾವನೆ ಇರುತ್ತದೆಯೇ ವಿನಹ ಬಿಸಿಲು, ಬೆಂಕಿಯಲ್ಲಿ ಕೆಲಸ ಮಾಡತಕ್ಕ ಪ್ರವೃತ್ತಿ ಅವರಿಗೆ ಇರುವುದಿಲ್ಲ. ಆ ಪ್ರವೃತ್ತಿ ಬೇಕೆಂದರೆ ದೇವರನ್ನು ಬೇಡಬೇಕು. ಇದು ಸರ್ಕಾರದಿಂದ ಶಾಸನದಿಂದ ಮಾಡತಕ್ಕ ಕೆಲಸ ಅಲ್ಲ ಎಂಬುದನ್ನು ಕು. ಪ್ರಮಿಳ ಅವರು ಅರ್ಥ ಮಾಡಿಕೊಳ್ಳಬೇಕು. ಇವತ್ತು ಏಳು ಮಕ್ಕಳನ್ನು ಹಡೆದಂತಹ ತಾಯಿಯ ಕೈಯಲ್ಲಿ ನಾವು ಈ ಇಲಾಖೆಯನ್ನು ಕೊಟ್ಟಿದ್ದೇವೆ. ಅವರಿಗೆ ಸಂಸಾರದ ಗುಟ್ಟು ಗೊತ್ತಿದೆ. ಮಕ್ಕಳ ಪಾಲನೆ—ಪೋಷಣೆಯ ವಿಧಾನ ಗೊತ್ತಿದೆ. ಹೀಗೆ ಎಲ್ಲ ರೀತಿಯ ಅನುಭವವನ್ನು ಹೊಂದಿರತಕ್ಕ ಮಹಿಳೆಯ ಕೈಯಲ್ಲಿ ಈ ಒಂದು ಇಲಾಖೆಯನ್ನು ಕೊಡಲಾಗಿದೆ, ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ ಇಲ್ಲಿರತಕ್ಕ ಸಮಸ್ಯೆ ಏನೆಂದರೆ, ಪಾಪ, ಅವರಿಗೆ ಸಾಕಷ್ಟು ಹಣ ಇಲ್ಲದೆ ಏನು ಮಾಡುತ್ತಾರೆ. ಮಹಿಳಾ ಮಂಡಲದ ಕಟ್ಟಡಕ್ಕಾಗಿ ಗ್ರ್ಯಾಂಟ್ ಕೊಡುವುದಕ್ಕೆ ಆಗಿಲ್ಲ. ಒಟ್ಟಿನಲ್ಲಿ ಎಲ್ಲದಕ್ಕೂ ದುಡ್ಡು ಬೇಕು. ಇವತ್ತಿನ ದಿವಸ ಕರ್ನಾಟಕ ರಾಜ್ಯದ ಯಾವುದೋ ಕೆಲವು ತಾಲ್ಲೂಕುಗಳಲ್ಲಿ ಇಂಥಿಂಥ ಕಾರ್ಯಕ್ರಮಗಳನ್ನು ಮಾಡುತ್ತೇವೆಂದು ನೋಟಿಫೈ ಮಾಡುವುದರಿಂದ ಏನೇನೂ ಪ್ರಯೋಜನ ವಾಗುವುದಿಲ್ಲ, ಮತ್ತು ಸಮಸ್ಯೆಗಳು ಬಗೆಹರಿಯುವುದಿಲ್ಲ. ಇವತ್ತು ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ದೇಶದ ಒಳಿತಿಗಾಗಿ ಆಗಬೇಕು. 'ನಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂದು ಮನು ಹೇಳಿದ,

ಶ್ರೀಮತಿ ಎಸ್. ಪ್ರಮಿಳ :—ಮನು ಯಾವ ಸಂದರ್ಭದಲ್ಲಿ, ಯಾವ ಕಂಟೆಕ್ಸ್ಟ್‌ನಲ್ಲಿ ಹೇಳಿದರು? ಅವರು ಏನು ಹೇಳಿದಾರೆಂಬುದು ನನಗೆ ಗೊತ್ತು. ಇದಕ್ಕೆಲ್ಲ ಮಾನ್ಯ ಅಧ್ಯಕ್ಷರು ಅವಕಾಶ ಕೊಡಬಾರದು.

ಅಧ್ಯಕ್ಷರು :— ಅವರೇನಾದರೂ ಉಪಯೋಗಿಸಬಾರದಂಥ ಪದಗಳನ್ನು ಉಪಯೋಗಿಸಿದ್ದರೆ, ಅದನ್ನು ಪರಿಶೀಲಿಸಿ ಅದು ಅನ್ ಪಾರ್ಲಿಮೆಂಟರಿ ಎಂದು ಕಂಡು ಬಂದರೆ ಅದನ್ನು ವರದಿಯಿಂದ ತೆಗೆಸುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರ ಶೇಖರ :— ಅವರು ತಪ್ಪು ತಿಳಿದುಕೊಂಡಿದ್ದಾರೆ. ನನ್ನನ್ನು ಅವರು ಯಾವತ್ತೂ ಸ್ತ್ರೀ ದ್ವೇಷಿ ಎಂದು ತಿಳಿದುಕೊಂಡಿದ್ದಾರೆ. ನನಗೆ ಸ್ತ್ರೀಯರ ಬಗ್ಗೆ ಬಹಳ ಗೌರವ, ಪ್ರೀತಿ, ವಿಶ್ವಾಸ ಇದೆಯೇ ವಿನಹ ನಾನು ಸ್ತ್ರೀ ದ್ವೇಷಿ ಅಲ್ಲವೇ ಅಲ್ಲ. ನಾನು ಪೂರ್ಣ ಹೇಳುವವರೆಗೆ ಸ್ವಲ್ಪ ಕೇಳಬೇಕು. 'ನಸ್ತ್ರೀ ಸ್ವಾತಂತ್ರ ಮರ್ಹತಿ' ಎಂದು ಮನು ಹೇಳುವವರೆಗೆ ಸ್ತ್ರೀಯರಿಗೆ ಎಲ್ಲ ರೀತಿಯ ಸಮಾನಾವಕಾಶ ಇತ್ತು, ಯಾವಾಗ ಮನು ಆ ಮಾತು ಹೇಳಿದನೋ ಆಗ ಐವತ್ತು ಪರ್ಸೆಂಟ್ ಜನಕ್ಕೆ ವಿದ್ಯೆ ಇಲ್ಲ, ಯಾವ ಅಧಿಕಾರ ಇಲ್ಲ ಎಂದು ಮಾಡಿ ಇಟ್ಟರು. ಇನ್ನುಳಿದ ಐವತ್ತು ಪರ್ಸೆಂಟ್ ಪುರುಷರನ್ನು ಜಾತಿಗಳ ಆಧಾರದ ಮೇಲೆ ಮೇಲು, ಕೀಳು ಎಂದು ಮಾಡಿ ಇಟ್ಟರು. ಆದ್ದರಿಂದ ಆ ಐವತ್ತು ಪರ್ಸೆಂಟ್ ಜನ ಏನಿದ್ದಾರೆ ಅವರ ಬಗ್ಗೆ ನಿಗ ಕೊಡತಕ್ಕದ್ದು ಜಾಸ್ತಿಯಾಗ ಬೇಕೆಂದು ಹೇಳಬಯಸುತ್ತೇನೆ ಯಾವ ಮನೆಯಲ್ಲಿ ವಿದ್ಯಾವಂತ ಮಹಿಳೆ ಇರುತ್ತಾರೋ ಆ ಮನೆಯಲ್ಲಿ ಮಕ್ಕಳು ಬೆಳೆಯುತಕ್ಕ ರೀತಿ—ನೀತಿಯೇ ಬೇರೆ, ಸರ್ವಾಂಗ ಸುಖಿಗಳಾಗಿ ಬೆಳೆಯುತ್ತವೆ. ಯಾವ ಮನೆಯಲ್ಲಿ ಅವಿದ್ಯಾವಂತ ಮಹಿಳೆ ಇರುತ್ತಾಳೋ ಅಲ್ಲಿರತಕ್ಕ ಮಕ್ಕಳಿಗೆ ಸರಿಯಾದ ಪಾಲನೆ ಪೋಷಣೆ ರಕ್ಷಣೆ ಸಿಗುವುದಿಲ್ಲ ಆದ್ದರಿಂದ ಇವತ್ತಿನ ದಿವಸ ಎಲ್ಲಾ ಮಹಿಳೆಯರಿಗೆ ವಿದ್ಯಾಭ್ಯಾಸ ನೀಡುವುದು ಬಹಳ ಅಗತ್ಯವಾಗಿದೆ ಎಂದು ಒತ್ತಿ ಹೇಳುತ್ತೇನೆ. ಇನ್ನು ಬಾಲವಾಡಿಗಳ ಬಗ್ಗೆ ಹೇಳುವುದಾದರೆ, ಅವು ಪ್ರತಿಯೊಂದು ಊರಿನಲ್ಲೂ ಪ್ರತಿಯೊಂದು ಹಳ್ಳಿಯಲ್ಲೂ ಆಗಬೇಕು, ಮತ್ತು ಅವು ಉತ್ತಮ ರೀತಿಯಲ್ಲಿ ನಡೆಯಬೇಕು. ಏತಕ್ಕೆಂದರೆ ಅದಕ್ಕೆ ಒಂದು ಕಥೆ ಬರುತ್ತದೆ. ಒಮ್ಮೆ ಎರಡು ಗಿಣಿಗಳು ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದವು. ನಂತರ ಒಂದನ್ನು ಒಬ್ಬ ಬೇಡನು ಮತ್ತೊಂದನ್ನು ಒಬ್ಬ ಋಷಿಯು ತೆಗೆದುಕೊಂಡು ಹೋಗಿ ಸಾಕಿದರು ಋಷಿ ಸಾಕಿದ ಗಿಳಿ ಯಾರೇ ಬರಲಿ ಬಾಯಾರಿಕೆಯಾಗಿದೆಯೇ, ಹಸಿವೆಯಾಗಿದೆಯೇ ಎಂದು ಕೇಳುತ್ತಿತ್ತು, ಆದರೆ ಬೇಡರವನು ಸಾಕಿದ ಗಿಳಿ ಯಾರೇ ಬರಲಿ ಹೊಡಿ—ಕಡಿ—ಬಡಿ ಎನ್ನುತ್ತಿತ್ತು. ಅಂದರೆ ಜನ್ಮದಿಂದ ಯಾವ

ಒಂದು ಸಂಸ್ಕಾರವೂ ಬರುವುದಿಲ್ಲ: ವಾತಾವರಣದಿಂದ ಬರುತ್ತದೆಂಬುದು ತಿಳಿಯುತ್ತದೆ. ಆದ್ದರಿಂದ ಒಳ್ಳೆಯ ವಾತಾವರಣವನ್ನು ಒಳ್ಳೆಯ ಅವಕಾಶವನ್ನು ಕಲ್ಪಿಸಿಕೊಟ್ಟರೆ ಇವತ್ತಿನ ದಿವಸ ನಮ್ಮ ಸಮಾಜದಲ್ಲಿರತಕ್ಕ ಎಲ್ಲ ವರ್ಗದ ಜನರೂ ಮೇಲೆ ಬರುವುದಕ್ಕೆ ಸಾಧ್ಯವಾಗುತ್ತದೆ ಆದ್ದರಿಂದ ಇವತ್ತು ನಮ್ಮ ಸಮಾಜದಲ್ಲಿ ಅತ್ಯಂತ ಕೆಳಗೆ ಇರತಕ್ಕವರನ್ನು ಮುಂದೆ ತರುವ ಸಲುವಾಗಿ ಹೆಚ್ಚೆಚ್ಚು ಬಾಲವಾಡಿಗಳನ್ನು ತೆರೆಯಬೇಕು ಮತ್ತು ಅಲ್ಲಿ ಬೆಳೆಯತಕ್ಕ ಮಕ್ಕಳ ಕಡೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ ಆ ಮಕ್ಕಳಿಗೆ ಒಳ್ಳೆಯ ವಾತಾವರಣವನ್ನು ಕಲ್ಪಿಸಿ ಒಳ್ಳೆಯ ಪಾಲನೆ ಪೋಷಣೆ ಮಾಡಿ ಪೌಷ್ಟಿಕ ಆಹಾರವನ್ನು ಒದಗಿಸಿಕೊಡಬೇಕು. ಬಾವಾಲಡಿಗಳಿಗೆ ಕೊಡತಕ್ಕ ಪೌಷ್ಟಿಕ ಆಹಾರವನ್ನು ಹಣದಾಸೆಗೋಸ್ಕರ ಕದ್ದು ಮಾರಾಟ ಮಾಡತಕ್ಕದ್ದನ್ನು ತಪ್ಪಿಸಬೇಕು. ಒಳ್ಳೊಳ್ಳೆಯ ಪದಾರ್ಥಗಳನ್ನೆಲ್ಲ ತಾವೇ ನುಂಗಿ ಹಾಕಿ, ಪಾಪ ಆ ಬಡ ಮಕ್ಕಳಿಗೆ ಹಳಸಿದ್ದು, ಉಳಿಸಿದ್ದು ಹಾಕುತ್ತಾರೆ. ಇದು ನಾನು ಕಣ್ಣಾರೆ ಕಂಡಿರತಕ್ಕದ್ದು ಅಂಥವರನ್ನು ನೇಣು ಹಾಕಿದರೂ ಏನು ದೋಷ ಬರುವುದಿಲ್ಲ. ಆ ಮಕ್ಕಳಿಗೆ ಮಾಡತಕ್ಕ ಸೇವೆ ಇಂಥ ದುರಾತ್ಮರಿಂದ ವಂಚಿತವಾಗುತ್ತಿದೆ ಎಂಬುದನ್ನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಇವತ್ತು ಸಿಂಪಲ್ ಪ್ರೋಗ್ರಾಂ ಹಾಕತಕ್ಕದ್ದು ಅಲ್ಲ, ಪ್ರತಿ ಊರಿನಲ್ಲೂ ಬಾಲವಾಡಿಗಳು ಇರಬೇಕು ಮತ್ತು ಸರಿಯಾದ ರೀತಿಯಲ್ಲಿ ಪ್ರಚಾರವಾಗಬೇಕು. ಇನ್ನು ಇವತ್ತು ಎಷ್ಟು ಮಹಿಳಾ ಮಂಡಲಿಯಲ್ಲಿ ಸಂಪೂರ್ಣ ಮಹಿಳೆಯರು ಸದಸ್ಯರಾಗಿದ್ದಾರೆ, ಮತ್ತು ಎಷ್ಟು ಬಾಲವಾಡಿಗಳಲ್ಲಿ ಸಂಪೂರ್ಣ ಮಕ್ಕಳು ಬರುತ್ತಿದ್ದಾರೆಂಬುದನ್ನು ನೋಡಬೇಕು. ಸಾಮಾನ್ಯವಾಗಿ ಬಾಲವಾಡಿಗಳಲ್ಲಿ ಮುಂದುವರಿದ ಜನಾಂಗದವರ ಮಕ್ಕಳು ಬರುತ್ತಿದ್ದಾರೆಯೇ ವಿನಹಃ ಹಿಂದುಳಿದವರ ಮಕ್ಕಳು ಬರುತ್ತಿಲ್ಲ. ಮಹಿಳಾ ಮಂಡಲಗಳು ಇದ್ದರೆ ವಿದ್ಯಾವಂತ ಮಹಿಳೆಯರು ಕುಳಿತುಕೊಂಡು ಹಾಡು ಕೇಳಿಕೊಂಡು ಹೋಗುತ್ತಾರೆಯೇ ಹೊರತು ಕೆಳವರ್ಗದ ಮಹಿಳೆಯರು ಅಲ್ಲಿಗೆ ಬರುವುದಿಲ್ಲ ಇಷ್ಟೆಲ್ಲ ಮಾಡಿದರೂ ಕೂಡ ಯಾವ ಸಾರ್ಥಕತೆಯೂ ಆಗುತ್ತಿಲ್ಲ ಎಂಬ ಮಾತನ್ನು ಹೇಳಬಯಸುತ್ತೇನೆ. ಆದ್ದರಿಂದ ಆ ಬಗ್ಗೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ಒಂದೇ ಅಲ್ಲ ಅವು ಕಾಲಕ್ಕೆ ಸರಿಯಾಗಿ ಯಾರಿಗೆ ತಲುಪಬೇಕೊ ಅವರಿಗೆ ತಲುಪತಕ್ಕ ವ್ಯವಸ್ಥೆ ಮಾಡಬೇಕು. ಯಾರು ಸಮಾಜದಲ್ಲಿ ವಂಚಿತರಾಗಿದ್ದಾರೋ ಅವರಿಗೆ ಸರಿಯಾಗಿ ನಿಮ್ಮ ಕಾರ್ಯಕ್ರಮಗಳು ತಲುಪದೇ ಹೋದರೆ ಇಷ್ಟೆಲ್ಲ ದುಡ್ಡು ಖರ್ಚು ಮಾಡಿದ್ದು ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ ಎಂದು ಹೇಳಬಯಸುತ್ತೇನೆ. ಇಂಟಿಗ್ರೇಟೆಡ್ ಪ್ರೊಗ್ರಾಂ ಕೇಂದ್ರ ಸರ್ಕಾರದು ಎಂದರೆ ಕರ್ನಾಟಕದು ಕೂಡ ಒಂದು ಕಾರ್ಯಕ್ರಮ ಇದೆ. ಅದಕ್ಕಾಗಿ ಕೆಲವೇ ತಾಲ್ಲೂಕುಗಳನ್ನು ಆಯ್ಕೆ ಮಾಡಿದ್ದೀರಿ. ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿಗೂ ಕೂಡ ಕೆಲವೇ ತಾಲ್ಲೂಕುಗಳನ್ನು ಆಯ್ಕೆ ಮಾಡಲಾಗಿದೆ. ಆ ರೀತಿ ಆಗಬಾರದು, ಅದು ಎಲ್ಲ ತಾಲ್ಲೂಕುಗಳಿಗೂ ತಲುಪುವಂತಾಗಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಮಾನ್ಯ ಕೆ. ಹೆಚ್. ಶ್ರೀನಿವಾಸ್ ಅವರು ಇವತ್ತು ಬಹಳ ಪ್ರಮುಖವಾದ ಖಾತೆಗೆ ಬಂದಿದ್ದಾರೆ, ಅದು ನೋಡಲಿಕ್ಕೆ ಏನು ಅಷ್ಟಾಗಿ ಪ್ರಮುಖವಾಗಿ ಕಾಣದಿದ್ದರೂ ಅದು ನಿಜವಾಗಿಯೂ ಪ್ರಮುಖವಾದ ಖಾತೆ. ಇನ್‌ಫಾರ್ಮೇಷನ್ ಇಲಾಖೆ ಏನಿದೆ ಅದರ ಪಾತ್ರ ಇವತ್ತಿನ ದಿವಸ ನೂರಕ್ಕೆ ಇಪತ್ತೈದರಷ್ಟು ಅಕ್ಷರಸ್ಥರು ಇಲ್ಲದಂತಹ ಈ ಸಮಾಜದಲ್ಲಿ ಬಹಳಷ್ಟು ಮುಖ್ಯವಾದುದು. ನಾವು ಇವತ್ತಿನ ದಿವಸ ಶಾಸನ ಸಭೆಯಲ್ಲಿ ಅನೇಕ ವಿಚಾರಗಳನ್ನು ಚರ್ಚೆ ಮಾಡುತ್ತೇವೆ, ಅನೇಕ ವಿಚಾರಗಳಲ್ಲಿ ಸರ್ಕಾರದ ಬಗ್ಗೆ ಟೀಕೆ ಮಾಡುತ್ತೇವೆ ಅಥವಾ ಸಲಹೆಗಳನ್ನು ಕೊಡುತ್ತೇವೆ. ಆ ಸಲಹೆಗಳಾಗಲೀ ಕಾರ್ಯಕ್ರಮಗಳಾಗಲೀ ನಮ್ಮ ಜನಕ್ಕೆ ತಲುಪುತ್ತವೆಯೇ ಎಂದರೆ ಇಲ್ಲ. ಇವತ್ತು ನಮ್ಮಲ್ಲಿ ನೂರಕ್ಕೆ ಮೂವತ್ತರಷ್ಟು ಜನ ಮಾತ್ರ ಅಕ್ಷರಸ್ಥರಿದ್ದಾರೆ ಅಂದರೆ, 'ಚಂದ್ರಶೇಖರ" ಎಂದು ರುಜುಮಾಡುವುದಕ್ಕೆ ಬಂದವರು ಅಕ್ಷರಸ್ಥರು ಇನ್ನು ಓದು ಬರಹ ಬಲ್ಲವರು ನೂರಕ್ಕೆ ೫—೧೦ ಮಂದಿ ಸಿಗಬಹುದು. ಆ ೧೦ ಪರ್ಸೆಂಟ್ ಜನರಲ್ಲಿ ನಿಜವಾಗಿಯೂ ಕೂಡ ಪತ್ರಿಕೆಗಳನ್ನು ಪ್ರತಿನಿತ್ಯ ಓದತಕ್ಕಂಥವರ ಸಂಖ್ಯೆ ಎಷ್ಟಿದೆ ಎಂಬುದನ್ನು ತಾವು ನೋಡುವುದಾದರೆ ಅದು ಕೇವಲ ೧-೨ ಪರ್ಸೆಂಟ್ ಮಾತ್ರ. ಈ ವಿಚಾರದಲ್ಲಿ ತಾವು ಡಾಕ್ಯುಮೆಂಟರಿ ಫಿಲಂನ್ನು ಎಷ್ಟು ಹೆಚ್ಚು ಮಾಡಿದರೂ ಸಾಲದು. ಏಕೆಂದರೆ ಜನಕ್ಕೆ ದಿನಪತ್ರಿಕೆಗಳನ್ನು ಓದತಕ್ಕಂಥ ಗೀಳು, ವ್ಯವಧಾನ ತಾಳ್ಮೆ ಯಾವುದೂ ಇಲ್ಲ. ಅವರಿಗೆ ಅದರಲ್ಲಿ ಆಸಕ್ತಿ ಹುಟ್ಟುವಂತೆ ಮಾಡಬೇಕಾದರೆ ತಮ್ಮ ಇನ್‌ಫರ್‌ಮೇಷನ್ ಇಲಾಖೆಯವರು ಡಾಕ್ಯುಮೆಂಟರಿ ಫಿಲಂನ್ನು ಏನು ತೆಗೆಯುತ್ತಿದ್ದಾರೆ ಅದನ್ನು ಆದಷ್ಟೂ ಹಳ್ಳಿಗಳಲ್ಲಿ ಬಿತ್ತರಿಸುವಂತೆ ಮಾಡಬೇಕು. ನಮ್ಮ ಶಾಸನಸಭೆಯಲ್ಲಿ ನಡೆಯತಕ್ಕಂಥ ಕಾರ್ಯಕ್ರಮಗಳನ್ನು ಕೂಡ ತಾವು ಹಳ್ಳಿಹಳ್ಳಿಗಳಲ್ಲಿ ಬಿತ್ತರಿಸತಕ್ಕಂಥ

ವ್ಯವಸ್ಥೆ ಮಾಡಬೇಕು. ತಾವು ಏತಕ್ಕಾಗಿ ಈ ಕಾರ್ಯವನ್ನು ಮಾಡಬೇಕಾಗಿದೆ ಎಂದರೆ ನಾವು ಇಲ್ಲಿ ಶಾಸಕರಾಗಿ ಏನು ಕೆಲಸಮಾಡುತ್ತಿದ್ದೇವೆ ಎನ್ನುವ ಅರಿವು ನಮಗೆ ಮತ ಕೊಟ್ಟಂಥ ದಣಿಗೆ ಇರುವುದಿಲ್ಲ. ನಾವು ಇಲ್ಲಿ ರಜಾ ಹಾಕಿ ಮನೆಗೆ ಹೋಗಿ ಮಲಗಿಕೊಂಡಿದ್ದರೂ ಅವರಿಗೆ ಅದು ಗೊತ್ತಾಗುವುದಿಲ್ಲ ನಾವು ಯಾವುದೋ ರೂಮಿನಲ್ಲಿ ಕುಳಿತು ಇಸ್ಪೀಟ್ ಆಟ ಆಡಿದರೂ ಅವರಿಗೆ ಗೊತ್ತಾಗುವುದಿಲ್ಲ. ಈ ಕಾರಣ ಕ್ಕಾಗಿ ತಾವು ಈ ಶಾಸನಸಭೆಯಲ್ಲಿ ನಡೆಯತಕ್ಕಂಥ ಕಾರ್ಯಕ್ರಮಗಳ ಬಗ್ಗೆ ಚಿತ್ರ ತೆಗೆದು ಅದನ್ನು ಹಳ್ಳಿ ಹಳ್ಳಿಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಬಿತ್ತರಿಸತಕ್ಕಂಥ ವ್ಯವಸ್ಥೆ ಮಾಡಬೇಕು. ಇದನ್ನು ತಾವು ಮಾಡ ಬೇಕಾಗಿರುವುದು ಬಂದು ನಮ್ಮ ಒಂದು ಪ್ರಚಾರಕ್ಕಾಗಿಅಲ್ಲ, ಆ ಜನಕ್ಕೆ ಈವಿಚಾರದಲ್ಲಿ ತಿಳಿವಳಿಕೆಯಾಗಬೇಕು; ಶಾಸನಸಭೆ ಎಂದರೆ ಏನು ? ಸರ್ಕಾರ ಎಂದರೆ ಏನು ? ಶಾಸಕರು ಏನು ಮಾಡುತ್ತಿದ್ದಾರೆ ಎಂಬ ವಿಚಾರ ಗಳನ್ನೆಲ್ಲಾ ಅರ್ಥ ಮಾಡಿಕೊಳ್ಳುವುದಕ್ಕೆ ಅವಕಾಶವಾಗಬೇಕೆಂಬುದೇ ನನ್ನ ವಾದ. ತಾವು ಕಂಪಲ್ಸರಿ ಯಾಗಿ ಈಗ ಸಿನಿಮಾ ಮಂದಿರಗಳಲ್ಲಿ ತಮ್ಮ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದೀರಿ. ಆ ಚಿತ್ರಗಳಲ್ಲಿ ಏನಿ ರುತ್ತದೆ ಎಂದರೆ ತಾವು ಯಾವುದೋ ಸಂದರ್ಭದಲ್ಲಿ ಇನಾಗ್ಯುರೇಷನ್ ಮಾಡಿರುವುದು, ಯಾವುದೋ ಸಮಾರಂಭದಲ್ಲಿ ಭಾಷಣ ಮಾಡುತ್ತಿರುವುದು, ಇದೆಲ್ಲಾ ಇರುತ್ತದೆ. ಇದು ಆಗಬಾರದು. ಈ ದೇಶ ದಲ್ಲಿ ಯಾರಿಗೆ ಓದುವುದಕ್ಕೆ ಹಾಗೂ ಬರೆಯುವುದಕ್ಕೆ ಶಕ್ತಿ ಇರುವುದಿಲ್ಲವೋ ಅಂತಹ ಜನರಿಗೆ ಏನೇನು ಪ್ರಪಂಚದ ವಿಚಾರಗಳನ್ನು ತಿಳಿದುಕೊಳ್ಳಬೇಕಾಗಿದೆಯೋ ಆ ಎಲ್ಲಾ ವಿಚಾರಗಳಲ್ಲಿ ತಾವು ಚಿತ್ರಗಳನ್ನು ತೆಗೆಯಬೇಕಾಗುತ್ತದೆ; ಆ ರೀತಿ ಚಿತ್ರಗಳನ್ನು ತೆಗೆದು ಎಲ್ಲಾ ಸಿನಿಮಾ ಮಂದಿರಗಳಲ್ಲಿ ಪ್ರದರ್ಶನಮಾಡಿದರೆ ಆ ಜನಕ್ಕೆ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ತುಂಬಾ ಸಹಾಯಕವಾಗುತ್ತದೆ. ತಾವು ಅದನ್ನೂ ಮಾಡಿ ನಾನು ಅದಕ್ಕೆ ಬೇಡ ಎಂದು ಹೇಳುವುದಿಲ್ಲ, ಮಾನ್ಯ ವಾರ್ತಾ ಮಂತ್ರಿಯವರು ಯಾವುದೋ ಸಮಾರಂಭ ದಲ್ಲಿ ಮಾತನಾಡಿದ್ದರೆ ಅವರ ಮುದ್ದು ಮುಖದ ಫೋಟೋ ಅದರಲ್ಲಿ ಬರಲಿ, ಅದರ ಜೊತೆಯಲ್ಲಿ ಇದೂ ಬರಲಿ ಎಂದು ಹೇಳುತ್ತೇನೆ. ಅಲ್ಲದೇ ಇವತ್ತು ವಾರ್ತಾ ಇಲಾಖೆಯವರು ತಿಂಗಳಿಗೊಮ್ಮೆ ಒಂದು ಪತ್ರಿಕೆಯನ್ನು ಹೊರಡಿಸುತ್ತಾರೆ. ಆ ಪತ್ರಿಕೆಯಲ್ಲಿ ಮಾನ್ಯಮಂತ್ರಿಯವರು ಇಂತಹ ಕಡೆ ಫೌಂಡೇಷನ್ ಸ್ಟೋನ್ ಹಾಕಿದರು, ಇಂತಹ ಕಡೆ ಸಮಾರಂಭದಲ್ಲಿ ಭಾಷಣ ಮಾಡಿದರು ಎನ್ನುತಕ್ಕಂಥ ವರದಿಯನ್ನು ಬಿಟ್ಟರೆ ಬೇರೆ ಇನ್ನು ಯಾವುದೇ ವಿಚಾರ ಅದರಲ್ಲಿ ಇರುವುದಿಲ್ಲ. ಈ ಪತ್ರಿಕೆ ಇಷ್ಟಕ್ಕೆ ಸಿಮೀತವಾಗಿ ಇರಬಾರದು ಎಂದು ಹೇಳುತ್ತೇನೆ. ಇದರ ಆದಷ್ಟು ತಾವು ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಬೇಕು. ಇವತ್ತು ಪತ್ರಿಕೆಗಳವರಿಗೆ ಅಡ್ವರ್‌ಟೈಸ್‌ಮೆಂಟ್ ಕೊಡತಕ್ಕಂಥ ನೀತಿಯಲ್ಲಿ ತಾವು ಯಾರು ಸರ್ಕಾರದ ಪ್ರಗತಿಪರ ಕಾರ್ಯಕ್ರಮಗಳನ್ನು ಬೆಂಬಲಿಸುತ್ತಾರೆಯೊ ಅಂತವರಿಗೆ ಕಡ್ಡಾಯವಾಗಿ ಕೊಡಿ ಎಂದು ಹೇಳುತ್ತೇನೆ; ಅಲ್ಲದೆ ಅವರಿಗೆ ಹೆಚ್ಚು ಗ್ರಾಂಟನ್ನು ಕೊಡಿ. ಆದರೆ ಸರ್ಕಾರದ ಪ್ರಗತಿಪರ ಕಾರ್ಯಕ್ರ ಮಗಳನ್ನು ಟೀಕೆ ಮಾಡತಕ್ಕಂಥ ಪತ್ರಿಕೆಗಳಿಗೆ ತಾವು ಏತಕ್ಕೆ ಅಡ್ವರ್‌ಟೈಸ್‌ಮೆಂಟ್ಸ್ ಕೊಡಬೇಕು ? ಮತ್ತು ಏತಕ್ಕೆ ಗ್ರಾಂಟನ್ನು ಕೊಡಬೇಕು ಎಂದು ಕೇಳುತ್ತೇನೆ. ಇವತ್ತು ಸರ್ಕಾರದ ಸಿಂಹಪಾಲು ಕಾರ್ಯಕ್ರಮಗಳನ್ನು ಟೀಕೆ ಮಾಡತಕ್ಕಂಥ ಪತ್ರಿಕೆಗಳಿಗೆ ತಮ್ಮ ಅಡ್ವರ್‌ಟೈಸ್‌ಮೆಟ್ಸ್‌ಗಳನ್ನು ಕೊಡುತ್ತಿ ದ್ದೀರೀ, ಇದು ಅನ್ಯಾಯ. ಇದು ಇನ್ನು ಮುಂದೆ ಆಗಬಾರದು. ಇದನ್ನು ಪುನರ್‌ಪರಿಶೀಲನೆ ಮಾಡ ಬೇಕು ಎಂದು ಹೇಳಬಯಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ :—ಕಾಂಗ್ರೆಸ್ ಪಕ್ಷಕ್ಕೆ ಸೇರಿದಂಥವರು ಯಾರು ಇದ್ದಾರೆ ಅವರಿಗೆ ಮಾತ್ರ ಕೊಡಬೇಕು ಎಂದು ಇದರ ಅರ್ಥವೇ ?

ಶ್ರೀ ಎಸ್. ಎಂ. ಶೀರ್‍ನಾಳಿ ಚಂದ್ರಶೇಖರ್ :—ತಾವು ಇದನ್ನು ಹೇಗೆ ಬೇಕಾದರೂ ತಿಳಿದು ಕೊಳ್ಳಿ.

ಅಧ್ಯಕ್ಷರು :—ಇದು ಜನರಲ್ ರೆಫೆರೆನ್ಸ್ ಆಗಿದೆ.

ಶ್ರೀ ಎಸ್.ಎಂ. ಶೀರ್‍ನಾಳಿ ಚಂದ್ರಶೇಖರ್ :—ಸ್ವಾಮಿ, ಇವತ್ತು ತಾವು ಕರ್ನಾಟಕ ರಾಜ್ಯದಲ್ಲಿ ಸಾಹಿತಿಗಳಿಗೆ, ಕಲಾಕಾರರಿಗೆ ಮಾಸಾಶನವನ್ನು ಕೊಡತಕ್ಕಂಥ ಪದ್ಧತಿಯನ್ನು ಜಾರಿಗೆ ಮಾಡಿದ್ದೀರಿ. ಇವತ್ತು ಕೆಲವರು ಸಮಾಜದಲ್ಲಿ ಉನ್ನತ ಮಟ್ಟದ ಜೀವನವನ್ನು ನಡೆಸಿ ಕೊನೇಗಾಲದಲ್ಲಿ ಬಹಳ ಕಷ್ಟದಲ್ಲಿರತಕ್ಕಂಥ ಸಾಹಿತಿಗಳನ್ನು, ಕಲಾಕಾರರನ್ನು ಗುರುತಿಸಿ ಅವರಿಗೆ ಮಾಸಾಶನವನ್ನು ಕೊಟ್ಟು ಅವರು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದಕ್ಕಾಗಿ ನಾನು ನನ್ನ ಅನಂತ ಧನ್ಯವಾದಗಳನ್ನರ್ಪಿಸುತ್ತೇನೆ. ಏಕೆಂದರೆ ಅವರು ವಿಧಾನಸೌಧದ ಮುಂದೇಯಾಗಲೀ, ಶಾಸಕರ

ಮನೆಬಾಗಿಲಿನಲ್ಲಾಗಲೀ ನಿಂತುಕೊಂಡು 'ಜೀಯಾ' ಎಂದು ಹೇಳತಕ್ಕಂಥ ರೀತಿಯಲ್ಲಿ ಇರುವುದಿಲ್ಲ ; ಸಮಾಜದಲ್ಲಿ ಉನ್ನತಮಟ್ಟದಲ್ಲಿ ಜೀವನವನ್ನು ನಡೆಸಿಕೊಂಡು ಬಂದಂಥ ಈ ಗಣ್ಯ ವ್ಯಕ್ತಿಗಳಿಗೆ ಅಪರ ಕೊನೆಗಾಲದಲ್ಲಿ ಯಾವುದೇ ದುಡಿಮೆ ಇರುವುದಿಲ್ಲ. ಅಂತಹವರಿಗೆ ಮಾಸಾಶನ ಕೊಡಬೇಕಾದ್ದು ನ್ಯಾಯ. ಅದನ್ನು ತಾವು ಕೊಟ್ಟಿದ್ದೀರಿ. ಅದಕ್ಕಾಗಿ ನನ್ನ ಧನ್ಯವಾದಗಳು. ಇದರ ಜೊತೆಗೆ ಒಂದು ಕೂಗು ಎದ್ದಿದೆ ಎಲ್ಲರಿಗೂ ಇದರಲ್ಲಿ ಸರಿಸಮಾನವಾದ ನ್ಯಾಯ ದೊರಕಿಲ್ಲ ಎನ್ನತಕ್ಕಂಥ ಅಪಾದನೆ ಬರುತ್ತಿದೆ ; ಇದನ್ನು ತಾವು ಪರಿಶೀಲನೆ ಮಾಡಬೇಕು. ಮತ್ತು ಕರ್ನಾಟಕ ರಾಜ್ಯದಲ್ಲಿ ಇನ್ನೂ ಅನೇಕ ಜನ ಸಾಹಿತಿಗಳು, ಕಲಾಕಾರರು ಇದ್ದಾರೆ, ಅವರೆಲ್ಲರನ್ನೂ ಗುರುತಿಸಿದ್ದರೂ ಕೂಡ ಕೆಲವರಿಗೆ ಮಾತ್ರ ಮಾಸಾಶನ ಸಂದಾಯವಾಗುತ್ತಿದೆ ಎನ್ನತಕ್ಕಂಥ ಅಪಾದನೆ ಕೂಡ ಬಂದಿದೆ. ಇನ್ನೊಂದು ಅಪಾದನೆ ಏನೆಂದರೆ ದಲಿತ ಸಾಹಿತಿಗಳು ಯಾರಿದ್ದಾರೆ ಅಂತಹವರನ್ನು ಗುರುತಿಸಿ ಪೆನ್‌ಷನ್ ಕೊಟ್ಟಿಲ್ಲ ಎನ್ನುತಕ್ಕಂತ ಅಪಾದನೆ ಬಂದಿದೆ. ಇದು ನಾನು ಪತ್ರಿಕೆಗಳಲ್ಲಿ ಓದಿರತಕ್ಕಂಥ ವಿಚಾರವಾಗಿದೆ. ಇದನ್ನು ಪುನರ್‌ಪರಿಶೀಲನೆ ಮಾಡಿ ಯಾರು ನಿಜವಾಗಿ ಕಷ್ಟದಲ್ಲಿದ್ದಾರೆ, ಯಾರು ಅರ್ಹರು ಇದ್ದಾರೆ ಅಂತಹವರಿಗೂ ಪೆನ್‌ಷನ್ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ರಾಜ್ಯದಲ್ಲಿ ಫಿಲಂ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಅದರಲ್ಲಿ ಯಾವರೀತಿಯಲ್ಲಿ ಕೆಲಸಕಾರ್ಯಗಳು ನಡೆಯಬೇಕಾಗಿತ್ತೋ ಆ ರೀತಿಯಲ್ಲಿ ನಡೆದಿಲ್ಲ. ಇದನ್ನು ತಾವು ಒಪ್ಪಿಕೊಳ್ಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಅದರಲ್ಲಿ ಹಾಕಿರತಕ್ಕಂಥ ಬಂಡವಾಳ ಎಷ್ಟು, ಎಷ್ಟು ಕೆಲಸ ನಡೆದಿದೆ, ಏನೇನು ಕಾರ್ಯಕ್ರಮಗಳು ಆಗಿವೆ, ಹಾಕಿದ ಬಂಡವಾಳಕ್ಕೆ ಸರಿಯಾದ ರೀತಿಯಲ್ಲಿ ಡಿವಿಡೆಂಡ್ ಬಂದಿದೆಯೋ ಇವೆಲ್ಲಾ ವಿಚಾರಗಳು ತಮಗೆ ಗೊತ್ತಿದೆ. ನಾನಾದರೂ ಹೇಳುವುದಿಷ್ಟೆ, ಇದಕ್ಕೆ ನವಚೇತನವನ್ನು ಕೊಡತಕ್ಕಂಥ ಕೆಲಸವನ್ನು ತಾವು ಮಾಡಬೇಕು. ಅದರಲ್ಲಿ ಅರಿತುನುರಿತವರನ್ನು ಹಾಕಬೇಕು. ಇವತ್ತು ಯಾರೋ ಒಬ್ಬ ಮಿಲಿಟರಿ ಅಧಿಕಾರಿಯನ್ನು ಅಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಹಾಕಿದ್ದೀರಿ. ಅವನಿಗೆ ಇದರ ವಿಚಾರಗಳೆಲ್ಲಾ ಏನು ಗೊತ್ತು ಎಂದು ಕೇಳುತ್ತೇನೆ. ಯಾರೇ ಆಗಲಿ ಯಾವುದೇ ಸಂಸ್ಥೆಯನ್ನು ನಡಸಬೇಕಾದರೂ ಕೂಡ ಅದರಲ್ಲಿ ಆತ ಅರಿತುನುರಿತವನಾಗಿರಬೇಕು. ಇಂತಹವರನ್ನು ಅಲ್ಲಿ ಹಾಕುವುದನ್ನು ಬಿಟ್ಟು, ರಿಟೈರ್ ಆದಂಥ ಅಧಿಕಾರಿಗಳನ್ನು ಮತ್ತು ಐ.ಎ ಎಸ್. ಅಧಿಕಾರಿಗಳನ್ನು ತಂದು ಅಲ್ಲಿ ಹಾಕಿಬಿಟ್ಟರೆ ಆ ಸಂಸ್ಥೆ ಯಾವರೀತಿ ಮುಂದುವರಿಯುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ನಮ್ಮಲ್ಲಿ ಐ.ಎ.ಎಸ್ ಅಧಿಕಾರಿಗಳು ಎಂದರೆ ಭೂಮಿಗೆ ಇಳಿದು ಬಂದ ಭಗವಂತ ಇದ್ದ ಹಾಗೆ ; ಎಲ್ಲವನ್ನೂ ಅರಿತುಕೊಂಡಿರುತ್ತಾರೆ ಎನ್ನುತಕ್ಕಂಥ ಭಾವನೆಯಿಂದ ಎಲ್ಲಾ ಸಂಸ್ಥೆಗಳಲ್ಲೂ ಅವರನ್ನೇ ಹಾಕತಕ್ಕಂಥ ಗೀಳು ಇದೆ. ಈ ಗೀಳು ಅದಷ್ಟು ಹೋಗಬೇಕು. ತಾವು ಯಾವುದೇ ಸಂಸ್ಥೆಗಳಿಗೆ ಅಧಿಕಾರಿಗಳನ್ನು ನೇಮಿಸಬೇಕಾದರೂ ಕೂಡ ಅದರಲ್ಲಿ ಸಂಪೂರ್ಣವಾಗಿ ಆಸಕ್ತಿ ಇರತಕ್ಕಂಥವರನ್ನು ಅರಿತುನುರಿತಿತಕ್ಕಂಥವರನ್ನು ಹಾಕಬೇಕು. ಈ ಸಿನಿಮಾರಂಗದಲ್ಲಿ ಕೂಡ ತಾವು ಅದರಲ್ಲಿ ಅರಿತುನುರಿತಿರತಕ್ಕಂಥವರನ್ನು ಹಾಕಬೇಕೆಂಬುದೇ ನನ್ನ ವಾದ. ಇನ್ನು ಸಿನಿಮಾಮಂದಿರಗಳಿಗೆ ಲೈಸೆನ್ಸ್ ಕೊಡತಕ್ಕಂಥ ವಿಚಾರದಲ್ಲಿ ಹಿಂದೆ ನಾವು ಒಂದು ಪ್ರಶ್ನೆಯನ್ನು ಹಾಕಿದಾಗ ಮಾನ್ಯ ಮಂತ್ರಿಯವರು ಸಿನಿಮಾಮಂದಿರಗಳಿಗೆ ಲೈಸನ್ಸ್ ಕೊಡಬೇಕಾದರೆ ಯಾರು ಕಡ್ಡಾಯವಾಗಿ ಕನ್ನಡ ಚಿತ್ರಗಳನ್ನು ಹಾಕಿಕೊಂಡು ಪ್ರದರ್ಶಿಸುತ್ತಾರೋ ಅಂತಹವರಿಗೆ ಲೈಸನ್ಸ್ ಕೊಡುತ್ತೇವೆ. ಎನ್ನತಕ್ಕಂಥ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದನ್ನು ಯಾವಾಗ ಜಾರಿಗೆ ತರುತ್ತಾರೆಂಬುದನ್ನು ಮಾನ್ಯ ಮಂತ್ರಿಯವರು ತಮ್ಮ ಉತ್ತರದಲ್ಲಿ ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ ನಮ್ಮ ರಾಜ್ಯ ೧೯೫೬ನೇ ಇಸವಿಯಿಂದ ಕರ್ನಾಟಕ ರಾಜ್ಯವೆಂದು ಅನ್ನಿಸಿಕೊಂಡರೂ ಕೂಡ ಅನೇಕ ನಗರಗಳಲ್ಲಿರತಕ್ಕಂಥ ಅನೇಕ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳನ್ನು ಹಾಕುವುದೇ ಕಷ್ಟ ಎನ್ನತಕ್ಕಂಥ ಪರಿಸ್ಥಿತಿ ಬಂದಿದೆ. ಕೆಂಪೇಗೌಡ ರೋಡ್‌ನಲ್ಲಿ ಇರತಕ್ಕಂಥ ಚಿತ್ರಮಂದಿರಗಳಲ್ಲಿ ಒಂದು ಕನ್ನಡ ಚಿತ್ರವನ್ನು ಹಾಕಬೇಕಾದರೆ ವಾರಗಟ್ಟಲೆ, ತಿಂಗಳುಗಟ್ಟಲೆ ಕಾಯಬೇಕಾಗುತ್ತದೆ. ಇಂತಹ ಒಂದು ಪರಿಸ್ಥಿತಿಯನ್ನು ತಾವು ಹೋಗಲಾಡಿಸಬೇಕು. ಇಲ್ಲದಿದ್ದರೆ ಇದರಿಂದ ನಾವು ನಾಚಿಕೆಪಟ್ಟುಕೊಳ್ಳಬೇಕಾಗುತ್ತದೆ. ನಮ್ಮ ನೆರೆಯ ರಾಜ್ಯವಾದ ತಮಿಳುನಾಡಿನಲ್ಲಿ ತಮಿಳು ಚಿತ್ರಗಳನ್ನಲ್ಲದೇ ಬೇರೆ ಚಿತ್ರಗಳನ್ನು ಹಾಕುವುದಕ್ಕೆ ಬಿಡುವುದಿಲ್ಲ. ಆ ರೀತಿಯಲ್ಲಿ ತಾವು ಮಾಡಬೇಕು ಎಂದು ನಾನು ಹೇಳುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ಹೆಚ್ಚಿನ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳಿಗೆ ಪ್ರಾಧ್ಯಾನತೆ ಕೊಟ್ಟು ಹೆಚ್ಚಿನ ರೀತಿಯಲ್ಲಿ ಪ್ರದರ್ಶಿಸುವಂತಾಗಬೇಕು. ಇವತ್ತು ತಾವು ಕನ್ನಡ ಚಿತ್ರಗಳಿಗೆ ಸಬ್ಸಿಡಿ ಕೊಡತಕ್ಕಂಥ ಪದ್ಧತಿಯನ್ನು ಇಟ್ಟುಕೊಂಡಿದ್ದೀರಿ. ಇದು ಬಹಳ ಶ್ಲಾಘನೀಯವಾದ ಪದ್ಧತಿ. ತಾವು ಕನ್ನಡ ಚಿತ್ರಗಳಿಗೆ ಮೂಲಧನವನ್ನು ಕೊಡುತ್ತಿರುವುದರಿಂದ ಕನ್ನಡಚಿತ್ರ

ಗಳು ಇವತ್ತು ನಾನಾ ಮಟ್ಟದಲ್ಲಿ ಅಭಿವೃದ್ಧಿಯನ್ನು ಹೊಂದಿವೆ. ಇದು ನಾವೆಲ್ಲರೂ ಒಪ್ಪಬೇಕಾದಂಥ ಮಾತು. ಆದರೆ ಇವತ್ತು ಅದರ ಜೊತೆಗೆ ಏನೂ ಕಿಮ್ಮತ್ತು ಇಲ್ಲದೆ, ಮಾನವೀಯ ಮೌಲ್ಯಗಳು ಇಲ್ಲದ ಚಿತ್ರಗಳು ಬಂದಿವೆ. ಆದಕ್ಕೆ ತಾವು ೫ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ ಎಂದು ಕಾಣು ತ್ತದೆ. ಅಂತಹ ಚಿತ್ರಗಳನ್ನು ೧೦ ನಿಮಿಷವಾದರೂ ಸಹನೆಯಿಂದ ಕುಳಿತು ನೋಡುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ನನ್ನ ಅಭಿಪ್ರಾಯವೇನೆಂದರೆ ಸಮಾಜದಲ್ಲಿರತಕ್ಕಂಥ ದೋಷಗಳನ್ನು ಎತ್ತಿ ಹಿಡಿದು ಆದಕ್ಕೆ ಪರಿಹಾರವನ್ನು ಕೊಡತಕ್ಕಂಥ ರೀತಿಯಲ್ಲಿ ಚಿತ್ರಗಳು ಇರಬೇಕು, ಮತ್ತು ಜನತೆಗೆ ಮನರಂಜನೆ ಯನ್ನು ಕೊಡತಕ್ಕಂಥ ರೀತಿಯ ಲ್ಲಿ ಇರಬೇಕು. ಬೆಳಿಗ್ಗೆಯಿಂದ ಸಂಜೆವರೆಗೆ ದುಡಿದು ಬಂದಂಥ ಬಡ ಜೀವಿಗೆ ಮನೋರಂಜನೆಯನ್ನು ಕೊಡುವ ರೀತಿಯಲ್ಲಿ ಇರಬೇಕು. ಇದನ್ನು ಮಾನ್ಯಸಚಿವರು ಗುರುತಿ ಸಬೇಕು. ಕರ್ನಾಟಕದಲ್ಲಿ ಹೊಸ ಅಲೆಯ ಚಿತ್ರಗಳನ್ನು ತೆಗೆಯುವ ನವ ಗುಂಪೊಂದು ಪ್ರಾರಂಭವಾಗಿದೆ. ಇದು ನಿಜವಾಗಲೂ ಶ್ಲಾಘನೀಯವಾದುದು. ಶ್ರೀ ಗಿರೀಶ್ ಕಾರ್ನಾಡ್ ಹಾಗೂ ಶ್ರೀ ಬಿ.ವಿ. ಕಾರಂತ ಮುಂತಾದವರು ಕನ್ನಡ ಚಿತ್ರ ರಂಗದಲಿ ಶ್ಲಾಘನೀಯವಾದ ಪ್ರಯೋಗಗಳನ್ನು ನಡೆಸಿದ್ದಾರೆ. ಇಂತಹ ಚಿತ್ರಗಳಿಗೂ ಮತ್ತು ಬಾಕಿ ಚಿತ್ರಗಳಿಗೂ ಒಂದೇ ರೀತಿಯ ತಕ್ಕಡಿಯನ್ನು ಸರ್ಕಾರ ಹಿಡಿಯಬಾರದು. ಹೊಸ ಅಲೆಯ ಗುಂಪಿನವರು ಕೈಸುಟ್ಟುಕೊಳ್ಳುವುದಕ್ಕೆ ತಯಾರಾಗಿದ್ದೂ ಚಿತ್ರಗಳನ್ನು ತೆಗೆಯುತ್ತಾರೆ. ಮನರಂಜನೆ ಕೊಡುವುದು ಅವರ ಮುಖ್ಯವಾದ ಉದ್ದೇಶವಲ್ಲ. ಸಮಾಜದಲ್ಲಿರುವ ಉಲ್ಬಣ ಸಮಸ್ಯೆ ಯನ್ನು ಚಿತ್ರಿಸಿ, ಸಮಾಜವನ್ನು ಸುಧಾರಿಸುವ ಕ್ರಾಂತಿಕಾರಿ ನಡೆಯಲ್ಲಿ ಅವರು ಹೋಗುತ್ತಿರು ವರು. ಗಲ್ಲಾಪೆಟ್ಟಿಗೆಯ ದೃಷ್ಟಿ ಅವರಿಗಿರುವುದಿಲ್ಲ, ಇಂತಹವರಿಗೆ ಕರ್ನಾಟಕ ಸರ್ಕಾರ ನೆರವಿಗೆ ಬರದೆ ಹೋದರೆ ಅವರು ಮನೆ ಮಠ ಮಾರಿಕೊಂಡು, ಚಲನಚಿತ್ರಗಳನ್ನು ತೆಗೆಯುವುದೆಂದರೆ ಭಯ ಪಡುವ ಪರಿಸ್ಥಿತಿಗೆ ಬರಬಹುದು. ಕರ್ನಾಟಕ ಚಲನಚಿತ್ರ ರಂಗದಲ್ಲಿ ಈ ಹೊಸ ಅಲೆಯ ಚೇತನ ವಿರಬೇಕೆಂದು ಸರ್ಕಾರದ ಉದ್ದೇಶವಿರುವುದಾದರೆ, ಅವರಿಗೆ ಹೆಚ್ಚಿನ ನಿಧಿಯ ನೆರವನ್ನು ನೀಡಬೇಕೆಂದು ಹೇಳುತ್ತೇನೆ. ಘಟಶ್ರಾದ್ಧ-ದಂತಹ ಚಿತ್ರಗಳ ಎಷ್ಟು ನೋಡಲಿಕ್ಕೆ ಸಿಗುತ್ತವೆ ? ಅದೊಂದು ಕ್ರಾಂತಿ ಕಾರಿ ಚಿತ್ರ. ಅದನ್ನು ಟೀಕೆ ಮಾಡುವ ಸಂಪ್ರದಾಯವಾದಿಗಳೂ ಇದ್ದಾರೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡಬಯಸುವುದಿಲ್ಲ. ಆದರೆ, ಅದು ಸಮಾಜದಲ್ಲಿ ಕೊಳೆತು ನಾರುತ್ತಿರುವ ಸಮಸ್ಯೆಯನ್ನು ಎತ್ತಿ ತೋರಿಸಿದ ಚಿತ್ರ. ಇಂತಹ ಚಿತ್ರಗಳನ್ನು ದುಡಿಮೆ ದೃಷ್ಟಿಯಿಂದ ತಯಾರಿಸಿದರೆ ಹೆಚ್ಚು ಹಣ ಬರುವುದಿಲ್ಲ. ಅಲ್ಲದೆ ಇಂತಹ ಚಿತ್ರಗಳಿಗೆ ಹೋಗುವ ಜನರ ಸಂಖ್ಯೆಯೂ ಕಡಿಮೆ ; ವಿಚಾರವಂತರು ಮಾತ್ರತರರು ಹೋಗು ನೋಡುತ್ತಾರೆ, ಅಷ್ಟೆ, ಆದುದರಿಂದ, ಸರ್ಕಾರದವರು ಇಂತಹ ಚಿತ್ರಗಳಿಗೆ ಹೆಚ್ಚಿನರೀತಿಯ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

೫-೩೦ ಪಿ. ಎಂ.

ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣವನ್ನು ನಿರ್ಮಿಸುವ ಸಲುವಾಗಿ ಸುಮಾರು ಎರಡು ಲಕ್ಷದ ಏಳು ಸಾವಿರ ರೂಪಾಯಿಗಳ ಅಂದಾಜನ್ನು ಸರ್ಕಾರದವರು ಮಾಡಿ, ಆದರಲ್ಲಿ ಸರ್ಕಾರ ಕೇವಲ ಇಪ್ಪ ತ್ತೈದು ಸಾವಿರ ರೂಪಾಯಿಗಳನ್ನು ಮಾತ್ರ ನೀಡಲಾಗುವುದೆಂದು ಮಾಡಲಾಗಿದೆ. ಇದೇನು ಸರ್ಕಾರಕ್ಕೆ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣವನ್ನು ನಿರ್ಮಿಸುವ ಉದ್ದೇಶವಿದೆಯೋ ಅಥವಾ ಇಲ್ಲವೋ ? ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆ ಎನ್ನುವಂತೆ ಸರ್ಕಾರ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಟ್ಟುಬಿಟ್ಟರೆ ಇನ್ನು ಉಳಿದ ಹಣವನ್ನು ಯಾರಪ್ಪ ಕೊಡುತ್ತಾನೆ ? ಅಷ್ಟು ಹಣವನ್ನು ಎಲ್ಲಿಂದ ತರುವುದು ? ನಾವೇನನ್ನೂ ಕೊಡುವುದಿಲ್ಲವೆಂದು ಸರ್ಕಾರದವರು ಹೇಳಿಬಿಟ್ಟರೆ, ನಾವು ಎಲ್ಲಿಂದಾದರೂ ತರಬಹುದು ಆದುದರಿಂದ, ಸರ್ಕಾರದ ಮಂತಿಗೆಯನ್ನು ಹೆಚ್ಚಿಗೆ ಮಾಡದೆ ಹೋದರೆ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡೆಗೆ ಪ್ರೋತ್ಸಾಹ ಕೊಡಬೇಕೆನ್ನುವ ದೃಷ್ಟಿಯಿಂದ ಕ್ರೀಡಾಂಗಣವನ್ನು ನಿರ್ಮಿಸುತ್ತಿ ರುವ ಉದ್ದೇಶ ಈಡೇರುವುದಿಲ್ಲ ; ಅದು ಕೇವಲ ಭ್ರಮೆಯಾಗುತ್ತದೆ.

ಇನ್ನು, ಮಾನ್ಯ ಸಚಿವರು ಪ್ರವಾಸ ಹೋದೆಡೆಗಳಲ್ಲೆಲ್ಲ ಯುವಕ ಮಂಡಲಗಳ ಸ್ಥಾಪನೆಗೆ ಮಂಜೂರಾತಿಯನ್ನು ಕುಳಿತಲ್ಲೇ ಮಾಡಿದ್ದಾರೆ. ಆದರೆ, ಅವುಗಳು ಕಾರ್ಯಗತ ವಾಗಿರುವುದನ್ನು ನಾನು ಒಂದು ಕಡೆಯೂ ನೋಡಿಲ್ಲ. ಮಂತ್ರಿಗಳು ಮಾಡುವ ಆಜ್ಞೆಯನ್ನು ಅಧಿಕಾರಿಗಳು ಪಾಲಿಸಲಿ ಲ್ಲವೆಂದರೆ ಸರ್ಕಾರಕ್ಕೆ ಬೆಲೆ ಇದೆಯೇ ಅಥವಾ ಇಲ್ಲವೇ ? ''ಈ ಯುವಕ ಮಂಡಲಿಗೆ ಐದು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದೇನೆ'' ಎಂದು ಮಂತ್ರಿಗಳು ಬರೆದಿರುತ್ತಾರೆ. ಆದರೆ, ಅದು

ಎಲ್ಲಿಗೆ ಹೋಗಿ ಕುಳಿತಿವೇ ? ಮಂತ್ರಿಗಳು ಮಾಡಿದ ಆಜ್ಞೆಗಳಿಗೆ ಬೆಲೆ ಇಲ್ಲವೆಂದರೆ, ನಾವು ಇಲ್ಲಿ ಶಾಸಕರಾಗಿರುವುದೂ ದಂಡವೆಂದು ಕಾಣುತ್ತದೆ. ಆದುದರಿಂದ, ಮಾನ್ಯ ಸಚಿವರು ಇದರ ಕಡೆಗೆ ಹೆಚ್ಚಿನ ಲಕ್ಷ್ಯ ಕೊಡಬೇಕೆಂದು ಹೇಳಿ, ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಅನಸೂಯ ಗಜಾನನ ಶರ್ಮ (ಅಂಕೋಲಾ) :—ಮಾನ್ಯ ಅಧ್ಯಕ್ಷರೇ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಾರ್ಷಿಕ ವರದಿಯನ್ನಿಲ್ಲಿ ಇಡಲಾಗಿದೆ. ಈ ವರದಿಯಲ್ಲಿರುವ ಪ್ರಮುಖ ಶಿರೋನಾಮೆಗಳ ಕೆಳಗಡೆ ಹಣ ಖರ್ಚು ಮಾಡಿರುವುದು ಕಾಣುತ್ತಿದೆ. ಆದರೆ, ಇಷ್ಟು ಖರ್ಚು ಮಾಡಿರುವುದರಿಂದ ಏನು ಸಾಧನೆಯಾಗಿದೆ ಎನ್ನುವುದನ್ನು ನೋಡಿದಾಗ, ಇಲಾಖೆಯಲ್ಲಿ ಹೆಚ್ಚಿನ ದಕ್ಷತೆಯಲ್ಲಿ ಕೆಲಸ ನಡೆದಿದೆ ಎಂದು ನನಗನ್ನಿಸುವುದಿಲ್ಲ. ಮಕ್ಕಳ ಅಭಿವೃದ್ಧಿಗಾಗಿ ಅಂತರರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಹೆಚ್ಚು ಹಣ ಒದಗಿಸಬೇಕಾಗಿತ್ತು ; ಈಗ ಕೊಟ್ಟಿರುವ ಹಣ ಕಡಿಮೆ. ಆದರೆ, ಆ ಹಣಎಷ್ಟರಮಟ್ಟಿಗೆ ಸದ್ವಿನಿಯೋಗವಾಗುತ್ತಿದೆ ಎನ್ನುವುದನ್ನು ನಾವು ಮೊಟ್ಟಮೊದಲನೆಯದಾಗಿ ನೋಡಬೇಕಾಗಿದೆ. ಅಂತರರಾಷ್ಟ್ರೀಯ ಮಹಿಳಾ ವರ್ಷದಲ್ಲಿ ಹೆಣ್ಣು ಮಕ್ಕಳ ಸುಧಾರಣೆ ಬಗ್ಗೆ ಬಹಳ ಜನ ಬಹಳಷ್ಟು ಭಾಷಣ ಮಾಡಿದರು. ಆದರೆ, ಸುಧಾರಣೆಯಾದದ್ದೇನು ? ನಮ್ಮ ಶಾಸನ ಸಭಾ ದೃಷ್ಟಿಯಿಂದ ನೋಡುವುದಾದರೆ, ಹಿಂದಿನ ಸಲ ಈ ಸಭೆಯ ಅಧ್ಯಕ್ಷರಾಗಿ ಒಬ್ಬ ಮಹಿಳೆ ಇದ್ದರು, ಈ ರಾಜ್ಯದ ಕ್ಯಾಬಿನೆಟ್ ಸಚಿವರು ಹಾಗೂ ರಾಜ್ಯ ಸಚಿವರೊಬ್ಬರು ಮಹಿಳೆಯರಿದ್ದರು. ಆದರೆ, ಈ ಸಲ ಒಬ್ಬ ಮಹಿಳೆಯನ್ನು ಈ ಸಭೆಯ ಉಪಾಧ್ಯಕ್ಷರನ್ನಾಗಿ ಮಾಡಲಾಗಿದೆ ಮತ್ತು ಒಬ್ಬರೇ ಒಬ್ಬರು ರಾಜ್ಯ ಸಚಿವರು ಮಾತ್ರ ಮಹಿಳೆಯರಾಗಿದ್ದಾರೆ. ಇದನ್ನೆಲ್ಲ ನೋಡಿದ ಮೇಲೆ, ಮಹಿಳಾ ವರ್ಷವಾದ ಮೇಲೆ ಮಹಿಳೆಯರು ಸಾಧ್ಯವಾದಷ್ಟು ಹಿಂದೆ ಹಿಂದೆ ಹೋಗುತ್ತಿದ್ದಾರೆ, ತಮ್ಮ ಪ್ರಾತಿನಿಧಿಕ ಸ್ಥಾನಗಳನ್ನು ಕಳೆದುಕೊಳ್ಳುತ್ತಿದ್ದಾರೆ, ಎನ್ನಿಸುತ್ತದೆ. ಇದು ಒಂದು ರೀತಿ. ಎರಡನೆಯದು : ಮಹಿಳಾ ಮತ್ತು ಶಿಶುಕಲ್ಯಾಣ ಸಚಿವರ ಕಛೇರಿಯಲ್ಲಿ ಮೇಲಿನ ಹುದ್ದೆಯಲ್ಲಿರುವವರು ಹೆಚ್ಚು ಮಂದಿ ಪುರುಷರು. ಮಹಿಳೆಯರ ಉದ್ಧಾರವಾಗದೆ ಇರುವುದಕ್ಕೆ ಇದೂ ಒಂದು ಕಾರಣ. ಮಹಿಳಾ ಮತ್ತು ಶಿಶುಕಲ್ಯಾಣ ಸಚಿವರ ಕಛೇರಿಯಲ್ಲಿ ಮುಖ್ಯ ಹುದ್ದೆಯಲ್ಲಿರುವುದಕ್ಕೆ ಯೋಗ್ಯ ಹೆಣ್ಣು ಮಕ್ಕಳು ನಮ್ಮ ರಾಜ್ಯದಲ್ಲಿಲ್ಲವೆ ? ಪುರುಷರು ಎಷ್ಟರಮಟ್ಟಿಗೆ ಮಹಿಳೆಯರ ಉದ್ಧಾರ ಮಾಡುತ್ತಾರೆನ್ನುವುದನ್ನು ನಾವು ವಿಚಾರ ಮಾಡಬೇಕಾಗಿದೆ ಈ ಇಲಾಖೆಯ ಸರಹದ್ದಿನಲ್ಲಿರುವ ಅಲ್ಪಸಂಖ್ಯಾತ ಮಹಿಳೆಯರ ಉದ್ಧಾರಕ್ಕಾಗಿ ಈ ಸರ್ಕಾರ ಏನು ಮಾಡಿದೆ ? ಅವರ ಉದ್ಧಾರಕ್ಕಾಗಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎಂದು ಕೇಳಬಯಸುತ್ತೇನೆ. ಕಳೆದ ವರ್ಷ ಇದೇ ಇಲಾಖೆಯ ಮೇಲೆ ಮಾತನಾಡುತ್ತಾ, ನಮ್ಮ ಬಳಗದ ಶಾರದ ಎನ್ನುವ ಹುಡುಗಿ ಮೈಸೂರಿನ ರೆಸ್ಕ್ಯೂ ಹೋಂನಿಂದ ನಾಪತ್ತೆಯಾಗಿದ್ದಳೆಂದು ಹೇಳಿದ್ದೆ. ಮತ್ತು ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳೂ ಸಹ ಉತ್ತರ ನೀಡಿದ್ದರು ಅವಳು ಎಲ್ಲಿದ್ದರೂ ಹುಡುಕಿ ತರಿಸಲಾಗುವುದೆಂದೂ ಸಹ ಹೇಳಿದ್ದರು. ಆದರೆ, ಅವಳಿನ್ನೂ ಪತ್ತೆಯಾಗಿರುವುದು ನನಗೆ ಗೊತ್ತಿಲ್ಲ. ಇದನ್ನೆಲ್ಲ ನೋಡಿದಾಗ, ನಮ್ಮ ರಾಜ್ಯದಲ್ಲಿ ಮಹಿಳಾ ಮತ್ತು ಶಿಶುಕಲ್ಯಾಣ ವೆನ್ನುವ ಖಾತೆ ಇದೆಯೋ ಅಥವಾ ಇಲ್ಲವೇ ಎನ್ನುವ ಅನುಮಾನ ಬರುತ್ತದೆ. ಒಂದು ವೇಳೆ ಅದು ಅಸ್ತಿತ್ವದಲ್ಲಿದ್ದಿದ್ದೇ ಆದರೆ ಮಹಿಳೆಯರ ಸ್ಥಾನಮಾನಗಳು ಹಿಂದೆ ಹಿಂದೆ ಸರಿಯಲಿಕ್ಕೆ ಕಾರಣವೇನೆಂದು ತಿಳಿಯದಾಗಿದೆ. ಕೆಲವು ಕಾಲದ ಹಿಂದೆ ಮಹಿಳೆಯರ ಪುನರುಜ್ಜೀವನ ಚಳವಳಿ ನಡೆಯಿತು. ಅಂದಿನಿಂದ ಮಹಿಳೆಯರು ಜಾಗೃತವಂತರಾಗಬೇಕೆನ್ನುವ ದೃಷ್ಟಿಯಿಂದ ಕೆಲವಾರು ಕಾರ್ಯಕ್ರಮಗಳನ್ನು ಸರ್ಕಾರ ಮತ್ತು ಕೆಲವು ಹಿರಿಯರು ರೂಪಿಸಿದ್ದುಂಟು. ಆದರೆ, ಆ ಕಾರ್ಯಕ್ರಮಗಳ ಫಲ ಹೆಣ್ಣು ಮಕ್ಕಳಿಗೆ ಯಾವ ರೀತಿ ಮುಟ್ಟಬೇಕಾಗಿತ್ತೋ ಆ ರೀತಿ ಮುಟ್ಟುತ್ತಿಲ್ಲ. ಈ ದಿಸೆಯಲ್ಲಿ ನಮ್ಮ ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆಯವರು ವಿಚಾರ ಮಾಡಿರುವರೆ ಎಂದು ಕೇಳಬಯಸುತ್ತೇನೆ. ಹೆಚ್ಚು ಕಾರ್ಯಕ್ರಮ ಗಳಿದ್ದರೂ, ಅವು ಕತ್ತೆಯ ಬೆನ್ನ ಮೇಲಿನ ಕಸ್ತೂರಿ ಯಂತಾಗಿಬಿಟ್ಟರೆ ಏನು ಪ್ರಯೋಜನ ? ಮೊಟ್ಟಮೊದಲನೆಯದಾಗಿ ಹೆಣ್ಣು ಮಕ್ಕಳಲ್ಲಿ ಸ್ವತಂತ್ರವಾಗಿ ವಿಚಾರ ಮಾಡುವ ಪ್ರವೃತ್ತಿ ಇಲ್ಲವೇ ಇಲ್ಲ. ನಾನು ಈ ಸದನದ ಮುಖಾಂತರ ಕರ್ನಾಟಕ ರಾಜ್ಯದ ಸಕಲ ಮಹಿಳೆಯರಲ್ಲೂ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಹೆಣ್ಣು ಮಗು ಹುಟ್ಟಿದ ಕೂಡಲೆ ಅದೊಂದು ತುಚ್ಛ ಮಗುವೆಂದು ಭಾವಿಸಿ ಅದನ್ನು ಅಕ್ಕರೆಯಿಂದ ಸಾಕುವುದನ್ನು ಕೈಬಿಡಬಾರದು. ಮೂರು ವರ್ಷದ ಬುದ್ಧಿ

ಸೂರು ವರ್ಷದವರೆಗೆ ಎನ್ನುವಂತೆ ನಮ್ಮ ಸಮಾಜದಲ್ಲಿ ಪುರುಷರಷ್ಟೇ ಜವಾಬ್ದಾರಿ ಮತ್ತು ಸ್ಥಾನ ಮಾನಗಳು ಮಹಿಳೆಯರಿಗೂ ಇದೆ ಎನ್ನುವ ವಿಚಾರವಂತಿಕೆಯನ್ನು ಅವರಲ್ಲಿ ಬೆಳಸಬೇಕೆಂದು ಹೇಳುತ್ತೇನೆ

(ಚೇರ್ಮನ್ (ಶ್ರೀ ಎಂ. ಸಿ. ಬಸಪ್ಪನವರು) ಅಧ್ಯಕ್ಷ ಪೀಠದಲ್ಲಿದ್ದರು)

ಇನ್ನು ಮಹಿಳಾ ಕಲ್ಯಾಣ ಶಾಖೆಯವರು ಹೆಣ್ಣುಮಕ್ಕಳ ಅಭಿವೃದ್ಧಿಗಾಗಿ ಉತ್ತಮವಾದ ಕಾರ್ಯಕ್ರಮಗಳನ್ನು ಮೊಟ್ಟಮೊದನೆಯದಾಗಿ ಮಾಡಬೇಕೇದು ಹೇಳಂತ್ತೇನೆ. ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ ಖರ್ಚುಮಾಡತಕ್ಕಂಥ ಹಣ ಸದುಪಯೋಗ ವಾಗಬೇಕೆಂದು ಮನಮುಟ್ಟಿ ಒತ್ತಿ ಒತ್ತಿ ಹೇಳುತ್ತೇನೆ. ಹೆಣ್ಣು ಮಕ್ಕಳುಗಳಲ್ಲಿ ನಾವು ಗುಲಾಮರು ಎನ್ನುವ ಭಾವನೆ ಹೋಗುವಂತ ವಿಚಾರಗಳನ್ನು ಬಿತ್ತರಿಸುವಂತ ಹಾಗೂ ಹೆಣ್ಣು ಮಕ್ಕಳಿಗೆ ತಿಳಿಸುವಂತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ, ಮುಂದುವರಿದಂಥ ಹೆಣ್ಣು ಮಕ್ಕಳು ಸುಧಾರಿಸಿದ್ದಾರೆ ; ಆದರೆ, ಹೆಚ್ಚಿನ ಪ್ರಮಾಣದ ಹೆಣ್ಣು ಮಕ್ಕಳು ನಾವು ಗಂಡಸರ ಗುಲಾಮರು ; ಹಾಗೂ ಪರಾವಲಂಬಿಗಳು ಎನ್ನುವ ಭಾವನೆ ಇದೆ. ಮೊಟ್ಟಮೊದಲನೆಯದಾಗಿ ಹೆಣ್ಣು ಮಕ್ಕಳಲ್ಲಿರತಕ್ಕ ವಿಚಾರಸರಣಿ ಬದಲಾವಣೆಯಾಗಬೇಕೆಂದು ಹೇಳುತ್ತೇನೆ. ಸಿನಿಮಾಗಳ ಮೂಲಕ,, ಟೆಲಿವಿಷನ್, ರೇಡಿಯೋಗಳ ಮೂಲಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೆಣ್ಣು ಮಕ್ಕಳ ಬಗ್ಗೆ ವಿಚಾರ ಮಾಡುವಂಥ ಪದ್ಧತಿಯನ್ನು ಜಾರಿಗೆತರುವುದು ಅಗತ್ಯವೆಂದು ಹೇಳುತ್ತೇನೆ. ಹೆಣ್ಣುಮಕ್ಕಳು ಕೂಡ ನಮಗೂ ಜವಾಬ್ದಾರಿ ಇದೆ, ನಮ್ಮ ಪಾಲಿನ ಕರ್ತವ್ಯವನ್ನು ಸಮಾಜದಉನ್ನತಿಗಾಗಿ ಮಾಡಬೇಕೆಂಬ ಮನೋಭಾವ ಅವರಲ್ಲಿ ಮೂಡುವಂತಾಗಬೇಕು ; ಸಮಾಜದ ಒಳಿತಿಗಾಗಿ ಪುರುಷರು ಒಬ್ಬರೇ ದುಡಿದರೆ ಆಗುವುದಿಲ್ಲ. ಪುರುಷರು ಮತ್ತು ಮಹಿಳೆಯರು ಆದಿಯಾಗಿ ದುಡಿದರೆ ಸಮಾಜ ಆ ಮೂಲಕ ದೇಶಉದ್ಧಾರವಾಗಲಿಕ್ಕೆ ಸಾಧ್ಯವಿದೆ.

ಹೆಣ್ಣುಮಕ್ಕಳು ಸಮಾಜದಲ್ಲಿ ಹಿಂದೆ ಉಳಿಯಲಿಕ್ಕೆ ಮುಖ್ಯ ಕಾರಣವೇನೆಂದರೆ, ನನಗೆ ತಿಳಿದ ಮಟ್ಟಿಗೆ ವಿದ್ಯೆ ಇಲ್ಲದಿರುವುದು ; ಎರಡನೆಯದಾಗಿ ಆರ್ಥಿಕ ಸ್ವಾತಂತ್ರ್ಯ ಇಲ್ಲವೆ ಇರುವುದು ; ಮೂರನೆಯದಾಗಿ ಮನೆಕೆಲಸ ಹಾಗೂ ಮಕ್ಕಳ ಕೆಲಸಗಳ ಮಧ್ಯೆ ವಿಚಾರ ಮಾಡುವುದಕ್ಕೆ ಅವಕಾಶ ಇಲ್ಲದೇ ಇರುವುದು. ಈ ರೀತಿಯ ಒಂದು ಪರಿಸ್ಥಿತಿ ಇರುವುದರಿಂದ ಹೆಣ್ಣುಮಕ್ಕಳಾದವರು ೪ ಗೋಡೆಯ ಮಧ್ಯೆ ಮಾತ್ರ ಕಾಲ ದೂಡಬೇಕಾಗಿದೆ. ಕುಟುಂಬ ಯೋಜನೆಯ ಕಾರ್ಯಕ್ರಮ ಹೆಣ್ಣುಮಕ್ಕಳ ಉದ್ಧಾರದಲ್ಲಿ ಮೊದಲನೆ ಕಾರ್ಯಕ್ರಮವೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತೆ ಶಾಲೆಗೆ ಹೋಗತಕ್ಕ ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಲ್ಲದೆ ; ಶಾಲೆಗೆ ಹೋಗದೇ ಇರತಕ್ಕ ಹೆಣ್ಣುಮಕ್ಕಳಿಗೆ ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳ ಹೆಣ್ಣು ಮಕ್ಕಳಿಗೆ ಸಿನಿಮಾ, ನಾಟಕ, ಟೆಲಿವಿಷನ್ ಹಾಗೂ ರೇಡಿಯೊಗಳ ಮೂಲಕ ತಮ್ಮ ಕರ್ತವ್ಯದ ಅರಿವನ್ನು ಮೂಡಿಸುವಂಥ ಶಿಕ್ಷಣವನ್ನು ಕೊಡಬೇಕೆಂದು ಹೇಳುತ್ತೇನೆ ಇತ್ತೀಚೆಗೆ ಬಂದಿಗೆ ತಕ್ಕ ಕುಕ್ಕರ್ ಮತ್ತಿತರ ಆಧುನಿಕವಾದ ಅಡಿಗೆ ಮಾಡುವ ಸಾಮಾನುಗಳ ವಿಷಯಗಳನ್ನು ಕೂಡ ಅವರಿಗೆ ತಿಳಿಸುವಂತಾಗಬೇಕು. ಈ ದಿಸೆಯಲ್ಲಿ ಕೆಲಸ ಮಾಡಿದರೆ ಅದರಿಂದ ಹೆಚ್ಚಿನ ಉಪಯೋಗವಾಗುತ್ತದೆಂದು ಹೇಳಬಯಸುತ್ತೇನೆ. ಹೆಣ್ಣುಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸದೇ ಇರತಕ್ಕ ಪಾಲಕರಿಗೆ ದಂಡಹಾಕುವಂತ ಒಂದು ಕಾಯಿದೆಯನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಹೆಣ್ಣುಮಕ್ಕಳಿಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲದೆ, ದಾಸಾನುದಾಸಿಯರಾಗಿ ಕೆಲಸಮಾಡುವಂಥಾಗಿದೆ. ಹೆಣ್ಣುಮಕ್ಕಳು ಮನೆಗೆಲಸ ಮುಗಿಸಿಕೊಂಡು ಹಣ ಸಂಪಾದನೆ ಮಾಡುವುದಕ್ಕೆ ಬೇಕಾದಂಥ ಕೆಲಸಕಾರ್ಯಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಕೈಗಾರಿಕೆಗಳಲ್ಲಿ ಹಾಗೂ ಮತ್ತಿತರ ಸರ್ಕಾರಿ ರಂಗಗಳಲ್ಲಿ ಹೆಣ್ಣುಮಕ್ಕಳಿಗೆ ಕೆಲಸ ಒದಗಿಸಿ ಆಮೂಲಕ ಹಣ ಗಳಿಸುವಂಥ ಪ್ರವೃತ್ತಿಯನ್ನು ಬೆಳೆಸಿ ಕೊಳ್ಳುವಂಥ ವಿಚಾರವನ್ನು ಅವರಿಗೆ ತಿಳಿಸುವಂತಾಗಬೇಕು. ಹೆಣ್ಣುಮಕ್ಕಳು ಗಂಡಸರ ಅಧೀನರಾಗಿ ಎಷ್ಟೋ ತೊಂದರೆಗಳನ್ನು ಪಡುತ್ತಿರುವುದನ್ನು ನಾವು ಇವತ್ತು ನೋಡುತ್ತಿದ್ದೇವೆ. ಆದ್ದರಿಂದ ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆಯವರು ತೊಂದರೆಯಾದಂಥ ಹೆಣ್ಣುಮಕ್ಕಳ ವಿಚಾರದಲ್ಲಿ ಯಾವ ಕಾರ್ಯಕ್ರಮವನ್ನು ತೆಗೆದು ಕೊಂಡಂತೆ ಕಂಡುಬರುವುದಿಲ್ಲ. ನಾನು ಹಿಂದಿನಸಲವೂ ಹೇಳಿದ್ದೇನೆ ಹೆಣ್ಣುಮಕ್ಕಳ ಗೋಳಿನ ಕಣ್ಣೀರಿನ ಕಥೆಯನ್ನು ಸಾಕು ಮಾಡಲಿಕ್ಕೆ ವ್ಯವಸ್ಥಿತವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು. ಹೆಣ್ಣುಮಕ್ಕಳು, ಅತ್ತೆ ಮಾವ, ಮೈದುನರ ವಿರುದ್ಧ ವ್ಯಾಜ್ಯ ಹೂಡಲಿಕ್ಕೆ ಬರುವುದಿಲ್ಲ.

ಹೆಣ್ಣುಮಕ್ಕಳ ಮೇಲೆ ದಿನಬೆಳಗಾದರೆ ಸಮಾಜದಲ್ಲಿ ನಡೆಯುತಕ್ಕ ಹೀನಕೃತ್ಯಗಳನ್ನು ನೋಡುತ್ತಿದ್ದೇವೆ.......

ಶ್ರೀಮಂತಿ ರೇಣುಕಾ ರಾಜೇಂದ್ರನ್ :—ಲೀಗಲ್ ಅಡ್ವೈಸರುಗಳನ್ನು ನೇಮಕ ಮಾಡಿದ್ದಾರೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ:-ಅದಲ್ಲಾರೀ ಹೆಣ್ಣುಮಕ್ಕಳು ಕೋರ್ಟಿನಲ್ಲಿ ವ್ಯಾಜ್ಯ ಹೂಡಲಿಕ್ಕೆ ಬರುವುದಿಲ್ಲ. ಹೆಣ್ಣು ಮಕ್ಕಳಿಗೆ ಏನು ತೊಂದರೆಯಾಗಿದೆ ಎಂಬುದನ್ನು ಗುಪ್ತವಾಗಿ ಕೇಳಿಕೊಂಡು ತೊಂದರೆಯನ್ನು ಪರಿಹಾರಮಾಡಲಿಕ್ಕೆ ವ್ಯವಸ್ಥೆ ಮಾಡಬೇಕು. ಹಣದ ಸಹಾಯ ಬೇಕಾಗಿದ್ದರೆ; ಅದನ್ನು ಕೂಡ ಮಾಡಬೇಕು ಮರ್ಯಾದಸ್ಥ ಹೆಣ್ಣುಮಕ್ಕಳು ತೊಂದರೆಗೆ ಗುರಿಯಾಗಿ ಇವತ್ತು ಎಷ್ಟೋ ಜನ ಪರಿತಪಿಸುವುದನ್ನು ನಾವು ನೋಡುತ್ತಿದ್ದೇವೆ. ಅಂಥವರ ಸಹಾಯಕ್ಕೆ ಈ ಶಾಖೆಯವರು ಸೂಕ್ತವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಸ್ವಾಮಿ, ಈ ದೇಶದ ಉದ್ಧಾರ ಬರೀ ಪುರುಷರಿಂದ ಮಾತ್ರವಲ್ಲ; ಮಹಿಳೆಯರಿಂದಲೂ ಆಗಬೇಕು ಹೆಣ್ಣು ಮಕ್ಕಳಲ್ಲಿರತಕ್ಕ ಒಳ್ಳೆಯ ಗುಣಗಳು ಸಮಾಜಕ್ಕೆ ಆ ಮೂಲಕ ಜಗತ್ತಿಗೆ ಸಿಗುವಂತಾಗಬೇಕು. ಹೆಣ್ಣುಮಕ್ಕಳಿಗೆ ಪ್ರಾತಿನಿಧ್ಯ ಹೆಚ್ಚು ಹೆಚ್ಚು ಸಿಗುವಂತಾಗಬೇಕು; ಈ ದಿಶೆಯಲ್ಲಿ ಸಂಬಂಧಪಟ್ಟ ಮಹಿಳಾ ಮತ್ತು ಶಿಶು ಕಲ್ಯಾಣ ಶಾಖೆಯ ಮಂತ್ರಿಗಳು ಸೂಕ್ತ ಯೋಜನೆಗಳನ್ನು ಹಾಕಿಕೊಳ್ಳಲಿ ಎಂದು ಕೇಳಿಕೊಂಡು, ನನಗೆ ಮಾತನಾಡಲು ಅವಕಾಶಕೊಟ್ಟ ಸಭಾಧ್ಯಕ್ಷರಿಗೆ ಆಭಾರ ಮನ್ನಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ರೇಣುಕಾರಾಜೇಂದ್ರನ್ (ಚಿಕ್ಕಬಳ್ಳಾಪುರ) :— ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ನಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವೆ ಅವರು ಸಭೆಯ ಮುಂದೆ ತಂದಿರತಕ್ಕ ಡಿಮ್ಯಾಂಡನ್ನು ನಾನು ಅತ್ಯಂತ ಆದರರಿಂದ ಸ್ವಾಗತಿಸುತ್ತೇನೆ; ಮತ್ತು ಇದರ ಬಗ್ಗೆ ಕೇವಲ ಒಂದೆರಡು ವಿಷಯಗಳನ್ನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಕರ್ನಾಟಕದ ೧೯ ಜಿಲ್ಲೆಗಳಲ್ಲೂ ಕೂಡ ಐ.ಸಿ.ಡಿ.ಎಸ್. ಸ್ಕೀಂ ಎಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದೀರಿ, ಇದು ಒಳ್ಳೆಯ ಯೋಜನೆಯಾದರೂ ಕೂಡ ಈ ಇಲಾಖೆಗೆ ಒದಗಿಸಿರುವ ಹಣ ಕೇವಲ ೬ಕೋಟಿ ರೂಪಾಯಿಗಳು. ಇದು ಏನೇನೂ ಸಾಲದಾಗಿದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳನ್ನು ಒತ್ತಾಯ ಮಾಡಿ ಈ ಯೋಜನೆಗೆ ಇನ್ನೂ ಹೆಚ್ಚಿನ ಹಣವನ್ನು ತಾವು ತೆಗೆದುಕೊಂಡು ಹೆಚ್ಚು ಹೆಚ್ಚು ಬ್ಲಾಕ್‌ಗಳನ್ನು ತೆರೆಯಬೇಕು. ನಮ್ಮ ರಾಜ್ಯ ಸರ್ಕಾರದ ಹಣದ ಜೊತೆಗೆ ಕೇಂದ್ರ ಸರ್ಕಾರದಿಂದಲೂ ಕೂಡ ನೆರವನ್ನು ಪಡೆಯಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ ಮಾನ್ಯ ಸಚಿವೆ ಅವರನ್ನು ಶ್ಲಾಘಿಸಬಯಸುತ್ತೇನೆ. ಕಾರಣ ಏನೆಂದರೆ, ಕಳೆದ ವರ್ಷ ಈ ಸದನದಲ್ಲಿ ಉತ್ತರ ಕೊಡುತ್ತಾ ಏನು ಹೇಳಿದ್ದರು ಅಂದರೆ ಒಂದು ವಿಮೆನ್ಸ್ ಫೈನಾನ್ಷಿಯಲ್ ಕಾರ್ಪೊರೇಷನ್‌ನ್ನು ತೆರೆಯುತ್ತೇವೆಂದು. ಅವರು ಅಂದು ಏನು ನುಡಿದಿದ್ದರು ಅದರಂತೆ ನಡೆದು ತೋರಿಸಿದ್ದಾರೆ. ಹೇಗೆಂದರೆ ವಿಮೆನ್ಸ್ ಕೋ-ಆಪರೇಟಿವ್ ಫೆಡರೇಷನ್ ಎಂದು ಮಾಡಿ ಅದನ್ನು ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರ್ ಕೂಡ ಮಾಡಿಸಿದ್ದಾರೆ. ಇದಕ್ಕಾಗಿ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಇದಕ್ಕೆ ಹಾಕಿರತಕ್ಕ ಬಂಡವಾಳ ಬಹಳ ಕಡಿಮೆ ಇರುವುದರಿಂದ ನಮ್ಮ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ಇನ್ನೂ ಹೆಚ್ಚಿನ ಬಂಡವಾಳವನ್ನು ಇದರಲ್ಲಿ ತೊಡಗಿಸಬೇಕೆಂದು ಹೇಳಬಯಸುತ್ತೇನೆ.

ಇನ್ನು ವರದಕ್ಷಿಣೆ ವಿಚಾರದಲ್ಲಿ ಒಂದು ಮಾತ್ತು ಹೇಳುವುದಾದರೆ, ಶ್ರೀಮತಿ ಪ್ರಮೀಳಾರವರು ಮಾತನಾಡುತ್ತಾ ಇತ್ತೀಚೆಗೆ ವರದಕ್ಷಿಣೆ ಹಾವಳಿ ಬಹಳವಾಗಿದೆ ಎಂದು ಹೇಳಿದರು. ಇದಕ್ಕೆ ನಾನು ಹೇಳುವುದಾದರೆ, ಅವರ ಜನಾಂಗದಲ್ಲಿ ಇದ್ದ ವರದಕ್ಷಿಣೆ ಪದ್ಧತಿ ಹೆಚ್ಚು ಹೆಚ್ಚು ಬೆಳೆದುಕೊಂಡು ಬಂದು ಈಗ ನಮ್ಮ ಹರಿಜನರಲ್ಲೂ ಕೂಡ ಹರಡಿಕೊಂಡಿದೆ. ಹಿಂದಿನ ಕಾಲದಲ್ಲಿ ನಮ್ಮ ಹೆಣ್ಣುಮಕ್ಕಳಿಗೆ ಗಂಡಿನ ಕಡೆಯವರೇ ಒಡವೆ, ವಸ್ತ್ರ ಎಲ್ಲವನ್ನೂ ತಂದು ಇಟ್ಟು ಮದುವೆ ಮಾಡಿಕೊಂಡು ಹೋಗುತ್ತಿದ್ದರು. ನಮ್ಮ ಜಾತಿಗೂ ವರದಕ್ಷಿಣೆ ಪಿಡುಗು ಹರಡುವಂತೆ ಮಾಡಿದವರು ಅವರೆ. ಅದನ್ನು ಇವತ್ತು ಆಚರಣೆ ಮಾಡಬಾರದೆಂದು ಹೇಳುತ್ತಿದ್ದಾರೆ.

ಶ್ರೀಮತಿ ಎಸ್. ಪ್ರಮೀಳ :—ಅದಕ್ಕೇ ನಾನು ಮಗುವೆ ಆಗಿಲ್ಲ.

ಶ್ರೀಮತಿ ರೇಣುಕಾ ರಾಜೇಂದ್ರನ್ :— ನಾವು ವರದಕ್ಷಿಣೆ ಕೊಡುವುದಿಲ್ಲ ಎಂದು ಹೇಳಿದರೆ ಯಾವ ಗಂಡೂ ಕೂಡ ನಾನು ಹಾಗೆಯೇ ಮದುವೆಯಾಗುತ್ತೇನೆ ಎಂದು ಮುಂದೆ ಬರುವುದಿಲ್ಲ. ಇವತ್ತು ಇದನ್ನು ಕಾಗ್ನಿಜಿಬಲ್ ಅಫೆನ್ಸ್ ಎಂದು ಮಾಡಿ ಅದರ ವರದಕ್ಷಿಣೆ ತೆಗೆದುಕೊಳ್ಳುವವರನ್ನು ಕಂಡು

ಹಿಡಿಯಬೇಕೆಂದು ಹೇಳುತ್ತಿದ್ದೀರಿ. ಈ ಕಾನೂನು ಮಾಡುವುದಾದರೆ ನಮ್ಮ ಸರ್ಕಾರಕ್ಕೆ ಕೆಟ್ಟ
ಹೆಸರು ಬರುತ್ತದೆ. ನಿಮ್ಮ ಸರ್ಕಾರ ಇರುವ ಕಡೆಗಳಲ್ಲಿ ಬೇಕಾದರೆ ಮೊದಲು ಈ ಕಾನೂನು ಮಾಡಿ
ತೋರಿಸಿದರೆ ಅನಂತರ ನಾವು ನಿಮ್ಮ ನೀತಿಯನ್ನೇ ಅನುಸರಿಸುತ್ತೇವೆ.

ಇನ್ನು ರಾಜ್ಯದಲ್ಲಿರತಕ್ಕ ೩೪ ವಿಮೆನ್ಸ್ ವೆಲ್‌ಫೇರ್ ಸೆಂಟರ್‌ಗಳು ಬಹಳ ಚೆನ್ನಾಗಿ ಕೆಲಸ
ಮಾಡುತ್ತಿವೆ, ಆದರೆ ಅಲ್ಲಿ ನಡೆಯತಕ್ಕ ಕಾರ್ಯಕ್ರಮಗಳಿಗೆ ನಮ್ಮ ರಾಜ್ಯ ಸರ್ಕಾರದ ಹಣಕಾಸಿನ
ಇಲಾಖೆಯವರು ಕಾಲಕ್ಕೆ ಸರಿಯಾಗಿ ಗ್ರಾಂಟ್ ರಿಲೀಸ್ ಮಾಡುತ್ತಿಲ್ಲ. ನಾನು ಕೂಡ ಒಬ್ಬ ಸದಸ್ಯೆ ಆಗಿ ಕೆಲಸ
ಮಾಡುತ್ತಿದ್ದೇನೆ. ಆದ್ದರಿಂದ ನಾನು ಹೇಳುವುದೇನೆಂದರೆ, ಈ ವಿಮೆನ್ಸ್ ವೆಲ್‌ಫೇರ್ ಸೆಂಟರ್‌ಗಳನ್ನು
ಸರ್ಕಾರವೇ ವಹಿಸಿ ಕೊಳ್ಳುವುದು ಸೂಕ್ತ ಎಂದು. ಈ ಸೆಂಟರ್‌ಗಳಿಗೆ ಸಂಬಂಧಪಟ್ಟ ಮುನಿಸಿಪಾಲಿಟಿ
ಯವರೂ ಹಾಗೂ ಡಿಸ್ಟ್ರಿಕ್ಟ್ ಬೋರ್ಡ್‌ನವರೂ ತಮ್ಮ ಆದಾಯದಲ್ಲಿ ೧೦ ಪರ್ಸೆಂಟ್ ಅನುದಾನ
ವನ್ನು ಕೊಡಬೇಕಾಗಿದೆ. ಆದರೆ ಅವರು ಅದನ್ನು ಕೊಡುತ್ತಿಲ್ಲ. ಆದ್ದರಿಂದ ಇನ್ನು ಮುಂದೆ ಮುನಿಸಿ
ಪಾಲಿಟಿಗಳವರು ಹಾಗೂ ಡಿಸ್ಟ್ರಿಕ್ಟ್ ಬೋರ್ಡ್‌ನವರೂ ತಮ್ಮ ಆದಾಯದಲ್ಲಿ ೧೦ ಪರ್ಸೆಂಟ್ ಹಣವನ್ನು
ಕಡ್ಡಾಯವಾಗಿ ಇದಕ್ಕೆ ಕೊಡಬೇಕೆಂದು ಒಂದು ಆದೇಶವನ್ನು ಸರ್ಕಾರದವರು ಕೊಡಬೇಕು. ಇವತ್ತು ನಮ್ಮ
ರಾಜ್ಯದಲ್ಲಿ ಬಾಲವಾಡಿಗಳು ಎಲ್ಲೆಲ್ಲಿ ನಡೆಯುತ್ತಿವೆ ಅವು ಏನೇನೂ ಸಾಲದಾಗಿದೆ, ಈ ಬಾಲವಾಡಿ
ಗಳು ಇರುವುದು ದುಡಿಯುವ ಮಹಿಳೆಯರ ಮಕ್ಕಳಿಗಾಗಿ. ಆದ್ದರಿಂದ ೧೦ ಪರ್ಸೆಂಟ್ ಅನುದಾನ
ವನ್ನು ಕಡ್ಡಾಯವಾಗಿ ಕೊಡಿಸುವಂತೆ ವ್ಯವಸ್ಥೆ ಮಾಡಬೇಕು, ಇಲ್ಲವೇ ಈ ಬಾಲವಾಡಿಗಳನ್ನು ಸರ್ಕಾರ
ದವರೇ ವಹಿಸಿಕೊಳ್ಳಬೇಕು. ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ.

ಇನ್ನು ಇದು ಅಂತರ್‌ರಾಷ್ಟ್ರೀಯ ಮಕ್ಕಳವರ್ಷವಾದ್ದರಿಂದ ರಾಜ್ಯದ ಎಲ್ಲಕಡೆಗಳಲ್ಲೂ ಈ ವರ್ಷ
ಬಾಲಭವನಗಳನ್ನು ತೆಗೆಯುವುದಾಗಿ ಹೇಳಿದ್ದೀರಿ, ಈಗ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಒಂದು
ಬಾಲಭವನ ಇದೆ. ಇದನ್ನು ಪೂರ್ಣವಾಗಿ ಸರ್ಕಾರದ ವತಿಯಿಂದಲೇ ನಡೆಸಬೇಕೆಂದು ಮಾಡಿದ್ದೀರಿ.
ಇಲ್ಲಿ ಮಕ್ಕಳಿಗೆ ಬೇಕಾದ ಪ್ರತಿಯೊಂದು ಮನರಂಜನೆಯೂ ಕೂಡ ಇದೆ, ಆದರೆ ಗ್ರಾಮಾಂತರದಿಂದ
ಬರತಕ್ಕ ಮಕ್ಕಳು ವರ್ಷದಲ್ಲಿ ಎಂದೋ ಒಂದು ದಿವಸ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಬರುತ್ತಾರೆ. ಅಲ್ಲಿ
ಅವರಿಗೆ ಯಾವ ಮನರಂಜನೆಯೂ ಇರುವುದಿಲ್ಲ. ಅದಕ್ಕಾಗಿ ನಾವು ೨೦ ಪರ್ಸೆಂಟ್ ಹಾಕಿದರೆ ಸರ್ಕಾರ
ದವರೂ ೨೦ ಪರ್ಸೆಂಟ್ ಹಾಕುತ್ತೀರಿ. ಇದು ಯಾವ ಮೂಲೆಗೂ ಸಾಕಾಗುವುದಿಲ್ಲ. ಆದ್ದರಿಂದ
ನಾನು ಹೇಳುವುದೇನೆಂದರೆ ತಾಲ್ಲೂಕು ಮಟ್ಟದಲ್ಲಿ ಬಾಲಭವನಗಳನ್ನು ತೆರೆದು ಅವುಗಳನ್ನು ಸಂಪೂರ್ಣವಾಗಿ
ಸರ್ಕಾರದವರೇ ನೋಡಿಕೊಳ್ಳಬೇಕು. ಬೆಂಗಳೂರಿನಲ್ಲಿರತಕ್ಕ ಬಾಲಭವನಕ್ಕೆ ತಾವು ಅಧ್ಯಕ್ಷರಾಗಿದ್ದೀರಿ.
ಅಲ್ಲಿಗೆ ಇನ್ನೊಬ್ಬ ಉಪಾಧ್ಯಕ್ಷರು ಇರಬೇಕಾದ ಅವಶ್ಯಕತೆ ಇಲ್ಲ. ಅವರು ಇದ್ದರೆ ಅವರಿಗೆ ಒಂದು
ಕಾರು ಒಂದು ಫೋನು, ತಿಂಗಳು ಸಂಬಳ ಎಲ್ಲಾ ಕೊಡಬೇಕಾಗುತ್ತದೆ. ಆದುದರಿಂದ ಉಪಾಧ್ಯಕ್ಷರ
ಹುದ್ದೆ ಅನಾವಶ್ಯಕವಾಗಿರುವುದರಿಂದ ಅದನ್ನು ಅಬಾಲಿಷ್ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಕೊನೆಯದಾಗಿ ಒಂದು ಮಾತು ಹೇಳುವುದಾದರೆ ಶ್ರೀಮತಿ ಮನೋರಮಾ ಮಧ್ವರಾಜ್
ರವರಿಗೆ ಒಂದು ಕಳಪೆ ಖಾತೆಯನ್ನು ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ
ಹೇಳಿದರು. ಕಳಪೆ ಖಾತೆ ಎಂದು ಅವರೇ ಇದನ್ನು ಕರೆಯುವುದಾದರೆ, ಸರ್ಕಾರದ ವತಿಯಿಂದ ಇದಕ್ಕೆ
ಯಾವ ಸಹಾಯವೂ ಸಿಕ್ಕುವುದಿಲ್ಲ ಎನ್ನುವ ಮಾತನ್ನು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ
ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಾಸ್ಕರಶೆಟ್ಟಿ ;—ಸ್ವಾಮಿ ಈಗಾಗಲೇ ೬ ಗಂಟೆಯಾಗಿರುವುದರಿಂದ ನಾಳೆ ಪುನಃ ಇದರು
ಚರ್ಚೆಗೆ ಅವಕಾಶಕೊಟ್ಟು, ಅದಾದಮೇಲೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬಹುದೆಂದು
ಹೇಳುತ್ತೇನೆ.

MR CHAIRMAN :—The House stands abjourned to meet tomorrow at 12-00 P.M. the half on hour discussion listed for today is postponed.

The House adjourned at Six of the clock to meet again at Twelve of the clock on Thursday the 17th May 1979

W. D. 648